ಬುಡಕಟ್ಟು ಅಧ್ಯಯನ

ಸಂಪುಟ ೩ ಸಂಚಿಕೆ ೧
ಜನವರಿ–ಜೂನ್ ೨೦೦೬



ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬುಡಕಟ್ಟು ಅಧ್ಯಯನ

ಬುಡಕಟ್ಟು ಅಧ್ಯಯನ

ಸಂಪಾದಕರು

ಡಾ ಕೆ ಎಂ ಮೇತ್ರಿ

ಡಾ ಚಲುವರಾಜು

ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

Budakattu Adhyayana
Tribal Studies, Bi-Annual
Vol. III, Issue I, January-June 2006
Edited by
Dr K M Metry
Dr Chaluvaraju
Department of Tribal Studies
Kannada University, Hampi
Vidyaranya 583 276
Pages: viii + 176 **Price: Rs. 50/-**
www.kannadauniversity.org

ಅರ್ಧವಾರ್ಷಿಕ, ಸಂಪುಟ ೩, ಸಂಚಿಕೆ ೧, ಜನವರಿ-ಜೂನ್ ೨೦೦೬

ಪ್ರಕಟಣೆ
ಪ್ರೊ ಮಲ್ಲೇಪುರಂ ಜಿ ವೆಂಕಟೇಶ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಬೆಲೆ : ರೂ. ೫೦.೦೦

ವಾರ್ಷಿಕ ಚಂದಾ ವ್ಯಕ್ತಿಗಳಿಗೆ : ರೂ. ೮೦.೦೦
ವಾರ್ಷಿಕ ಚಂದಾ ಸಂಸ್ಥೆಗಳಿಗೆ : ರೂ. ೧೦೦.೦೦
ತ್ರೈವಾರ್ಷಿಕ ಚಂದಾ ವ್ಯಕ್ತಿಗಳಿಗೆ : ರೂ. ೨೦೦.೦೦
ತ್ರೈವಾರ್ಷಿಕ ಚಂದಾ ಸಂಸ್ಥೆಗಳಿಗೆ : ರೂ. ೨೫೦.೦೦

ಮುಖಪುಟ : ಕೆ ಕೆ ಮಕಾಳಿ

ಅಕ್ಷರ ಸಂಯೋಜನೆ
ವಿದ್ಯಾರಣ್ಯ ಗಣಕ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮುದ್ರಣ
ಆದಿತ್ಯ ಪ್ರಿಂಟರ್ಸ್, ಬೆಂಗಳೂರು

ಸಂಪಾದಕೀಯ

ವಿಶ್ವವಿಖ್ಯಾತ ಹಂಪಿಯ ಪರಿಸರದಲ್ಲಿ ಕನ್ನಡ ವಿಶ್ವವಿದ್ಯಾಲಯವು ೧೯೯೧ ರಲ್ಲಿ ಕನ್ನಡಪರ ಮಹದಾಶೆಗಳನ್ನು ಇಟ್ಟುಕೊಂಡು ಜನ್ಮ ತಾಳಿದೆ. ಇದರ ಒಡಲಲ್ಲಿ ಬುಡಕಟ್ಟು ಅಧ್ಯಯನ ವಿಭಾಗವು ೧.೭.೧೯೯೪ ರಂದು ಬುಡಕಟ್ಟುಪರ ಶೋಧಕಾರ್ಯಕ್ಕಾಗಿ ಮೈದಳೆದಿದೆ. ನೂರಾರು ಅಧ್ಯಯನಕಾರರು ಇಲ್ಲಿ ಎಂ ಫಿಲ್ ಮತ್ತು ಪಿಎಚ್ ಡಿ ಪದವಿಗಳಿಗಾಗಿ ನೋಂದಾಯಿಸಿಕೊಂಡು ಶೋಧಕಾರ್ಯ ನಡೆಸಿ ಪದವಿಗಳನ್ನು ಪಡೆದಿದ್ದಾರೆ ಮತ್ತು ಪಡೆಯುತ್ತಲಿದ್ದಾರೆ. ವಿಭಾಗವು ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಪ್ರಾಯೋಜಿತ ವಿಶೇಷ ಸಹಾಯ ಕಾರ್ಯಕ್ರಮದ ಅಡಿಯಲ್ಲಿ ಕರ್ನಾಟಕ ಬುಡಕಟ್ಟುಗಳ ಸಾಮಾಜಿಕಾರ್ಥಿಕ ಅಧ್ಯಯನ ಮುಂದುವರೆಸಿದೆ. ಕರ್ನಾಟಕ ಸರಕಾರದ ಶ್ರೀ ಡಿ ದೇವರಾಜ ಅರಸ ಸಂಶೋಧನಾ ಸಂಸ್ಥೆಯ ಪ್ರಾಯೋಜನೆಯಲ್ಲಿ ಕರ್ನಾಟಕದ ಅಲೆಮಾರಿ, ಅರೆಅಲೆಮಾರಿ ಸಮುದಾಯಗಳ ಸಾಮಾಜಿಕಾರ್ಥಿಕ ಅಧ್ಯಯನ ಕೈಗೊಂಡಿದೆ. ಕರ್ನಾಟಕ ಸರಕಾರದ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ಬುಡಕಟ್ಟು ಸಂಶೋಧನ ಸಂಸ್ಥೆ ಪ್ರಾಯೋಜಿತ ಹಲವಾರು ಬುಡಕಟ್ಟುಪರ ಸಂಶೋಧನೆ, ವಿಚಾರ ಸಂಕಿರಣ ಮತ್ತು ತರಬೇತಿಯಂತಹ ಯೋಜನೆಗಳನ್ನು ಹಮ್ಮಿಕೊಂಡಿದೆ. ಬುಡಕಟ್ಟುಗಳ ಎಲ್ಲ ಮಗ್ಗಲುಗಳನ್ನು ಪರಿಚಯಿಸಲು ೨೦೦೩ ರಿಂದ ಬುಡಕಟ್ಟು ಅಧ್ಯಯನ ಎಂಬೀ ಷಣ್ಮಾಸಿಕ ನಿಯತಕಾಲಿಕೆಯನ್ನೂ ಆರಂಭಿಸಿದೆ. ಇದುವರೆಗಿನ ಪ್ರಕಟಿತ ನಾಲ್ಕೂ ಸಂಚಿಕೆಗಳು ಸಂಶೋಧಕರ ಹಾಗೂ ಸಂಪಾದಕರ ಸಹಕಾರದಿಂದ ಬುಡಕಟ್ಟು ಪ್ರಪಂಚವನ್ನು ಅನಾವರಣಗೊಳಿಸುವಲ್ಲಿ ಸಹಕಾರಿಯಾಗಿವೆ.

೨೦೦೧ ರ ಜನಗಣತಿಯ ಪ್ರಕಾರ ಕರ್ನಾಟಕದ ೪೯ ಬುಡಕಟ್ಟುಗಳ ಜನಸಂಖ್ಯೆ ೩೪,೬೩,೯೮೬ (ಶೇಕಡ ೬.೫೫). ಇಂದು ಕರ್ನಾಟಕ ರಾಜ್ಯದಲ್ಲಿ ಸಂವಿಧಾನಬದ್ಧವಾಗಿ ೫೦ ಬುಡಕಟ್ಟುಗಳಿವೆ. ಇವರ ಶ್ರೆಯೋಭಿವೃದ್ಧಿಗಾಗಿ ಸರಕಾರ, ಸಮಾಜ ಮತ್ತು ಸಂಘ ಸಂಸ್ಥೆಗಳು ಹಲವಾರು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವಲ್ಲಿ ನಿರತವಾಗಿವೆ. ಬುಡಕಟ್ಟು ಸಾಹಿತ್ಯ,ಸಂಶೋಧನೆ, ಬುಡಕಟ್ಟುಪರ ಯೋಜನೆಗಳ ಕುರಿತು ಈ ನಿಯತಕಾಲಿಕೆ ಬೆಳಕು ಚೆಲ್ಲುತ್ತದೆ. ಬುಡಕಟ್ಟುಗಳ ಜ್ವಲಂತ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಹುಡುಕುವ ಮಹದಾಶೆಯು ಬುಡಕಟ್ಟು ಅಧ್ಯಯನ ನಿಯತಕಾಲಿಕೆಯದಾಗಿದೆ.

ಈ ಸಂಚಿಕೆಗೆ ಡಾ ಮಂಜುನಾಥ ಬೇವಿನಕಟ್ಟಿ, ಡಾ ಎಂ ಗುರುಲಿಂಗಯ್ಯ, ಡಾ ಆರ್ ಬಿ ಕುಮಾರ್, ಡಾ ಮೊಗಳ್ಳಿ ಗಣೇಶ್, ಡಾ ಚನ್ನಣ್ಣ ವಾಲೀಕಾರ, ಶ್ರೀ ಬಿ ಟಿ ರಾಮಪ್ಪ, ಶ್ರೀ ಎಂ ಶ್ರೀರಾಮ, ಶ್ರೀ ರೇವಣ್ಣ, ಡಾ ಎಸ್ ಎಸ್ ಅಂಗಡಿ, ಡಾ ಕೇಶವನ್ ಪ್ರಸಾದ್ ಕೆ ಮರಟ್ಟಿ, ಶ್ರೀ ಕೆ ವಿವೇಕ ವಿನಾಯಕ, ಡಾ ಕೆ ಎಂ ಮೇತ್ರಿ ಅವರುಗಳು ಅಮೂಲ್ಯವಾದ ಲೇಖನಗಳನ್ನು ನೀಡಿದ್ದಾರೆ. ಅವರುಗಳಿಗೆ ನಾವು ಋಣಿಯಾಗಿದ್ದೇವೆ.

ಓದುಗರಾದ ತಾವುಗಳು ಬುಡಕಟ್ಟು ಕ್ಷೇತ್ರದಲ್ಲಿ ಅಧ್ಯಯನಶೀಲರು. ಹೀಗಾಗಿ ಬುಡಕಟ್ಟು ಲೋಕವನ್ನು ಅನಾವರಣಗೊಳಿಸುವ ಲೇಖನಗಳನ್ನು ತಮ್ಮಿಂದ ಮುಂದಿನ ಸಂಚಿಕೆಗೆ ಅಪೇಕ್ಷಿಸುತ್ತೇವೆ. ಜೊತೆಗೆ ತಾವುಗಳು ಈ ನಿಯತಕಾಲಿಕೆಗೆ ಚಂದಾದಾರರಾಗಿ ಮತ್ತು ತಮ್ಮ ಸ್ನೇಹಿತರಿಗೂ, ಸಂಘ ಸಂಸ್ಥೆಗಳಿಗೂ ಚಂದಾದಾರರನ್ನಾಗಿಸಿ ಸಹಕರಿಸುತ್ತಿರೆಂದು ಆಶಿಸುತ್ತೇವೆ.

ಸಂಪಾದಕರು

ಪರಿವಿಡಿ

೧

ಬುಡಕಟ್ಟು ಚಹರೆಯ ಪರಿವೇಷದೊಳಗಿನ ಕೆಲವು ತಾತ್ವಿಕ ಸಮಸ್ಯೆಗಳು: ಒಂದು ಚರ್ಚೆ

ಡಾ ಮಂಜುನಾಥ ಬೇವಿನಕಟ್ಟಿ

[ಜಾನಪದ ತಜ್ಞರಾದ ಪ್ರೊ ಮಂಜುನಾಥ ಬೇವಿನಕಟ್ಟಿ ಅವರು ಬುಡಕಟ್ಟುಗಳ ಚಹರೆಯ ಸ್ಥಿತ್ಯಂತರ ಪ್ರಕ್ರಿಯೆಯನ್ನು ಉದಾಹರಣೆಗಳ ಮೂಲಕ ವೈಜ್ಞಾನಿಕ ವಾಗಿ ಮಂಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಈ ಲೇಖನ ಬದಲಾಗುತ್ತಿರುವ ಬುಡಕಟ್ಟುಗಳ ಸ್ವರೂಪ ಅರಿಯುವಲ್ಲಿ ಸಹಕಾರಿ ಯಾಗುವುದು.]

'Cultural Identity'ಗೆ ಸಮನಾರ್ಥವಾಗಿ 'ಸಾಂಸ್ಕೃತಿಕ ಅನನ್ಯತೆ' ಎಂಬ ಪದವನ್ನು ಬಳಸುತ್ತಿದ್ದೇವೆ. ಈ ಪದದ ಬಳಕೆಯ ಸೂಕ್ತತೆಯ ಬಗೆಗೆ ಹಿರಿಯ ವಿದ್ವಾಂಸರಾದ ಡಾ.ಕೆ.ವಿ.ನಾರಾಯಣ ಅವರು ಖಾಸಗಿ ಚರ್ಚೆಯಲ್ಲಿ 'Cultural Identity'ಪದಕ್ಕೆ 'ಸಾಂಸ್ಕೃತಿಕ ಅನನ್ಯತೆ' ಸೂಕ್ತ ಪದ ಆಗುವುದಿಲ್ಲ, ಐಡೆಂಟಿಟಿಗೆ ಸರಿಯಾದ ಪದವನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನೋಡಿದಾಗ ಚಹರೆ ಅಥವಾ ಗುರುತು ಆಗುತ್ತದೆ ಎಂದು ಹೇಳುತ್ತಾರೆ. ಸಂಸ್ಕೃತಿಗಳು 'ಚಹರೆ'ಗಳನ್ನು ಹೊಂದಿರುತ್ತವೆ ಹೊರತು ಅನನ್ಯತೆಯನ್ನಲ್ಲ. ಹಾಗಾಗಿ 'Cultural Identity'ಗೆ ಸಾಂಸ್ಕೃತಿಕ ಚಹರೆ ಎಂಬ ಪದವನ್ನು ಉಪಯೋಗಿಸಿದ್ದೇನೆ(ಮಂಜುನಾಥ ಬೇವಿನಕಟ್ಟಿ; ೨೦೦೪, ೧೧). ಮೇಲಿನ ಅಂಶವನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ಪ್ರಬಂಧದಲ್ಲಿಯೂ'Tribal Identity' 'ಬುಡಕಟ್ಟು ಚಹರೆ' ಎಂಬ ಪದವನ್ನು ಬಳಸಿದ್ದೇನೆ.

ಪ್ರೊ.ಲಾರಿ ಹಾಂಕೋ ಅವರು ಹೀಗೆ ಬರೆಯುತ್ತಾರೆ: The Systematic Character of tradition prevails, but it is not just general but specific and concrete. From this point of view, identity acts as an ordering principle of the second degree. part of the collective tradition is singled out and made to represent the group in cultural communication. These traditions may refer to language, geographical location, music, dance, costume, architecture,

history, myth, ritual etc. There may be emblems such as flags, colours, names. The selection of iteams may look paculiar, but it is not to be judged by external form or by content only, because each thing and behaviour stands for more than is itself, it has a symbolic meaning. The identity group is united by meaning and emotion, which pervade the symbols selected and represent its sense of cohesion and togetherness"(Lauri Honko; 1988, 11)

ಉಲ್ಲಾ ಬ್ರುಕ್ ಅವರು 'ಒಂದು ನಿರ್ದಿಷ್ಟ ಸಂಸ್ಕೃತಿಯ ಚಹರೆಗೆ ಮೂರು ಗುಣಗಳು ಬೇಕಾಗುತ್ತವೆ' ಎನ್ನುತ್ತಾರೆ. ಅವುಗಳೆಂದರೆ

೧. ಸಾಮ್ಯ (Similarity): ಆ ಸಂಸ್ಕೃತಿಯಲ್ಲಿನ ಸಮಾನ ಎನ್ನಬಹುದಾದ ಕೆಲವು ವಸ್ತು, ವ್ಯಕ್ತಿ ಅಥವಾ ಪರಿಕಲ್ಪನೆಗಳು ಬೇಕಾಗುತ್ತವೆ.

೨. ನಿರಂತರತೆ (Continuity): ಬೇರೆ ಬೇರೆ ಕಾಲ ಮತ್ತು ಸಂದರ್ಭಗಳಲ್ಲಿ ನಿರಂತರವಾಗಿ ಉಳಿದು ಬಂದಿರುವ ಕೆಲವು ಅಂಶಗಳು ಇರಬೇಕಾಗುತ್ತವೆ.

೩. ಅಂಗೀಕಾರಾರ್ಹ ಅಂಶ (Legitimising): ವ್ಯಕ್ತಿಯ ಅಥವಾ ಸಮುದಾಯದ ನಡವಳಿಯನ್ನು ನ್ಯಾಯ ಸಮ್ಮತಗೊಳಿಸಿಕೊಳ್ಳುವ ಅಂಶ ಇರಬೇಕಾಗುತ್ತದೆ. (Bruck Ulla; 1998, 78)

ಮೇಲಿನ ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ನೋಡಿದಾಗ ಸಂಸ್ಕೃತಿಯಲ್ಲಿರುವ ಉನ್ನತ ಮೌಲ್ಯ ಹಾಗೂ ಧೋರಣೆಗಳನ್ನು ವಿವರಿಸುವುದೇ ಚಹರೆಯ ಗುರಿಯಾಗಿದೆ. ಸಂಸ್ಕೃತಿ ಇರುವುದು ವಸ್ತುಗಳಲ್ಲಲ್ಲ, ಅದು ಜನ ವಸ್ತುಗಳನ್ನು ನೋಡುವ ರೀತಿ, ಬಳಸುವ ಬಗೆ ಮತ್ತು ಅದನ್ನು ಕುರಿತು ಆಲೋಚಿಸುವ ರೀತಿಯಲ್ಲಿದೆ. ಸಂಸ್ಕೃತಿಯನ್ನು ಭೌತಾತೀತವಾಗಿ ಲಕ್ಷಿಸದೆ ನಿಗದಿತ ಮಾನಗಳಿಗೆ, ನಿಯಮಗಳಿಗೆ ಹಾಗೂ ಸಂಕೇತಗಳಿಗೆ ಅನ್ವಯಿಸಿ ಮಾನವ ನಡತೆಯನ್ನು ಗೌರವಿಸುವ ಹಾಗೂ ಜನತೆ ಮುಕ್ತ ನಿರ್ಣಯ ಕೈಗೊಳ್ಳಲು ಸಾಧ್ಯವಾಗುವಂತ ಮಾರ್ಗದರ್ಶನ ನೀಡುವ ಸಾಧನವಾಗಿ ನೋಡಲಾಗಿದೆ. ಅಂದರೆ ಒಂದೊಂದು ಜಾತಿ, ಒಂದು ಭಾಷೆಯನ್ನಾಡುವ ಜನವರ್ಗ, ಒಂದು ಪ್ರದೇಶದಲ್ಲಿ ವಾಸಿಸುವ ಜನರ ಗುಂಪು, ಒಂದೇ ನಮೂನೆಯ ಉದ್ಯೋಗವನ್ನು ಮಾಡುವ ಜನಗಳ ಗುಂಪು ಇವರಿಗೆಲ್ಲ ಸಾಂಸ್ಕೃತಿಕ ಚಹರೆ ಇದೆ ಎಂದು ಹೇಳಿದಂತಾಗುತ್ತದೆ. ಸಾಮಾನ್ಯವಾಗಿ ಜಾನಪದದಲ್ಲಿ ನಾವು 'ಜನಪದ' ಎಂದು ಗುರುತಿಸುವುದು ಸಾಂಸ್ಕೃತಿಕ ಚಹರೆಯಾಗುತ್ತದೆ.

ವಿಶಿಷ್ಟವಾದ ಸಂಸ್ಕೃತಿಯನ್ನು ಹೊಂದಿರುವಂತಹ 'ಬುಡಕಟ್ಟು ಚಹರೆ' ಎಂಬುದು ಹುಟ್ಟುವುದೇ 'ಅನ್ಯ'ದ ಒಡನಾಟದಲ್ಲಿ, ಅಂದರೆ ಬೇರೊಂದು ಸಂಸ್ಕೃತಿಯ ಚಹರೆ ಇರದ ಹೊರತು ತನ್ನ 'ಚಹರೆ' ಎಂಬ ಮಾನಸಿಕ ಸಂಕಲ್ಪನೆ ಮೂಡಲು ಸಾಧ್ಯವಿಲ್ಲ. ಹಾಗಾಗಿ ಈ ಚಹರೆ ಎಂಬ ಮಾನಸಿಕ ಪರಿಕಲ್ಪನೆಯು ಅವರ ಸಾಂಸ್ಕೃತಿಕ ಬದುಕಿನ ಸರ್ವಸ್ವ

ವಾಗಿರುತ್ತದೆ. ಜೊತೆಗೆ ಆ ಸಾಂಸ್ಕೃತಿಕ ಚಹರೆಯೇ ಮೂಲದಲ್ಲಿ ಅವರ ಜೀವನದ ರೀತಿ ನೀತಿಯಾಗಿರುತ್ತದೆ.

ಬದುಕಿನ ರೀತಿ ನೀತಿಗಳ ಆಧಾರದ ಮೇಲೆ ಸಂಸ್ಕೃತಿ ರೂಪುಗೊಳ್ಳುತ್ತದೆ. ಆ ಸಂಸ್ಕೃತಿ ಇರುವ ಭೌಗೋಳಿಕತೆ, ಚಾರಿತ್ರಿಕತೆ, ಸಾಮಾಜಿಕತೆ, ಸಾಂಸ್ಕೃತಿಕತೆ, ಭಾಷಿಕ ಕಾರಣಗಳು, ಅವಲಂಬಿತ ಮೌಲ್ಯಗಳು ಹೀಗೆ ಹತ್ತು ಹಲವಾರು ಅಂಶಗಳು ಸಾಂಸ್ಕೃತಿಕ ಚಹರೆಗೆ ಕಾರಣವಾಗಿರುತ್ತವೆ. ಉದಾಹರಣೆಗೆ, ನಾಯಕ ಬುಡಕಟ್ಟು ಕರ್ನಾಟಕದ ಉದ್ದಗಲಕ್ಕೂ ಹರಡಿದ್ದು ರಾಯಚೂರು, ಬಳ್ಳಾರಿ ಜಿಲ್ಲೆಗಳ ಪೂರ್ವ ಭಾಗದಲ್ಲಿ ಹೆಚ್ಚಾಗಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲೂಕುಗಳಲ್ಲಿ ಅತಿ ದಟ್ಟವಾಗಿ ನೆಲೆಸಿರುವ ಇವರ ಮನೆಯ ಮಾತು ತೆಲುಗು. ಈ ಬುಡಕಟ್ಟಿನ ಚರಿತ್ರೆಗೆ ಸಂಬಂಧಿಸಿದ ಎಷ್ಟೋ ದಾಖಲೆಗಳು ತೆಲುಗಿನಲ್ಲಿ ಸಿಗುತ್ತವೆ. ಆದರೆ, ಇವರು ಕನ್ನಡ ಪ್ರಾಂತ್ಯದಲ್ಲಿ ನೆಲೆಸಿದ ನಂತರ ದಾಖಲೆಗಳು ಕನ್ನಡದಲ್ಲಿಯೇ ಸಿಗುತ್ತವೆ. ಇಂದು ಕನ್ನಡ ಪ್ರಾಂತ್ಯಗಳಲ್ಲಿ ನೆಲೆಸಿರುವ ಇವರು ತೆಲುಗು ಬಹುಪಾಲು ಕನ್ನಡ ಮಿಶ್ರಿತವಾಗಿದ್ದು ತನ್ನದೇ ಆದ ವಿಶಿಷ್ಟ ಶೈಲಿಯನ್ನು ಹೊಂದಿದೆ. ಚಾರಿತ್ರಿಕವಾದ ದಾಖಲೆಗಳ ಜೊತೆಯಲ್ಲಿಯೇ ಭೌಗೋಳಿಕತೆಯನ್ನು ಮೀರಿ, ಸಾಮಾಜಿಕ ಸಾಂಸ್ಕೃತಿಕ ಬದಲಾವಣೆಯನ್ನು ಹೊಂದಿರುವ ಬುಡಕಟ್ಟಾಗಿದೆ.

ಈ 'ಸಾಂಸ್ಕೃತಿಕ ಚಹರೆ' ಪರಿಕಲ್ಪನೆ ಬುಡಕಟ್ಟುಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ವಿಶಿಷ್ಟವಾಗಿದ್ದು ಅವರ ಒಟ್ಟಾರೆ ಬದುಕಿನ ವಿಧಾನಗಳು, ನಂಬಿಕೆಗಳನ್ನು ವಿಶ್ಲೇಷಿಸಲು ಅನುಕೂಲವಾಗುವಂತಿದೆ. ಈ ಪರಿಕಲ್ಪನೆಯು ವಿಶಿಷ್ಟವೆನಿಸಿಕೊಳ್ಳಲು ಕಾರಣಗಳು ಹಲವಾರು.

೧. ಬದುಕಿನ ಬದಲಾವಣೆಯಲ್ಲಿ ಬಂದಿರುವ ಕಡಿಮೆ ಪರಿಷ್ಕಾರಗಳು ಅಥವಾ ನಿಧಾನಗತಿಯ ಬದಲಾವಣೆಗಳು: ಗ್ರಾಮ ಹಾಗೂ ನಗರಗಳಲ್ಲಿ ವಾಸಿಸುವ ಸಮುದಾಯ ಗಳಿಗೆ ಹೋಲಿಸಿದರೆ ಬುಡಕಟ್ಟು ಸಮುದಾಯಗಳಿಗೆ ಹೊಸ ಹೊಸ ಆವಿಷ್ಕಾರದ ಸಾಧನಗಳ ಬಳಕೆ ಹಾಗೂ ಹೊಸ ಮಾದರಿಯ ಜೀವನ ಪದ್ಧತಿಯು ದೊರಕಿದ್ದು ತಡವಾಗಿ, ವಸಾಹತು ಶಾಹಿ ನಂತರ ಸ್ವಲ್ಪ ತೀವ್ರವಾಗಿ ದೊರಕಿದವು. ಹಾಗಾಗಿ ಬುಡಕಟ್ಟುಗಳ ಬದುಕಿನಲ್ಲಿ ಬದಲಾವಣೆ ಹಾಗೂ ಪರಿಷ್ಕಾರಗಳು ನಿಧಾನವಾಗಿರುವುದರಿಂದ ಸಾಂಸ್ಕೃತಿಕ ಚಹರೆಗಳು ಹೆಚ್ಚಾಗಿ ಕಂಡುಬರುತ್ತವೆ. ಒಂದು ಸಮುದಾಯದಲ್ಲಿ ಶಿಕ್ಷಣದ ಮಟ್ಟ ಹೆಚ್ಚಿದಂತೆಲ್ಲಾ ಸಮಾಜ ಎಲ್ಲಾ ವಿಧದಲ್ಲಿಯೂ ಬದಲಾಗಲು ಸಾಧ್ಯ. ಈ ಹಿನ್ನೆಲೆಯಲ್ಲಿ ಜಗಳೂರು ತಾಲ್ಲೂಕು ಮ್ಯಾಸನಾಯಕ ಬುಡಕಟ್ಟಿನವರು ಮೈಸೂರು ಸಂಸ್ಥಾನದ ಹಿಂದುಳಿದ ವರ್ಗಗಳ ಸಮೀಕ್ಷಾ ಆಯೋಗದ ಅಧ್ಯಕ್ಷರ ಮತ್ತು ಸದಸ್ಯರ ಗಮನಕ್ಕೆ ಬರೆದ ಪತ್ರದಲ್ಲಿ-

ತಾಲ್ಲೂಕಿನಲ್ಲಿರುವ ಒಟ್ಟು ಪ್ರಜಾ ಸಂಖ್ಯೆ : ೪೦,೦೦೦

೧. ಪದವೀಧರರು : ೫

೨. ಪಿ.ಯು.ಸಿ. ಆದವರು : ೫

೩. ಎಸ್.ಎಸ್.ಎಲ್.ಸಿ. ಪಾಸಾದವರು : ೩೫

೪. ಡಿಪ್ಲೊಮಾ ಆದವರು : ೨

(ಕೃಷ್ಣಮೂರ್ತಿ ಹನೂರು ೧೯೯೩, ೨೦೦). ಇಂತಹ ಸಮುದಾಯಗಳಲ್ಲಿ ಸಾಂಸ್ಕೃತಿಕ ಚಹರೆ ಹೆಚ್ಚಾಗಿರುವುದನ್ನು ಕಾಣಬಹುದು.

೨. ಒಂದು ಸನ್ನಿವೇಶದಲ್ಲಿ ವಾಸಿಸುವ ಸಮುದಾಯಗಳು ಹಲವಾರಿದ್ದು, ಅವುಗಳಲ್ಲಿ ಕೆಲ ಸಮುದಾಯಗಳು ತಮ್ಮ ಚಹರೆಗಳನ್ನು ಹೊಸ ಚಹರೆಯ ಧಾರೆಯೊಳಗೆ ವಿಲೀನಗೊಳಿಸಿಕೊಂಡಷ್ಟು ಪ್ರಧಾನವಾಗಿ ಬುಡಕಟ್ಟುಗಳು ವಿಲೀನಗೊಳಿಸಿ ಕೊಂಡಿಲ್ಲದೇ ಇರುವುದು. ಪ್ರಸಿದ್ಧ ವಿದ್ವಾಂಸರಾದ ಡಾ. ವೆರಿಯರ್ ಎಲ್ವಿನ್ ಅವರು ವೊಂಗೆ, ಜರ್ವಾ ಬುಡಕಟ್ಟುಗಳ ಕುರಿತು ಈ ರೀತಿ ಹೇಳುತ್ತಾರೆ. “ಆಧುನಿಕತೆಯ ಪ್ರಭಾವಕ್ಕೆ ಸಿಲುಕದೆ ತಮ್ಮ ಮೂಲದ ಸಂಸ್ಕೃತಿಯನ್ನು ಕಾಯ್ದುಕೊಂಡು ಬಂದವರು. ಇವರಿಗೆ ತಮ್ಮ ಆದಿಮ ಬದುಕಿನ ಬಗೆಗೆ ಅಪಾರ ಅಭಿಮಾನವಿದೆ. ಸಾಂಘಿಕ ಜೀವನಶೈಲಿ ಇವರದು. ಕಲೆ, ಸಂಗೀತ, ಸಾಹಿತ್ಯ ಪರಂಪರೆಯನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡು ಬಂದವರು”. ಅವರು ವಾಸಿಸುತ್ತಿರುವ ಸುತ್ತಲಿನ ಭೌಗೋಳಿಕ ಪರಿಸರ ಅವರ ಮೂಲ ಸಂಸ್ಕೃತಿಯನ್ನು ಕಾಯ್ದುಕೊಳ್ಳುವುದಕ್ಕೆ ಸಹಕಾರಿಯಾಗಿದೆ.

೩. ಬದುಕಿನ ಪರಿಸ್ಥಿತಿಗಳಲ್ಲಿ ಇರುವ ವಾಸ್ತವಾಂಶಗಳು. ಉದಾ. ಅರಣ್ಯವಾಸ, ಬೆಟ್ಟಗುಡ್ಡ ವಾಸ ಅಥವಾ ಊರಿನ ಬಳಿಯಿದ್ದಾಗಲೂ ಪ್ರತ್ಯೇಕ ಕೇರಿ ಅಥವಾ ಹಟ್ಟಿಗಳಲ್ಲಿ ವಾಸ. ಈಗಲೂ ಊರಿನ ಹೊರಗಡೆ ಇರುವ ತಾಂಡಾಗಳಲ್ಲಿ ವಾಸಿಸುವ ಲಂಬಾಣಿಗರು, ಊರಿನ ಹತ್ತಿರವೇ ಹಟ್ಟಿಗಳಲ್ಲಿ ವಾಸಿಸುವ ಮ್ಯಾಸನಾಯಕರು ಹಾಗೂ ಕಾಡುಗೊಲ್ಲರುಗಳು ಕೆಲವೆಡೆ ತಮ್ಮ ಸಂಸ್ಕೃತಿಯ ಚಹರೆಗಳನ್ನು ಕಾಪಾಡಿಕೊಂಡು ಬಂದಿರುವುದನ್ನು ಕಾಣಬಹುದು.

೪. ಉತ್ಪಾದನಾ ಕ್ರಿಯೆಗಳಲ್ಲಿ ಇರುವ ಸಾಪೇಕ್ಷ ಪ್ರತ್ಯೇಕತೆಯೂ ‘ಬುಡಕಟ್ಟು ಚಹರೆ’ ಉಳಿದುಕೊಂಡು ಬರಲು ಕಾರಣವಾಗಿದೆ. ಉದಾ. ಪಶುಪಾಲನೆ, ಬೇಟೆಗಾರಿಕೆ, ಅರಣ್ಯ ಉತ್ಪನ್ನ ಸಂಗ್ರಹ ಮುಂತಾದವು. ಈಗಲೂ ಪಶುಪಾಲನೆ, ಬೇಟೆಗಾರಿಕೆ ಹಾಗೂ ಅರಣ್ಯ ಉತ್ಪನ್ನ ಸಂಗ್ರಹದಲ್ಲಿ ತೊಡಗಿರುವ ಬೇಡ, ಗೊಲ್ಲ, ಕಾಡುಕುರುಬ ಮುಂತಾದ ಕೆಲ ಬುಡಕಟ್ಟುಗಳಲ್ಲಿರುವ ಬಹುಪಾಲು ಜನರು ಇಂದಿನ ಆಧುನಿಕ ಪರಿಸರದಲ್ಲೂ ತಮ್ಮ ಸಾಂಸ್ಕೃತಿಕ ಚಹರೆಗಳನ್ನು ಬಿಟ್ಟುಕೊಡದೇ ಉಳಿಸಿಕೊಳ್ಳುತ್ತಿರುವುದು ಗಮನೀಯ ಸಂಗತಿ. ಚಳ್ಳಕೆರೆ ಪ್ರಾಂತ್ಯದಲ್ಲಿರುವ ಮ್ಯಾಸನಾಯಕರು ವರ್ಷದಡಕು ದಿನ (ಯುಗಾದಿ ಹಬ್ಬದ ಎರಡನೇ ದಿನ) ನೂರಾರು ಯುವಕರು, ಮುದುಕರು, ಕೈಯಲ್ಲಿ ಕತ್ತಿ, ಭರ್ಜಿ, ಈಟಿ, ಗಂಡುಗೊಡಲಿ, ಚಿಪ್ಪುಗೊಡಲಿ, ಕೊಡಲಿ, ಕುಡುಗೋಲು, ಮಚ್ಚು, ಕೋವಿಗಳನ್ನು ಹಿಡಿದು ಊರ ಹೊರಗಿನ ಸೀಮೆಜಾಲಿ(ಬಳ್ಳಾರಿ ಜಾಲಿ)ಗಳಲ್ಲಿ ಅಡಗಿರುವ ಹಂದಿಗಳನ್ನು ಬೇಟೆಯಾಡಲು ಹಾಹಾಕಾರ ಮಾಡುತ್ತಾ, ಕೇಕೆ ಹಾಕಿ ಅಬ್ಬರಿಸುತ್ತಾ, ತಪ್ಪಡಿಯ ರಿಂಗಣ ಕುಣಿತಕ್ಕೆ

ಆವೇಷಭರಿತರಾಗಿ ಕುಣಿಯುತ್ತಾ ಹೋಗುತ್ತಾರೆ. ಈ ಆಚರಣೆ ಈಗಲೂ ಪ್ರಚಲಿತವಾಗಿದ್ದು ಬೇಟೆಯಾಡಲು ಅಲ್ಲಿಯ ಭೌಗೋಳಿಕ ಪರಿಸರ ಅವರಿಗೆ ಅನುಕೂಲವನ್ನೊದಗಿಸಿದೆ.

ಹೀಗೆ ಒಂದು ಭೌಗೋಳಿಕ ಪರಿಸ್ಥಿತಿ ಹಾಗೂ ಆ ಪರಿಸ್ಥಿತಿಗೆ ಸಂಬಂಧಪಟ್ಟ ಆಚರಣೆಯಿಂದಾಗಿ ಅವರುಗಳು ಈಗಲು ಒಂದಾಗಿರುವುದನ್ನು ಕಾಣಬಹುದು.

ಚಹರೆಯ ಗುರುತಿಸುವಿಕೆಗೆ ಕಾರಣವಾಗುವ ಭೌತಿಕ ಅಂಶಗಳು

ಕುಲ ಲಾಂಛನ: ಬುಡಕಟ್ಟು ಸಮುದಾಯಗಳು ಮುಖ್ಯವಾಗಿ ತಮ್ಮ ಕುಲದ ಲಾಂಛನ ಹಾಗೂ ಕುಲದ ಹಿರಿಯರನ್ನು ಅತ್ಯಂತ ಗೌರವದಿಂದ ಕಾಣುವುದಾಗಿದೆ. ಹಿರಿಯರು ಹೇಳಿದ ಯಾವುದೇ ತೀರ್ಮಾನವನ್ನು ಒಪ್ಪಿ ತಲೆಬಾಗುವುದು. ಕುಲಪದ್ಧತಿ, ಕುಲಕಸುಬನ್ನು ಅತ್ಯಂತ ನಿಷ್ಠೆಯಿಂದ ಮುಂದುವರಿಸಿಕೊಂಡು ಬರುವುದು ಮುಖ್ಯ ಸಂಗತಿ. ತಮ್ಮ ಕುಲ ಲಾಂಛನವನ್ನು ಪವಿತ್ರವೆಂದು ಭಾವಿಸಿ ಅದನ್ನು ದೈವದ ಸಂಕೇತವಾಗಿ ಪೂಜೆಗೈಯುವು ದುಂಟು. ಚಿತ್ರದುರ್ಗ ಬಯಲಿನ ಹಟ್ಟಿಗಳಲ್ಲಿ ವಾಸಿಸುವ ಮ್ಯಾಸಬೇಡರು ತಮ್ಮ ಕುಲ ಲಾಂಛನವನ್ನು ಗೌರವಿಸುವುದನ್ನು ಈಗಲೂ ಕಾಣಬಹುದು. ಜೊತೆಗೆ ತಮ್ಮಲ್ಲೇ ಆಗಿ ಹೋದ ವೀರರನ್ನು ಆರಾಧ್ಯ ದೈವವನ್ನಾಗಿಸಿಕೊಂಡು ಆರಾಧಿಸುವುದು ಉಂಟು. ಇದರೊಂದಿಗೆ ಅವರ ಆಹಾರ ಉಡಿಗೆ ತೊಡಿಗೆಗಳಲ್ಲಿ ವಿಶೇಷವು ಇರುತ್ತದೆ. ಅದು ಹೇಗೆಂದರೆ ಇವರ ಆಹಾರ ಪದ್ಧತಿಯಲ್ಲಿ ಮಾಂಸಾಹಾರಕ್ಕೆ ಆದ್ಯತೆ ಇದೆಯಾದರೂ ಹಂದಿ ಮತ್ತು ಕೋಳಿಯನ್ನು ತಿನ್ನಬಾರದೆಂಬ ನಿಷೇಧವಿದೆ. ಹಾಗೆಯೇ ಆಚರಣೆಗಳ ಸಂದರ್ಭದಲ್ಲಿ 'ಕಂಬಳಿ'ಗೆ ಪ್ರಾಶಸ್ತ್ಯವಿದೆ. ಆದರೆ ಕಪ್ಪುಬಣ್ಣದ ಉಡುಪನ್ನು ಧರಿಸಲೇಬಾರದೆಂಬ ನಿಷೇಧವಿದೆ. ಬುಡಕಟ್ಟು ಸಮುದಾಯದ ಕುಲಲಾಂಛನವು ತಮ್ಮ ಸಂಸ್ಕೃತಿಯ ವೀರರು ತಮ್ಮ ಬುಡಕಟ್ಟು ಸಮುದಾಯಕ್ಕೆ ಯಾವುದೋ ಒಂದು ಕಾಲದಲ್ಲಿ ನೀಡಿದ ಕೊಡುಗೆಯಾಗಿರುತ್ತದೆ. ಅಂದರೆ ಪ್ರಕೃತಿಯಲ್ಲಿನ ಯಾವುದೇ ಒಂದು ಸಸ್ಯ, ಜೀವಿ ಇಲ್ಲವೇ ವಸ್ತುವನ್ನು ಆವಿಷ್ಕರಿಸಿ ಇಲ್ಲವೆ ಸಂಶೋಧಿಸಿ ಅದರ ಉಪಯೋಗವನ್ನು ತಿಳಿಸಿ ಕೊಟ್ಟಿದ್ದಾಗಿರುತ್ತದೆ. ಇಲ್ಲಿ ಪರಂಪರಾಗತ ಕುಲಕಸುಬು ಹಾಗೂ ಕುಲಲಾಂಛನಕ್ಕೆ ಪರಸ್ಪರ ಸಂಬಂಧವಿರುತ್ತದೆ; ಒಂದಕ್ಕೊಂದು ಪೂರಕವಾಗಿರುತ್ತವೆ. ಕೆಲವೊಮ್ಮೆ ಕುಲಲಾಂಛನವು ಕುಲಕಸುಬಿನ ಸಾಧನವಾಗಿರುತ್ತದೆ. ಆದ್ದರಿಂದ ಕುಲಲಾಂಛನವು ದೈವತ್ವದ ಮಟ್ಟಕ್ಕೇರಿ ಪೂಜೆಗೆ ಒಳಗಾಗುತ್ತಿರುತ್ತದೆ.

ಉದಾ. ಮ್ಯಾಸಬೇಡರು ಪೂಜಿಸುವ ಬಿಲ್ಲು-ಬಾಣಗಳು. ಇವುಗಳನ್ನು ಅವರ ಸಾಂಸ್ಕೃತಿಕ ನಾಯಕ ಗಾದ್ರಿಪಾಲನಾಯಕ ಬಳಸುತ್ತಿದ್ದನೆಂಬ ಕಾರಣದಿಂದಾಗಿ ಪ್ರಾಶಸ್ತ್ಯ ಪಡೆಯುತ್ತವೆ. ಏಕೆಂದರೆ ಅವುಗಳು ಸಮುದಾಯದ ಮೂಲಕಸುಬು ಎನಿಸಿದ ಬೇಟೆಗಾರಿಕೆಗೆಂದು ಆತನು ಆವಿಷ್ಕರಿಸಿದ ಆಯುಧ ವಿಶೇಷಗಳಾಗಿವೆ. ಅಲ್ಲದೆ ಅವುಗಳ ಬಳಕೆ ಹಾಗೂ ಪ್ರಯೋಜನ ಗಳನ್ನು ತಿಳಿಸಿಕೊಟ್ಟಿದ್ದಾನೆ. ಆದ್ದರಿಂದ ಸಾಂಸ್ಕೃತಿಕ ವ್ಯಕ್ತಿ ಹಾಗೂ ಆತನ ಆವಿಷ್ಕಾರಗಳು ಪೂಜ್ಯನೀಯವಾಗುತ್ತವೆ.

ಈ ಅಂಶಗಳನ್ನು ಸಾಂಸ್ಕೃತಿಕ ಚಹರೆಯ ಗುರುತಿಸುವಿಕೆಗೆ ಕಾರಣಗಳೆಂದು ಸೂಚಿಸಬಹುದಾಗಿದೆ.

ಆಹಾರ ಪದ್ಧತಿ

ಬುಡಕಟ್ಟು ಜನರ ಆಹಾರ ಪದಾರ್ಥಗಳು ಅವರ ನಂಬಿಕೆ ಆಚರಣೆಗಳ ಹಿನ್ನೆಲೆಯಲ್ಲಿ ಬಂದವುಗಳಾಗಿರುತ್ತವೆ. ಜೊತೆಗೆ ಅವರು ಜೀವಿಸುವ ಪರಿಸರದಲ್ಲಿ ಸಿಗುವ ಪದಾರ್ಥಗಳು ಮುಖ್ಯವಾಗಿರುತ್ತವೆ. ಅವರ ಆಹಾರ ಪದ್ಧತಿಯಲ್ಲಿ ತಮ್ಮದೇ ಆದ ವೈಶಿಷ್ಟ್ಯತೆ ಹಾಗೂ ನಿಷೇಧಗಳನ್ನು ಹೊಂದಿರುತ್ತಾರೆ. ಈ ರೀತಿ ಇರುವ ವೈಶಿಷ್ಟ್ಯತೆ ಹಾಗೂ ನಿಷೇಧಗಳೇ ಆ ಬುಡಕಟ್ಟು ಸಮುದಾಯದ ಚಹರೆಯಾಗಿರುತ್ತದೆ.

ಉಡುಪು ಮತ್ತು ಆಭರಣ

ಕೆಲವು ಬುಡಕಟ್ಟುಗಳು ತಮ್ಮದೇ ವಿಶಿಷ್ಟವಾದ ಉಡುಪು ಹಾಗೂ ಆಭರಣಗಳನ್ನು ಹೊಂದಿರುತ್ತಾರೆ. ಅಂತಹ ಉಡುಪು ಆಭರಣಗಳನ್ನು ಕೆಲ ಸಮುದಾಯಗಳು ಪ್ರತಿದಿನ ಬಳಸಿದರೆ (ಉದಾ. ಲಂಬಾಣಿ ಸಮುದಾಯ), ಕೆಲ ಸಮುದಾಯಗಳು ವಿಶಿಷ್ಟ ದಿನಗಳಾದ ಹಬ್ಬ ಹರಿದಿನ, ಮದುವೆ ಮುಂತಾದ ಸಂದರ್ಭಗಳಲ್ಲಿ ಬಳಸುತ್ತಾರೆ (ಉದಾ. ಕೊಡವರು). ಈ ವಿಶಿಷ್ಟವಾದ ಉಡುಪು ಮತ್ತು ಆಭರಣಗಳೇ ಅವರ ಸಾಂಸ್ಕೃತಿಕ ಚಹರೆಗಳಾಗಿರುತ್ತವೆ.

ಭಾಷಾವೈವಿಧ್ಯ

ಕೆಲ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಭಾಷಾ ವೈವಿಧ್ಯತೆಯನ್ನು ಹೊಂದಿರುತ್ತವೆ. ಉದಾ. ಲಂಬಾಣಿ, ಕೊಡವ ಮುಂತಾದವು. ಈ ಭಾಷಾ ವೈವಿಧ್ಯತೆ ಅವರ ಸಾಂಸ್ಕೃತಿಕ ಚಹರೆಯಾಗಿರುತ್ತದೆ. ಕೆಲವೊಮ್ಮೆ ಇಂಥ ಭಾಷೆಯು ಸಂಬಂಧಿಸಿದ ಸಮುದಾಯದ ಅಧಿಕೃತತೆಯನ್ನು ಸಾರುವುದಲ್ಲದೆ ಸಂಕೇತ ಭಾಷೆಯೂ, ರಹಸ್ಯ ಭಾಷೆಯೂ ಆಗಿ ಇತರರಿಂದ ರಕ್ಷಿಸಿಕೊಳ್ಳಲು ಅನುವಾಗುತ್ತದೆ. ಉದಾಹರಣೆಗೆ; ಮ್ಯಾಸನಾಯಕರು ಈಗಲೂ ತೆಲುಗು ಮಾತನಾಡುವುದು.

ಸಾಂಸ್ಕೃತಿಕ ಚಹರೆಯ ಗುರುತಿಸುವಿಕೆಯ ಕಾರಣವಾಗುವ ಮಾನಸಿಕ ಹಾಗೂ ಸಾಂಸ್ಕೃತಿಕ ಅಂಶಗಳು

ಸಾಂಸ್ಕೃತಿಕ ಚಹರೆಯನ್ನು ಗುರುತಿಸಲು ಭೌತಿಕ ಅಂಶಗಳು ಹೇಗೆ ಸಹಕಾರಿಯಾಗಿರುತ್ತವೆಯೋ ಹಾಗೆಯೇ ಬುಡಕಟ್ಟುಗಳ ಮಾನಸಿಕ ಹಾಗೂ ಸಾಂಸ್ಕೃತಿಕ ಅಂಶಗಳು ಸಹ ಬುಡಕಟ್ಟು ಚಹರೆಯ ಗುರುತಿಸುವಿಕೆಗೆ ಕಾರಣವಾಗುತ್ತವೆ.

ಬುಡಕಟ್ಟು ಸಮುದಾಯಗಳು ತಾವು ಹೊಂದಿರುವ ಕುಲದ ಮೂಲಗಳು ಅವರನ್ನು ಒಂದೆಡೆ ಸೇರುವಂತೆ ಮಾಡುತ್ತವೆಯಲ್ಲದೇ ಅವೇ ಆ ಬುಡಕಟ್ಟುಗಳ ಚಹರೆಯಾಗಿರುತ್ತವೆ. ಹಾಗೆಯೇ ಅವರಲ್ಲಿರುವ ರಕ್ತ ಸಂಬಂಧದ ಪಾವಿತ್ರತೆಯ ಭಾವನೆಯಿಂದ ಒಂದಾಗುವಿಕೆ,

ಅವರ ಮೌಖಿಕತೆಯಲ್ಲಿ ಉಳಿದುಕೊಂಡಿರುವ ಪುರಾಣ, ಐತಿಹ್ಯ, ಜನಪದ ಸಾಹಿತ್ಯ, ಆಚರಣೆಗಳು, ದೈವಗಳು, ಯುದ್ಧ ಹಾಗೂ ಸಹಕಾರದ ಸ್ಮೃತಿಗಳು, ಕಥನಗಳು ಒಂದು ಸಮುದಾಯ ಒಗ್ಗೂಡಲು ಕಾರಣವಾಗುತ್ತವೆ. ಮಾನಸಿಕ ಮತ್ತು ಸಾಂಸ್ಕೃತಿಕ ಅಂಶಗಳು ಅವರ ಸಾಂಸ್ಕೃತಿಕ ಚಹರೆಗಳಾಗಿರುತ್ತವೆ. ಉದಾಹರಣೆಗೆ; ಮ್ಯಾಸನಾಯಕರ ಗುಗ್ಗರಿ ಹಬ್ಬ. ಹಿಂದೂಗಳಂತೆ ಬೇರೆಲ್ಲಾ ಹಬ್ಬಗಳನ್ನು ಇವರು ಆಚರಿಸಿದರೂ, 'ಗುಗ್ಗರಿ ಹಬ್ಬ' ಅವರನ್ನು ಬೇರೆಯವರಿಂದ ಪ್ರತ್ಯೇಕಿಸುವಷ್ಟು ವಿಶಿಷ್ಟವಾದದ್ದು. ಗುಗ್ಗರಿ ಹಬ್ಬದಲ್ಲಿ ತಮ್ಮ ಹೊಲದಲ್ಲಿ ಹೊಸದಾಗಿ ಬೆಳೆದ ಹುರುಳಿ, ತೊಗರಿ, ಹಲಸಂದೆ, ಹೆಸರುಕಾಳು ಮುಂತಾದ ದಾನ್ಯಗಳನ್ನು ತಂದು ದೇವಸ್ಥಾನದಲ್ಲಿ ಸುರಿಯುತ್ತಾರೆ. ನಂತರ ಬೇಯಿಸಿ ದೇವರುಗಳಿಗೆ 'ಎಡೆ' ಹಾಕುತ್ತಾರೆ. ನಂತರ 'ಪ್ರಸಾದ'ವೆಂದು ತಿನ್ನುತ್ತಾರೆ. ಎಲ್ಲಾ ಪಂಗಡದ ಮ್ಯಾಸನಾಯಕರು ಆಚರಿಸಿದರೂ ಮಳೆಲೋರು ಪಂಗಡದವರು ವಿಶೇಷವಾಗಿ ಆಚರಿಸುತ್ತಾರೆ. ಮಾಕನಡುಕು ನರಸಿಂಹಸ್ವಾಮಿ ಇವರ ಮನೆದೇವರು. ಗುಗ್ಗರಿ ಹಬ್ಬದ ದಿನ, ಗುಗ್ಗರಿ ನೀರಿನಲ್ಲಿ ಬೇಯುತ್ತಿರುವಾಗ ಪಟ್ಟದ ಪೂಜಾರಿಯ ಹೆಂಡತಿ ಅಂದು ಒಂದ್ಹೊತ್ತಿನಲ್ಲಿದ್ದು ಮಡಿಯಲ್ಲಿ ಬಂದು ಬೇಯುತ್ತಿರುವ ಗುಗ್ಗರಿ ಕೊಳಗದಲ್ಲಿ ಕೈಯಿಟ್ಟು ಗುಗ್ಗರಿಯನ್ನು ಬರಿಗೈಯಿಂದ ತಿರುವುತ್ತಾಳೆ. ನಂತರ ಗುಗ್ಗರಿ 'ಎಡೆ'ಹಾಕುತ್ತಾರೆ. ಎಡೆಯ ನಂತರ 'ಬುಟ್ಟಿದೇವರು' ಅಥವಾ 'ಪೆಟ್ಟಿಗೆ ದೇವರು' ಗಳನ್ನು ಊರ ಹೊರಗೆ ಹೊರಡಿಸಿಕೊಂಡು ಹೋಗುತ್ತಾರೆ. ತೆಲುಗಿನಲ್ಲಿ ಇವನ್ನು 'ದೇವಗಂಪಲು'ಎನ್ನುತ್ತಾರೆ. 'ದೇವ' ಎಂದರೆ ದೇವರುಗಳು, 'ಗಂಪ' ಎಂದರೆ ಪುಟ್ಟಿ(ತಟ್ಟಿ) ಅಥವಾ ಹೆಡಿಗೆ. ಹಾಗಾಗಿ ಇವು ಪುಟ್ಟಿಯಲ್ಲಿರುವ ದೈವಗಳು. ಇದೇ ರೀತಿ ಊರನಾಯಕರು ಮಾರಮ್ಮನನ್ನು ತಟ್ಟಿ ಅಥವಾ ಪುಟ್ಟಿಯಲ್ಲಿಡುವುದನ್ನು, ಬೆಸ್ತರು ಜೋಕುಮಾರನನ್ನು ಪುಟ್ಟಿ ಅಥವಾ ಮೊರದಲ್ಲಿ ಇಟ್ಟು ಮೆರೆಸುವುದನ್ನು ಕಾಣಬಹುದು. ಇವೆಲ್ಲಾ ಆಚರಣೆಯ ಸಂದರ್ಭಗಳಲ್ಲಿ ಅವರುಗಳು ಒಂದುಗೂಡಿ ಕೆಲಸ ನಿರ್ವಹಿಸುವುದನ್ನು ಕಾಣಬಹುದು.

ಆಧುನಿಕ ಸಂದರ್ಭ ಹಾಗೂ ಚಹರೆಯ ಪರಿವೇಷ

ಭಾರತೀಯ ಸಾಮಾಜಿಕ ವ್ಯವಸ್ಥೆ ಎಂದರೆ ಜಾತಿ ವ್ಯವಸ್ಥೆ ಎನ್ನುವಷ್ಟರ ಮಟ್ಟಿಗೆ ಭಾರತೀಯರಲ್ಲಿ ಜಾತಿ ಪ್ರಾಧಾನ್ಯತೆ ಇದೆ. ವೇದ ಪುರಾಣಗಳ ಕಾಲದಿಂದಲೂ ಅಸ್ತಿತ್ವ ದಲ್ಲಿರುವ ನಾಡಿನ ಜಾತಿ ವ್ಯವಸ್ಥೆಯ ಪ್ರಭಾವಗಳಿದ್ದರೂ ಈ ಯಾವ ಜಾತಿಗಳಿಗೂ ಸೇರದೆ, ಇವೆಲ್ಲದರಿಂದ ಪ್ರತ್ಯೇಕವಾಗಿ ಗುಡ್ಡಗಾಡು, ಕೊಳ್ಳ-ಕಣಿವೆಗಳಲ್ಲಿ ಉಳಿದಿರುವ ಬುಡಕಟ್ಟು ಸಮುದಾಯಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಭಾರತದ ಈ ಬುಡಕಟ್ಟುಗಳು ತಮ್ಮ ವಿಶಿಷ್ಟವಾದ ಸಂಸ್ಕೃತಿಯ ಘಟಕಗಳಾದ ನಂಬಿಕೆಗಳು, ಸಂಪ್ರದಾಯ, ಸಾಹಿತ್ಯ, ಸಂಗೀತ, ನೃತ್ಯ, ಕಲೆ, ಕುಶಲಕಲೆ ಮೊದಲಾದ ಹಲವಾರು ಅಂಶಗಳಿಂದ ವಿಶಿಷ್ಟತೆಯನ್ನು ಪಡೆದಿದ್ದಾರೆ. ಆದರೆ ಅಧ್ಯಯನ ಮಾಡುವಾಗ ಜಾತಿಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಬುಡಕಟ್ಟು

ಗಳ ಸಂಸ್ಕೃತಿಯನ್ನು ಕಡೆಗಣಿಸಿರುವುದು ಕಂಡುಬರುತ್ತದೆ. ವಿಶಿಷ್ಟವಾದ ಸಂಸ್ಕೃತಿಯನ್ನು ಹೊಂದಿರುವಂತಹ ಈ ಬುಡಕಟ್ಟುಗಳ ಮೇಲೆ ಈ ನಾಗರಿಕ ಸಂಸ್ಕೃತಿ ಹಾಗೂ ವಸಾಹತು ಶಾಹಿ ಸಂದರ್ಭದಲ್ಲಂತೂ ಅವರ ಜೀವನ ಸ್ಥಿತಿ ತುಂಬಾ ಆತಂಕಕ್ಕೊಳಪಟ್ಟಿತು. ನಂತರದ ಆಧುನಿಕ ನಾಗರಿಕ ಜಗತ್ತು ಇನ್ನೂ ತೀವ್ರವಾಗಿ ಆತಂಕಕ್ಕೊಳಪಡಿಸಿದೆ. ವಸಾಹತುಶಾಹಿಯು ತನ್ನ ಕೊಳ್ಳೆ ಹೊಡೆಯುವ ಕ್ರಿಯೆಯಿಂದಾಗಿ ನಿಶ್ಚಿಂತೆಯಿಂದ ಸ್ವಚ್ಛಂದವಾಗಿ ಬದುಕುತ್ತಿದ್ದ ಬುಡಕಟ್ಟು ಜನರನ್ನು ತೀವ್ರವಾದ ಶೋಷಣೆಗೊಳಪಡಿಸಿತು.

ಜೊತೆಗೆ 'ಸಾಂಸ್ಕೃತಿಕ ಚಹರೆ' ಎಂಬುದು ಸಾಂಸ್ಕೃತಿಕ ಆಕ್ರಮಣ, ಬಡತನ, ಐಷಾರಾಮಿ ಜೀವನ ಪದ್ಧತಿಗಳಿಂದಾಗಿ ಆಕ್ರಮಣಕ್ಕೊಳಗಾಗಿದೆ. ಈ ದೇಶದಲ್ಲಿ ಅನೇಕ ಸಂಸ್ಕೃತಿಗಳು ಮೇಲೆ ಹೇಳಿದ ಆಕ್ರಮಣಗಳಿಗೆ ಒಳಗಾಗಿ ತಮ್ಮ ಸೃಜನಶೀಲತೆಯನ್ನು ಕಳೆದುಕೊಳ್ಳುತ್ತಿವೆ. ಆ ಮುಖಾಂತರ ತಮ್ಮದಲ್ಲದ ಸಂಸ್ಕೃತಿಯತ್ತ ದಾಪುಗಾಲು ಹಾಕುತ್ತಿವೆ. ಈ ಸಂಸ್ಕೃತಿಗಳು ವೈದಿಕ ಸಂಸ್ಕೃತಿಯನ್ನು ತಲುಪುವಷ್ಟರಲ್ಲಿ ವೈದಿಕರು ಇನ್ನೂ ಮುಂದೆ ಹೋಗಿರುತ್ತಾರೆ. ಪರಿಣಾಮವಾಗಿ ತಮ್ಮದೂ ಅಲ್ಲದ, ಇತರರದೂ ಅಲ್ಲದಂತಹ ಸ್ಥಿತಿ ತಲುಪುತ್ತಾರೆ. ಇಂತಹ ಸ್ಥಿತಿಯನ್ನು 'ಸಾಂಸ್ಕೃತಿಕ ವೈಫಲ್ಯ' ಎನ್ನಬಹುದು.

ಆಧುನಿಕ ಸಂದರ್ಭದ ಕಾರಣಗಳು

೧. ಆಧುನಿಕ ಜೀವನ ತಂದಿರುವ ಉತ್ಪಾದನಾ ಪ್ರಕ್ರಿಯೆಗಳ ಐಕ್ಯತೆ

ಆಧುನಿಕ ಜಗತ್ತು ತನ್ನ ವೈಜ್ಞಾನಿಕ ಪ್ರಗತಿಯಿಂದಾಗಿ ಹೊಸ ಹೊಸ ಉತ್ಪಾದನಾ ಘಟಕಗಳನ್ನು ಸೃಷ್ಟಿಸುವ ಮುಖಾಂತರ ಹೆಚ್ಚಿನ ಸಂಖ್ಯೆಯ ಜನರು ಒಟ್ಟಾಗಿ ದುಡಿಯು ವಂತಹ ಸ್ಥಿತಿ ನಿರ್ಮಾಣವಾಗಿದ್ದು, ಅಲ್ಲಿ ಬೇರೆ ಬೇರೆ ಸಮುದಾಯ ಹಾಗೂ ಬೇರೆ ಬೇರೆ ಬುಡಕಟ್ಟುಗಳು ಒಟ್ಟಾಗಿ ಬದುಕುವಂತಹ ಸ್ಥಿತಿ ನಿರ್ಮಾಣವಾಗಿದೆ. ಹೀಗೆ ಬದುಕುವಂತಹ ಸಂದರ್ಭದಲ್ಲಿ ಅವರ ನಿವಾಸ ಸ್ಥಳಗಳು ಒಂದೆಡೆ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗೂ ಹೊಸ ಊರುಗಳು ಹಾಗೂ ಕಾಲೋನಿಗಳು ನಿರ್ಮಾಣವಾಗಿ ಅಲ್ಲಿ ಹೊಸದಾದ ಸಂಸ್ಕೃತಿ ತಲೆ ಎತ್ತಲು ಕಾರಣವಾಗಿದೆ. ಆಗ ಹೊಸ ಚಹರೆಗಳು ಪರಿವೇಷಗೊಳ್ಳುವ ಸಾಧ್ಯತೆಗಳಿವೆ. ಜೊತೆಗೆ ಸರಕಾರದ ಧೋರಣೆಗಳಿಂದಾಗಿ ಹೊಸದಾದ ಜನತಾ ಮನೆಗಳ ನಿರ್ಮಾಣಗಳು ಸಹ ಚಹರೆಯ ಪರಿವೇಷಕ್ಕೆ ಕಾರಣವಾಗುತ್ತವೆ.

೨. ಸಾಂಸ್ಕೃತಿಕ ಏಕೀಕರಣ

ಆಧುನಿಕ ಜಗತ್ತು ತನ್ನ ಕಬಂದ ಬಾಹುಗಳನ್ನು ಸಮೂಹದ ಸಾಂಸ್ಕೃತಿಕ ಜಗತ್ತಿನ ಮೇಲೆ ಬೀರಿರುವುದುಂಟು. ಬುಡಕಟ್ಟುಗಳ ಕಲ್ಪನೆಯಲ್ಲಿರುವ ದೈವಗಳನ್ನು ಶಿಷ್ಟೀಕರಣ ಗೊಳಿಸುವ ಮುಖಾಂತರ ಹಲವಾರು ಬುಡಕಟ್ಟುಗಳನ್ನು ಏಕೀಕರಣಗೊಳಿಸುವ ಕ್ರಿಯೆಯಲ್ಲಿ ತೊಡಗಿರುವುದನ್ನು ಕಾಣಬಹುದು. ಉದಾ. ಬಿಳಿಗಿರಿ ರಂಗಯ್ಯ. ಜೊತೆಗೆ ನಿರ್ದಿಷ್ಟ ಕುಲಕಸುಬನ್ನು ಹೊಂದಿದ್ದು, ಬೇರೆ ಬೇರೆ ದೈವಗಳನ್ನು ಒಂದುಗೂಡಿಸುವ ಮುಖಾಂತರವೂ

ಏಕೀಕರಣಕ್ಕೆ ಒಳಗಾಗುವುದುಂಟು. ಉದಾಹರಣೆಗೆ ಪಶುಪಾಲಕ ವಲಸೆಗಾರ ಮ್ಯಾಸಬೇಡರ ಪೆಟ್ಟಿಗೆ ದೇವರುಗಳು. ಇವುಗಳ ಸಂಖ್ಯೆ 'ಹನ್ನೆರಡು' ಇದ್ದುದರಿಂದ ಹನ್ನೆರಡು ಪೆಟ್ಟಿಗೆ ದೇವರುಗಳೆಂದು ಹೆಸರಾಗಿವೆ. ಪಶುಪಾಲಕರು ಹಿಂದೆ ವಲಸೆ ಬಂದಾಗ ತಮ್ಮ ಜೊತೆಯಲ್ಲೇ ತಂದ ಈ ದೇವರುಗಳಲ್ಲಿ ಶೈವ-ವೈಷ್ಣವ ದೈವಗಳೂ ಸಮಸಂಖ್ಯೆಯಲ್ಲಿರುವುದನ್ನು ಕಾಣಬಹುದು. ಗುಜರಾತ್, ಮಥುರಾ, ದ್ವಾರಕ, ಬದರಿ ಮುಂತಾದ ಪ್ರದೇಶದಿಂದ ವಲಸೆ ಬಂದ ಪಶುಪಾಲಕರು, ಅಲ್ಲಿ ಚಲಾವಣೆಯಲ್ಲಿದ್ದ ವೈಷ್ಣವ ಸಂಪ್ರದಾಯವನ್ನು ತಾವೂ ಅಳವಡಿಸಿಕೊಂಡು ಈ ಕಡೆಗೆ ಬಂದಾಗ ಇಲ್ಲಿಯ ಶೈವ ಪಶುಪಾಲಕರೊಂದಿಗೆ ಸಮೀಕರಣಗೊಂಡು ತಮ್ಮ ದೈವಗಳನ್ನು ಇಲ್ಲಿಯ ಶೈವ ದೈವಗಳೊಂದಿಗೆ ಸೇರಿಸಿರುವ ಸಾಧ್ಯತೆ ಉಂಟು. ವೈಷ್ಣವ ದೈವಗಳು - ಕಂಟೋಬಳಿದೇವರ, ಅಲಿಕಿ ಓಬಳಿ ದೇವರು, ನಲ್ಲಜರವು ಓಬಳದೇವರು, ಬೋಸೆ ರಂಗಸ್ವಾಮಿ. ಶೈವ ದೈವಗಳೆಂದರೆ - ಲಿಂಗೇಶ್ವರ, ಸೂರಲಿಂಗೇಶ್ವರ, ಪೋತಲಿಂಗೇಶ್ವರ, ಕಾಟಲಿಂಗೇಶ್ವರ, ಬೊಮ್ಮಲಿಂಗೇಶ್ವರ, ದಡ್ಲ ಮಾರಮ್ಮ ಮೊದಲಾದ ದೈವಗಳನ್ನು ಹೆಸರಿಸಬಹುದಾಗಿದೆ.

ಬುಡಕಟ್ಟು ದೈವಗಳನ್ನು ಶಿಷ್ಟೀಕರಣಗೊಳಿಸುವ ಜೊತೆಗೆ ತುಂಬಾ ಪ್ರಸಿದ್ಧವಾದ ದೈವಗಳ ಆಡಳಿತವನ್ನು ಮುಜರಾಯಿ ಇಲಾಖೆ ವಹಿಸಿಕೊಳ್ಳುವ ಮುಖಾಂತರ ಹಾಗೂ ಅವುಗಳಿಗೆ ಶಿಷ್ಟ ಸಂಪ್ರದಾಯದ ಪೂಜಾರಿಗಳನ್ನು ನೇಮಕ ಮಾಡುವ ಮುಖಾಂತರವೂ ಸಹ ಶಿಷ್ಟೀಕರಣಗೊಳಿಸುವುದರ ಜೊತೆಗೆ ಸಾಂಸ್ಕೃತಿಕ ಏಕೀಕರಣಗೊಳಿಸುವುದುಂಟು.

ಆಧುನಿಕ ಜಗತ್ತಿನ ಸಂವಹನ ಮಾಧ್ಯಮಗಳು ಸಹ ಹೊಸ ಚಹರೆಗಳ ಅಳವಡಿಕೆಗೆ ಕಾರಣಗಳಾಗಿವೆ. ಟಿ.ವಿ. ಹಾಗೂ ರೇಡಿಯೋಗಳು ಪದೇ ಪದೇ ತಮಗೆ ಅನುಕೂಲಕರವಾದ ಜೀವನದ ವಸ್ತುಗಳ ಬಗೆಗೆ ಹೇಳುವುದುಂಟು. ಹೀಗೆ ಹೇಳುವುದರ ಮುಖಾಂತರ ಬುಡಕಟ್ಟು ಗಳಲ್ಲಿ ತಮ್ಮ ಜೀವನದ ವಸ್ತುಗಳು ಮಸುಕು, ಉಪಯೋಗ ಇಲ್ಲದವು ಎಂಬ ಭಾವನೆ ಯನ್ನು ಉಂಟುಮಾಡುವುದರ ಜೊತೆಗೆ ಅವುಗಳನ್ನು ಉಪಯೋಗಿಸಿದರೆ ಕೀಳು ಎಂಬ ಅಭಿಪ್ರಾಯವನ್ನು ಸೃಷ್ಟಿ ಮಾಡುತ್ತವೆ. ಆ ಮುಖಾಂತರ ಹೊಸದಾದ ಚಹರೆಗಳನ್ನು ಅಳವಡಿಕೆ ಮಾಡಿಕೊಳ್ಳುವುದುಂಟು.

ಇತ್ತೀಚಿನ ದಿನಗಳಲ್ಲಿ ಆಗುತ್ತಿರುವ ಬದಲಾವಣೆಗಳಿಂದಾಗಿ ಹಲವಾರು ರೀತಿಯ ಸಾಮಾನ್ಯೀಕರಣಗಳನ್ನು ನಾವು ಕಾಣಬಹುದು. ಈ ಸಾಮಾನ್ಯೀಕರಣಗಳಿಗೆ ಮಾಧ್ಯಮಗಳು, ಆಧುನಿಕ ಸಂಪರ್ಕಗಳು, ಸಮೂಹ ಅಭಿಪ್ರಾಯಗಳು ಹೀಗೆ ಹಲವಾರು ಕಾರಣಗಳನ್ನು ನಾವು ನೋಡಬಹುದು. ಈ ಸಾಮಾನ್ಯೀಕರಣಗಳಿಂದಾಗಿ ಆಹಾರ, ಉಡುಪು, ಆಭರಣ ಮುಂತಾದವುಗಳಲ್ಲಿ ಬದಲಾವಣೆ ಆಗಿದ್ದು, ಏಕರೂಪತೆಯನ್ನು ಕಾಣಬಹುದು. ಇಂತಹ ಸಂದರ್ಭದಲ್ಲಿ ನಿರ್ದಿಷ್ಟ ಆಹಾರ, ಉಡುಪು, ಆಭರಣಗಳು ಮೂಲೆಗುಂಪಾಗಿ ಹೊಸ ಅಳವಡಿಕೆಗಳು ತಮ್ಮ ಚಹರೆಯನ್ನು ಒತ್ತುತ್ತವೆ.

ಆಧುನಿಕ ಜಗತ್ತಿನ ತೀವ್ರವಾದ ಸಂಪರ್ಕ ಸಾರಿಗೆಯಿಂದಾಗಿ ಸಮುದಾಯಗಳ ಅಂತರಗಳು ಕಡಿಮೆಯಾಗುತ್ತಿವೆ. ಮೊದಲೆಲ್ಲ ಒಂದು ಬುಡಕಟ್ಟು ಸಮುದಾಯ ಇನ್ನೊಂದು ಬುಡಕಟ್ಟು ಸಮುದಾಯದೊಂದಿಗೆ ಬೆರೆಯಲು ಹಲವಾರು ದಿನಗಳು ಬೇಕಾಗಿದ್ದು, ಆ ಬೆರೆಯುವಿಕೆಯು ಸಹ ಕಡಿಮೆ ಅವಧಿಯದ್ದಾಗಿತ್ತು. ಆದರೆ ಇಂದು ಬೇಕೆನಿಸಿದಾಗ ಬೇಕಾದ ಸಮುದಾಯದೊಂದಿಗೆ ಸಂಪರ್ಕ ಹೊಂದುವ ಅವಕಾಶಗಳು ಬಹಳ ಇವೆ. ಹಾಗಾಗಿ ಸಾಂಸ್ಕೃತಿಕ ಕೊಡುಕೊಳೆಗಳು ತೀವ್ರಗತಿಯಲ್ಲಿ ಆಗುತ್ತಿರುತ್ತವೆ. ಇಂತಹ ತೀವ್ರಗತಿಯ ಕೊಡುಕೊಳೆಗಳು ಚಹರೆ ಪರಿವೇಷಕ್ಕೆ ಕಾರಣವಾಗುತ್ತಿವೆ.

ಇವೆಲ್ಲವುಗಳ ಜೊತೆಗೆ ಬುಡಕಟ್ಟು ಸಮುದಾಯಗಳಲ್ಲಿ ಆಗುತ್ತಿರುವ ಶಿಷ್ಟೀಕರಣದಿಂದಾಗಿ ಅವರ ಕಲೆ, ಹಾಡು, ಕುಣಿತ ಮುಂತಾದವುಗಳಲ್ಲಿಯೂ ಶಿಷ್ಟೀಕರಣದ ಪ್ರಭಾವವನ್ನು ನಾವು ಕಾಣಬಹುದು. ಈ ತರಹದ ಶಿಷ್ಟೀಕರಣದಿಂದಾಗಿ ತಮ್ಮ ಹಾಡುಗಳಲ್ಲಿ ಶಿಷ್ಟೀಕರಣದ ಟ್ಯೂನ್ ಬಳಸುವುದು, ಹಾಡುಗಳನ್ನು ಹಾಡುವಾಗ ಮತ್ತು ಕುಣಿತದ ಸಂದರ್ಭದಲ್ಲಿ ಆಧುನಿಕ ವಾದ್ಯಗಳನ್ನು ಬಳಸುವುದು, ಸಿನಿಮಾ ಧಾಟಿ ಹಾಗೂ ಕುಣಿತಗಳನ್ನು ಅಳವಡಿಸಿಕೊಳ್ಳುವುದನ್ನು ಕಾಣಬಹುದು. ಈ ತರಹದ ಬದಲಾವಣೆಗಳು ಮೂಲ ಚಹರೆಯು ಮಸುಕು ಆಗಲು ಕಾರಣಗಳಾಗಿವೆ.

ಬದಲಾದ ಜೀವನಕ್ಕೆ ಸಂಬಂಧಪಟ್ಟಂತೆ ಸಾಂಸ್ಕೃತಿಕ ಚಹರೆಗಳು ಬದಲಾಗುವುದನ್ನು ಕಾಣಬಹುದು. ಉದಾಹರಣೆಗೆ, "ಚಳ್ಳಕೆರೆ ತಾಲೂಕಿನ ಬೇಡ ನಾಯಕರ ಕುರಿತು ಹೇಳುವುದಾದರೆ, ಮ್ಯಾಸ ನಾಯಕರು ಸಾವಿರಾರು ಸಂಖ್ಯೆಯಲ್ಲಿ ಹಟ್ಟಿಗಳಲ್ಲೇ ವಾಸಿಸುವುದರಿಂದ ಆ ಹಟ್ಟಿಗಳ ಸುತ್ತಣ ಪ್ರಕೃತಿ ನಾಶವಾಗಿ ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದ ವ್ಯವಸಾಯ, ಪಶುಪಾಲನೆ ತುಂಬಾ ಕಷ್ಟಕರವಾಗಿದೆ. ಮಳೆಯ ಅತಂತ್ರ ಸ್ಥಿತಿಯಿಂದಾಗಿ ವ್ಯವಸಾಯ ಹೆಸರಿಗೆ ಮಾತ್ರ ಇದೆ. ಇನ್ನು ಅವರ ಮೂಲ ಪಶುಪಾಲನೆಯೂ ಇಲ್ಲವಾಗಿದೆ. ಪಶುಪಾಲನೆ, ವ್ಯವಸಾಯದ ಜೊತೆಗೆ ತಮ್ಮ ಪ್ರಾಚೀನ ವೃತ್ತಿಯಾದ ಬೇಟೆಯೂ ಆಗಾಗ ಹಬ್ಬ ಹರಿದಿನದ ಮಾರನೆ ದಿನಗಳಲ್ಲಿ ನಡೆಯುತ್ತಿತ್ತು. ಈಗ ಕಾಡುಗಳು ಉಳಿದಿಲ್ಲವಾದ್ದರಿಂದ ಬೇಟೆಯೂ ಇಲ್ಲ. ಇದರಿಂದ ಬೇಟೆ, ಪಶುಪಾಲನೆ, ವ್ಯವಸಾಯ ಮೂರು ವೃತ್ತಿಗಳು ನಿಂತಿವೆ. ಇವುಗಳ ಸಮೃದ್ಧಿ ಕುಗ್ಗಿದ ಮೇಲೆ ಸಹಜವಾಗಿಯೇ ಗ್ರಾಮದೇವತೆಗಳ ಆರಾಧನೆಯೂ ಆ ಸಂಬಂಧದ ಸಂಪ್ರದಾಯಗಳೂ ಕಡಿಮೆಯಾಗಿವೆ" (ಕೃಷ್ಣಮೂರ್ತಿ ಹನೂರು, ೧೯೯೩, ೧೯೫). ಈ ಸ್ಥಿತಿಯಲ್ಲಿರುವ ಮ್ಯಾಸನಾಯಕರ ಸಾವಿರಾರು ಕುಟುಂಬಗಳಿವೆ. ಒಪ್ಪೊತ್ತಿನ ಗಂಜಿಗಾಗುವಷ್ಟು ಆಹಾರ ಧಾನ್ಯವನ್ನು ಸಂಗ್ರಹಿಸಿಟ್ಟುಕೊಳ್ಳುವ ಶಕ್ತಿ ಇಲ್ಲದ ಇವರು ಕೆಲವು ಕಡೆ ಕಲ್ಲು ಒಡೆಯುವುದು, ಜಲ್ಲಿ ಕುಟ್ಟುವುದು, ಕಟ್ಟಿಗೆ ಕಡಿದು ಪೇಟೆಗೆ ಬಂದು ಮಾರಿ ಜೀವನ ಮಾಡುವುದು ಇಂದಿಗೂ ನಡೆದೇ ಇದೆ. ಇಂತಹ ಸಂದರ್ಭದಲ್ಲಿ ಮೊದಲಿನ ಚಹರೆಗಳು ಉಳಿಯಲು ಸಾಧ್ಯವೇ.

ಪ್ರಕೃತಿಯ ಆರಾಧಕರಾಗಿದ್ದ ಬೇಡ ನಾಯಕರು ಕಾಲಕಾಲಕ್ಕೆ ಉಂಟಾದ ಧಾರ್ಮಿಕ ಪ್ರಭಾವಗಳಿಗೂ ಒಳಪಟ್ಟಿರುವುದುಂಟು. ಇದಕ್ಕೆ ಸಂಬಂಧಿಸಿದಂತೆ ನಾಯಕನಹಟ್ಟಿ ಪಾಳೆಯಗಾರರ ಒಂದು ಬಖೈರಿನಿಂದ ತಿಳಿದು ಬರುವುದುಂಟು. ಈ ಬಖೈರಿನ ಪ್ರಕಾರ "ಆಂಧ್ರ ಶ್ರೀಶೈಲದ ಕಡೆಯಿಂದ ಬಂದ ಒಂದು ತಂಡ ಚಿತ್ರದುರ್ಗ ಜಿಲ್ಲೆ ಜಗಳೂರು ಪ್ರದೇಶದ ಜನಿಗೇನಹಳ್ಳಿಯಲ್ಲಿ ನೆಲೆಸಿತು. ಇದು ನಾಯಕನಹಟ್ಟಿಗೆ ತೀರ ಸಮೀಪವಿರುವ ಒಂದು ಹಳ್ಳಿ. ಹೀಗೆ ಬಂದು ನೆಲೆಸಿದ ಬೇಡ ನಾಯಕರ ಗುಂಪಿನ ಯಜಮಾನನ ಹೆಸರು ಕಾಟೇಮಲ್ಲಪ್ಪನಾಯಕ. ಈತ ಜನಿಗೇನಹಳ್ಳಿಯಲ್ಲಿ ಬೇಡಗಂಪಳ ಇಟ್ಟುಕೊಂಡು ವಾಸ ಮಾಡತೊಡಗಿದ. ಸ್ವಲ್ಪ ದಿನಗಳಲ್ಲಿ ಅವನಿಗೆ ವಿಜಯನಗರದ ಅರಸರ ಸಂಬಂಧವಾಯಿತು. ಆದರೆ ಕಾಟೇಮಲ್ಲ ನಾಯಕನಿಗೂ, ವಿಜಯನಗರದ ಅರಸರಿಗೂ ಸ್ನೇಹ ಸಂಬಂಧ ಏರ್ಪಡುವ ಪೂರ್ವದಲ್ಲಿ ಒಂದು ಬಗೆಯ ವಾಗ್ವಾದ, ಸಣ್ಣ ಪ್ರಮಾಣದ ಕಲಹ ನಡೆದಂತೆ ಕಾಣಿಸುತ್ತದೆ. ಆದರೆ ಅರಸನು ಅಡವಿ ಸಂಚಾರಿಗಳನ್ನು ಶತ್ರುಗಳನ್ನಾಗಿ ಮಾಡಿಕೊಳ್ಳುವುದಕ್ಕಿಂತ ಮಿತ್ರರನ್ನಾಗಿ ಮಾಡಿಕೊಳ್ಳುವುದೇ ಉತ್ತಮ ಎಂದು ಯೋಚಿಸಿದ. ಹಾಗಾಗಿ ಆಯಾ ಕುಲ ಅಥವಾ ಗುಂಪಿಗೆ ಒಬ್ಬೊಬ್ಬ ನಾಯಕನೆಂದು ಆರಿಸಿ ಆ ಗುಂಪಿನವರನ್ನೆಲ್ಲ ತಮ್ಮ ಆಧೀನದಲ್ಲಿಟ್ಟುಕೊಂಡ ಹಾಗೆಯೇ ಅಡವಿ ಸಂಚಾರಿಗಳಾದವರು ಒಮ್ಮೊಮ್ಮೆ ಪಟ್ಟಣ ಸೇರಿ, ತಮ್ಮ ಪರಾಕ್ರಮದಿಂದ ಪಾಳೆಯಗಾರರೂ ಆದರು. ಪಾಳೆಯಗಾರರಾದ ಬೇಡ ನಾಯಕರು ತಮ್ಮ ಬುಡಕಟ್ಟು ಜೀವನಕ್ಕೆ ಅನೇಕ ರೀತಿಯ ರಾಜಕೀಯ, ಧಾರ್ಮಿಕ ಗುಣಗಳನ್ನು ಅಂಟಿಸಿಕೊಂಡರು. ಇದರಿಂದ ತಮ್ಮ ನಡುವೆಯೇ ಆಗಿ ಹೋದ ವೀರರ ಆರಾಧನೆಯಷ್ಟನ್ನೇ, ಪ್ರಕೃತಿಯನ್ನೇ ಆರಾಧಿಸುತ್ತಿದ್ದ ಬೇಡ ನಾಯಕರು ಕಾಲ ಕಾಲಕ್ಕೆ ಉಂಟಾದ ಧಾರ್ಮಿಕ ಪ್ರಭಾವಗಳಿಗೂ ಒಳಪಟ್ಟರು. ಹಾಗಾಗಿಯೇ ಅವರ ಕುಲಗೋತ್ರ ವಿಚಾರಗಳಲ್ಲಿ ಸಾಂಪ್ರದಾಯಿಕ ಆಚರಣೆಗಳಲ್ಲಿ ವೀರಶೈವ, ವೈಷ್ಣವ, ಭಾಗವತ ಧರ್ಮಗಳು ಪ್ರಭಾವ ಬೀರಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ" (ಕೃಷ್ಣಮೂರ್ತಿ ಹನೂರು, ೧೯೯೩, ೧೧೨-೧೨೩). ಇದಕ್ಕೆ ಸಂಬಂಧಪಟ್ಟಂತೆ ನೋಡುವುದಾದರೆ ಈಗ ಇವರು ಪಂಚಮಿ, ಉಗಾದಿ, ಶಿವರಾತ್ರಿ, ದಸರಾ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ.

ಹೊಸ ಚಹರೆಗಳ ಹುಟ್ಟು

ಆಧುನಿಕ ಸಂದರ್ಭದಲ್ಲಿ ಪ್ರತಿ ಬುಡಕಟ್ಟು ಚಹರೆಯ ಹೊರತಾಗಿ ಹೊಸ ಸಾಂದರ್ಭಿಕ 'ಚಹರೆ' ಕೂಡ ರೂಪುಗೊಂಡು ಚಲಾವಣೆಯಲ್ಲಿದೆ.

ಉದಾ. ಎಸ್.ಸಿ., ಎಸ್.ಟಿ., ಬಿ.ಟಿ., ಓ.ಬಿ.ಸಿ., ಸಂಕೇತಗಳು. ಅಸ್ಪೃಶ್ಯರು ಹಾಗೂ ಬುಡಕಟ್ಟು ಸಮುದಾಯಗಳನ್ನು ಸಾಮಾಜಿಕ ಕಾರಣಗಳ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳೆಂದು ಗುರುತಿಸುತ್ತಾರೆ. ಪರಂಪರೆಯ ಪ್ರಾಚೀನ ಕಾಲದಿಂದಲೂ ಸಾಮಾಜಿಕ ಅಸಮಾನತೆಯಿಂದಾಗಿ ಅನ್ಯಾಯಕ್ಕೊಳಗಾದ ಶೋಷಿತವರ್ಗಗಳನ್ನು ಈ

ಗುಂಪುಗಳಿಗೆ ಸೇರಿಸಿ ಶೈಕ್ಷಣಿಕ ಹಾಗೂ ಔದ್ಯೋಗಿಕ ಕ್ಷೇತ್ರದ ಮೀಸಲಾತಿಗಳನ್ನು ನೀಡುವ ಮೂಲಕ ಇವರಿಗೆ ಹೊಸ ಚಹರೆ ದೊರೆತಂತಾಗಿದೆ. ಭಾರತೀಯ ಪರಂಪರೆಯ ಚಾತುರ್ವರ್ಣವ್ಯವಸ್ಥೆಯಲ್ಲಿ ಸ್ಪರ್ಶಿಸಬಾರದವರೆಂಬ ನಿಷೇಧಕ್ಕೆ ಒಳಗಾದವರು. ಇವರಲ್ಲಿ ಹಲವು ಜಾತಿ ಪಂಗಡ ಉಪಪಂಗಡಗಳ ಚಹರೆಗಳು ಪರಂಪರಾಗತವಾದ ಐಚ್ಛಿಕಗಳಾಗಿ ಉಳಿದಿವೆ.

ಚರ್ತುವರ್ಣಗಳು ಹಾಗೂ ಪಂಚಮರು ಮಡಿ-ಮೈಲಿಗೆಯ ಅಂಶದಲ್ಲಿ ಊರೊಟ್ಟಿಗಿನ ಸಂಬಂಧಗಳಲ್ಲಿ ತಮ್ಮ ಅಸ್ತಿತ್ವದ ಚಹರೆ(Identity)ಗೆ ಬದ್ಧರಾದವರು. ಆದರೆ ಬಡುಕಟ್ಟು ವರ್ಗಗಳ ಸ್ಥಿತಿಯೇ ಬೇರೆ. ನಾಡಿನಿಂದ ಹೊರತಾಗಿ ಕಾಡಿನಲ್ಲಿ ಬೆಟ್ಟ ಗುಡ್ಡ ಕಣಿವೆ ನದಿ ಪ್ರದೇಶಗಳಲ್ಲಿ ತಮ್ಮ ಬದುಕಿಗೆ ನೆಲೆಯನ್ನು ಕಂಡುಕೊಂಡವರು. ಕಾಡಿನ ಉತ್ಪನ್ನಗಳನ್ನು ನಾಡಿಗರಿಗೆ ನೀಡುವ ಮೂಲಕ ನಾಡಿನಿಂದ ತಮಗೆ ಪೂರಕವಾದ ಪದಾರ್ಥಗಳನ್ನು ಪಡೆಯುತ್ತಿದ್ದವರು, ಮತ್ತು ವಿನಿಮಯದ ಹೊರತಾಗಿ ಊರೊಟ್ಟಿಗಿನ ಸಂಬಂಧಗಳು ಇವರಲ್ಲಿಲ್ಲ. ಆದರೆ ಈ ವರ್ಗಗಳೊಂದಿಗೆ ಅಸ್ಪೃಶ್ಯತೆಯ ಮಡಿವಂತಿಕೆ ಸಲ್ಲುವುದಿಲ್ಲ. ಬುಡಕಟ್ಟು ಸಮುದಾಯಗಳು ಒಂದೊಂದು ಪ್ರದೇಶ ಹಾಗೂ ಭಿನ್ನವಾದ ಸಾಂಸ್ಕೃತಿಕ ಆಯಾಮಗಳಿಂದ ಚಹರೆಗಳನ್ನು ಉಳಿಸಿಕೊಂಡಿವೆ. ಗಾಂಧೀಜಿಯವರ ಹರಿಜನ-ಗಿರಿಜನ ಪರಿಕಲ್ಪನೆಯ ಚಹರೆಗಳು ಸಾಮಾಜಿಕ ಪರಿವೇಶಕ್ಕೆ ಕೊಟ್ಟ ವಿಶಿಷ್ಟ ಮಜಲುಗಳೆನಿಸಿದವು. ಆದರೆ ಇಂಥ ಚಹರೆಗಳಿಂದ ಭಾವೈಕ್ಯತೆಯನ್ನು ಸಾಯಿಸುವಂತಾಯಿತೇ ಹೊರತು ಆಂತರಂಗಿಕ ಬದಲಾವಣೆಗಳು ಆಗಲಿಲ್ಲ. ಹೀಗೆ ಸಮುದಾಯಗಳ ಚಹರೆಗಳು ಹಲವು ಕಾಲಘಟ್ಟಗಳಿಗೆ ಅನುಗುಣವಾಗಿ ಬದಲಾಗುತ್ತವೆ.

ಈ ಸಂಕೇತಗಳನ್ನು ಬೇರೆಯವರೂ ಬಳಸುತ್ತಾರೆ. ಸ್ವತಃ ಸಮುದಾಯಗಳೂ ಬಳಸುತ್ತಿವೆ.

ಚಹರೆಯ ಮುಂದುವರಿಕೆಯ ಸಮಸ್ಯೆಗಳು

ಹಳೆ ಬದುಕಿನ ಬದಲಾವಣೆ 'ಚಹರೆ'ಗಳನ್ನು ಪ್ರಭಾವಿಸುತ್ತಿರುವಾಗ ಹಳೆಯ 'ಚಹರೆ'ಯ ಉಳಿವು ಸಾಧ್ಯವೇ? ಹಳೆಯ 'ಚಹರೆ'ಗಳ ಉಳಿವಿನ ಪ್ರಶ್ನೆ ಕೇವಲ 'ಮಾನಸಿಕ' ಕಲ್ಪನೆಯಾಗಿ ಮಾತ್ರ ಉಳಿದಿದೆಯೇ? ಭೌತಿಕ ಸನ್ನಿವೇಶಗಳ ಬೆಂಬಲವಿಲ್ಲದೆ 'ಚಹರೆ'ಗಳ ಕಾಪಾಡುವಿಕೆ ಸಾಧ್ಯವೇ? ಯಾವುದೇ ಬುಡಕಟ್ಟು ಅಥವಾ ಮತ್ತಿತರ ಸಮುದಾಯಗಳಿಗೆ ತಮ್ಮದೇ ಆದ ಸಾಂಸ್ಕೃತಿಕ ಚಹರೆಗಳಿರುತ್ತವೆ. ಇಂಥ ಚಹರೆಯು ಸಾಮಾಜಿಕವಾಗಿ ಭದ್ರಗೊಳ್ಳಬೇಕಾದರೆ, ಅದು ಧಾರ್ಮಿಕ ಬೆಂಬಲವನ್ನು ಪಡೆದಿರುತ್ತದೆ. ಆ ಮೂಲಕ ಅದು ಆಚರಣೆ ಆರಾಧನೆಗಳ ಮೂಲಕ ಪರಂಪರಾನುಗತವಾಗಿ ಪರಿಚಲನಗೊಳ್ಳುತ್ತಿರುತ್ತದೆ. ಆದ್ದರಿಂದ ಸಮುದಾಯದ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಈ ಅಂಶವು ಅಡಕವಾಗಿರುತ್ತದೆ. ಕಾಲಾನುಕ್ರಮಕ್ಕನು ಗುಣವಾಗಿ ಆಧುನಿಕ ಪರಿಣಾಮಗಳಿಂದ ಇಲ್ಲವೇ ಅನ್ಯ ಸಂಸ್ಕೃತಿಗಳ ಪ್ರೇರಣೆಗಳಿಂದ 'ಚಹರೆ'ಗಳು ಪುನರ್‌ಸಮೀಕರಣಕ್ಕೆ ಒಳಗಾಗುತ್ತಿರುತ್ತವೆ. ಉದಾ. ದೇವರ ಮುಂದೆ

ದೀಪವಿರಿಸುವ ಆಚರಣೆ ವಿದ್ಯುತ್ ದೀಪಾಲಂಕಾರವಾಗಿರುವುದು ಆಧುನಿಕ ತಂತ್ರಜ್ಞಾನದ ಪರಿಣಾಮ. ವೈದಿಕ ಪರಂಪರೆಯ ಪೂಜೆ, ದೈವ, ಆಚರಣೆಗಳ ಪ್ರಭಾವ ಅಥವಾ ಶಿಷ್ಟ ದೈವಾಚರಣೆಗಳ ಪ್ರಭಾವ-ಪ್ರೇರಣೆಗಳು ಜನಪದರ ಜೀವನ ಶೈಲಿಯೊಂದಿಗೆ ಬೆರೆತು-ಬೆಸೆದುಕೊಳ್ಳುವ ಸಂದರ್ಭಗಳಲ್ಲಿ ಎರಡು ಚಹರೆಗಳ ನಡುವೆ ಹೊಂದಾಣಿಕೆ ಅಥವಾ ಘರ್ಷಣೆ ಏರ್ಪಡುತ್ತದೆ. ಹೊಂದಾಣಿಕೆಯಾದಾಗ ಎರಡೂ ಚಹರೆಗಳು ಉಳಿದು ಕೊಳ್ಳುತ್ತವೆ. ಘರ್ಷಣೆಯೇರ್ಪಟ್ಟಾಗ ಪ್ರಬಲವಾದದ್ದು ಆ ಸಂದರ್ಭಕ್ಕೆ ದುರ್ಬಲವೆನಿಸಿದ್ದರ ಅಸ್ತಿತ್ವವನ್ನು ಮರೆಮಾಚುತ್ತದೆ.

ಸಸ್ಯಾಹಾರಿ-ಶಾಖಾಹಾರಿ ಪರಂಪರೆಯ ದೈವದ ಆಚರಣೆಗಳು ಜನಪದ ಸಂಸ್ಕೃತಿಗೆ ಹಾಸು-ಹೊಕ್ಕಾಗಿ, ಜನಪದರ 'ಪ್ರಾಣಿಬಲಿ'ಯಂಥ ಆಚರಣೆಗಳಲ್ಲಾದ ಮಾರ್ಪಾಟುಗಳನ್ನು ಗಮನಿಸಬಹುದು. ಹಾಗೆಯೇ ಮಾಂಸಾಹಾರಿಗಳಾದ ಗುಡ್ಡಗಾಡು ಜನರ ಆಹಾರ ಪದ್ಧತಿ ಹಾಗೂ ಆಚರಣೆಗಳ ಮೇಲೆ ಅಯ್ಯಪ್ಪಸ್ವಾಮಿ ರಾಘವೇಂದ್ರಸ್ವಾಮಿ ಇತ್ಯಾದಿ ದೈವಗಳ ಆಚರಣೆಗಳು ತಂದ ಪರ್ಯಾಯಗಳು ಮುಖ್ಯವಾಗುತ್ತವೆ.

ಕೆಲವು ಚಹರೆಗಳ ಮೂಲಕ ಸಮಾಜದ ಉನ್ನತ ವರ್ಗವು ಬುಡಕಟ್ಟು ಸಂಸ್ಕೃತಿಯ ಅಥವಾ ಜನಪದ ಸಂಸ್ಕೃತಿಯ ಆಚರಣೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುತ್ತದೆ. ಅಂದರೆ ತಮ್ಮ ಸ್ವಾರ್ಥಕ್ಕೆ ಅನುಗುಣವಾಗಿ ಚಹರೆಗಳಿಗೆ ತಿರುವು ಕೊಡುತ್ತಿರುತ್ತದೆ. ಇಂಥ ಸಂದರ್ಭಗಳಲ್ಲಿ ಅಂಥ ಚಹರೆಗಳು ರಾಜಕೀಯದ ತಿರುವು ಪಡೆದು ಪರಿಹರಿಸಲಾಗದ ಸಮಸ್ಯೆಗಳಾಗಿ ಉಳಿದು ಬಿಡುತ್ತವೆ. ಉದಾ. ದೇವದಾಸಿ ಪದ್ಧತಿ, ಬೆತ್ತಲೆ ಸೇವೆ ಇತ್ಯಾದಿ.

ಬಾಲ್ಯವಿವಾಹ-ವಿಧವಾ ವಿವಾಹದಂತಹ ಸಮಸ್ಯೆಗಳನ್ನು ಬುಡಕಟ್ಟು ಹಾಗೂ ಶಿಷ್ಟ ಸಮಾಜಗಳ ವಲಯಗಳಲ್ಲಿಟ್ಟು ನೋಡುವಾಗ ಉಂಟಾಗುವ ಗೊಂದಲಗಳು ಗಮನೀಯ ವಾಗುತ್ತವೆ. ಏಕೆಂದರೆ ಶಿಷ್ಟ ಸಮಾಜಕ್ಕೆ ಆದರ್ಶವಾಗಿ ಕಂಡು ಬಂದದ್ದು ಬುಡಕಟ್ಟಿನಲ್ಲಿ ಸಹಜವಾದದ್ದಾಗಿರುತ್ತದೆ. ವಿಧವಾ ವಿವಾಹ ಪದ್ಧತಿಯು ಇಂದಿನ ಮುಂದುವರಿದ ಆಧುನಿಕ ಜಗತ್ತಿನ 'ಆಶಯ'ವಾದರೆ, ಬುಡಕಟ್ಟುಗಳಲ್ಲಿ 'ಕೂಡಿಕೆ' ಪರಂಪರಾಗತವಾಗಿ ರೂಢಿ ಯಲ್ಲಿದೆ. ಇಂದು ಅಕ್ಷರಸ್ಥ ಸಮುದಾಯದ ಉದ್ಯೋಗಸ್ಥ ವಿಧವೆ ಅಥವಾ ಮೇಲ್ವರ್ಗದ ಇಲ್ಲವೇ ಮೇಲುಜಾತಿಯ ವಿಧವೆ ಮರುವಿವಾಹದ ಆರ್ಥಿಕ ದುಷ್ಪರಿಣಾಮಗಳಿಗೆ ಹೆದರುವಂತೆ ಬುಡಕಟ್ಟುಗಳಲ್ಲಿ ಹೆದರುವ ಹಾಗಿಲ್ಲ. ಆದರೆ ಬುಡಕಟ್ಟು -ಶಿಷ್ಟಗಳ ಸಂಕರವೇರ್ಪಟ್ಟ ಸಂದರ್ಭಗಳಲ್ಲಿ ಏರು-ಪೇರುಗಳಾಗುತ್ತವೆ.

ಜಾಗತೀಕರಣದ ಇಂದಿನ ಸಂದರ್ಭದ ವಿದ್ಯಾಭ್ಯಾಸ ತಂತ್ರಜ್ಞಾನ ವಿಜ್ಞಾನಗಳಂಥ ಜ್ಞಾನ ವಲಯಗಳ ಪ್ರೇರಣೆ ಬಹುಪಾಲು ಸ್ಮರಣೀಯವೆನಿಸುವುದು ಮುಂದುವರಿದ ವರ್ಗಗಳಿಗೆ ಮಾತ್ರ. ವಿದ್ಯಾಭ್ಯಾಸ-ಉದ್ಯೋಗಗಳ ಸಂಬಂಧ ರೂಪಿಸುವ ಇಂದಿನ ಶಿಕ್ಷಣ ನಿರುದ್ಯೋಗಿ ಗಳನ್ನು ಅತಂತ್ರರನ್ನಾಗಿ ಮಾಡಿರುವುದು ನಿಜವಾದರೂ ಬುಡಕಟ್ಟು ವರ್ಗಗಳಿಗೆ ಅಸ್ತಿತ್ವವನ್ನೇ ಇಲ್ಲದಂತೆ ಮಾಡಿದೆ. ಏಕೆಂದರೆ ಪರಂಪರಾಗತ ವೃತ್ತಿಗಳಿಗೆ ಪ್ರಾಶಸ್ತ್ಯವೂ ಇಲ್ಲ. ಯುವ

ವರ್ಗಕ್ಕೆ ತಮ್ಮ ವೃತ್ತಿ ಅಪಮಾನಕರ ಹಾಗೆಯೇ ಆಧುನಿಕ ಬದುಕು ಗಗನ ಕುಸುಮ ಎನಿಸಿಬಿಟ್ಟಿದೆ.

ಹೀಗೆ ಯಾವುದೇ ಸಮಾಜದ ಸಾಂಸ್ಕೃತಿಕ ಚಹರೆಗಳು ಎಲ್ಲಿಂದೆಲ್ಲಿಗೋ ಕವಲೊಡೆದಿರುತ್ತವೆ. ಎಲ್ಲೆಲ್ಲೋ ಬೇರೂರಿ ಹಲವು ಸ್ವರೂಪಗಳಲ್ಲಿ ಅಸ್ತಿತ್ವವನ್ನು ಬದಲಿಸುತ್ತಿರುತ್ತವೆ; ಗಟ್ಟಿಗೊಳ್ಳುತ್ತವೆ; ಟೊಳ್ಳಾಗುತ್ತವೆ; ಸರಿಯಾಗುತ್ತವೆ. ಇಲ್ಲಿ ಉಂಟಾಗುವ ತಪ್ಪುಗಳಿಗೆ ನಾಗರೀಕತೆಯ ಸ್ವಾರ್ಥವೇ ಸಾಧನವಾಗಿರುತ್ತದೆ.

ಆದ್ದರಿಂದ ಇಂದು ಅರಣ್ಯವಾಸಿ ಸಮುದಾಯಗಳನ್ನು ಹೊರತುಪಡಿಸಿದರೆ ಉಳಿದ ಬುಡಕಟ್ಟುಗಳ ಚಹರೆ ಒಂದು 'ಪರಿಭಾವನೆ'ಯಾಗಿ ಹೆಚ್ಚು ಚಾಲ್ತಿಯಲ್ಲಿದೆ.

ಈ ಪರಿಭಾವನೆ ಚಾಲ್ತಿಯಲ್ಲಿರುವುದು

ಮತ ಬ್ಯಾಂಕಾಗಿ: ಚುನಾವಣೆಗಳಲ್ಲಿ ಒಬ್ಬ ವ್ಯಕ್ತಿಗೆ ಒಂದು 'ಮತ'(ಓಟು) ಎಂದು ಜಾತಿ-ಮತಗಳ ಅಂತರವಿಲ್ಲದೆ ಸಮಾನತೆ ಒಂದೆಡೆಯಾದರೆ ಚುನಾಯಿತ ಅಭ್ಯರ್ಥಿಗೆ ಜಾತಿ ಮತಗಳು ಮುಖ್ಯವಾಗುತ್ತವೆ.

ದೈವಕ್ಕೆ ನಡೆದುಕೊಳ್ಳುವ ಗುಂಪಾಗಿ: ದೇವರು ಒಬ್ಬನೇ ನಾಮ ಹಲವು ಎಂಬ ಸಮಾನತೆಯ ಸೂತ್ರ ಒಂದೆಡೆ, ವಿವಿಧ ಧರ್ಮಗಳ ತಾತ್ವಿಕ ವೈರುದ್ಧ್ಯಗಳು ಮತ್ತೊಂದೆಡೆ, ಮತಾಂತರಗಳು ಇನ್ನೊಂದೆಡೆ ಭಿನ್ನವಾಗಿರುತ್ತವೆ.

ಕುಲ ಮೂಲ ಭಾವನೆಯ ಸ್ಮೃತಿಯಾಗಿ: ಮನುಷ್ಯಕುಲ ಒಂದೇ ಆದರೆ ಹಲವು ಸಮುದಾಯಗಳ ನೆಲೆಯಲ್ಲಿ ಸಮ್ಮಿಶ್ರತೆ ಮತ್ತು ಪ್ರತ್ಯೇಕಗಳು ಸಂದರ್ಭಗಳಿಗೆ ಅನುಗುಣವಾಗಿ ಕೆಲಸ ಮಾಡುತ್ತವೆ.

ನಿಷೇಧಗಳ ತೆಳು ಆಚರಣೆಯಾಗಿ: ಪ್ರತ್ಯೇಕ ಸಮುದಾಯಗಳಿಗೆ ಸಂಬಂಧಿಸಿದ ಆಚರಣೆಗಳು-ನಿಷೇಧಗಳು ಆಯಾ ಸಮುದಾಯದ ಭೂತಕಾಲದ ಘಟನೆಗಳನ್ನು ಆಧರಿಸಿರುತ್ತವೆ. ರಾಷ್ಟ್ರೀಯತೆಯ ಪರಿಕಲ್ಪನೆಗೆ ಎಲ್ಲರನ್ನೂ ಒಗ್ಗೂಡಿಸುವಾಗ ಸಂಘರ್ಷಗಳು ವೈರುಧ್ಯಗಳು ಕಾಣಿಸುತ್ತವೆ. ಉದಾ. ದೇವದಾಸಿ ಪದ್ಧತಿ, ಬಹು ಪತಿತ್ವ-ಪತ್ನಿತ್ವ, ಮಾಂಸಾಹಾರ ಪದ್ಧತಿ-ಗೋಮಾಂಸ ನಿಷೇಧ ಇತ್ಯಾದಿ. (ತೆಳು ಯಾಕೆಂದರೆ ಕೋಳಿ ತಿನ್ನಬಾರದೆಂಬ ಮ್ಯಾಸಬ್ಯಾಡರ ಇಡೀ ಸಮುದಾಯ ಆ ನಿಷೇಧವನ್ನು ಕಟ್ಟುನಿಟ್ಟಾಗಿ ಇಟ್ಟುಕೊಂಡಿದೆಯೇ? ಇತ್ಯಾದಿ).

ಆದಿವಾಸಿ ಚಹರೆಯ ತಾತ್ವಿಕ ಚರ್ಚೆ

ಬುಡಕಟ್ಟುಗಳು ತಮ್ಮ ಬುಡಕಟ್ಟು ಸ್ವಭಾವಗಳನ್ನು ನಿರಂತರವಾಗಿ ಬದಲಿಸಿಕೊಳ್ಳುತ್ತಿರುವಾಗ ಅದರ ಚಹರೆಗಳು ಕೂಡ ಬದಲಾಗುತ್ತವೆ. ಆದರೆ ಸಮುದಾಯ ಸ್ಮೃತಿ ಕೋಶ ಅದನ್ನೊಂದು 'ಜಾತಿ' ಕಲ್ಪನೆಯಾಗಿ ಉಳಿಸಿಕೊಳ್ಳುತ್ತದೆ. ನಾಗರೀಕ ಸಮಾಜದ ವೃತ್ತಿ ಧರ್ಮಗಳಿಗೆ ಅನುಗುಣವಾಗಿ ಪಟ್ಟಣ-ನಗರಗಳೊಂದಿಗೆ ಬೆರೆಯುವಾಗ ತಮ್ಮ ಊರು,

ಧರ್ಮದ ಜನರೊಂದಿಗೆ ತಮ್ಮದೆ ಆದ ಆಚರಣೆಗಳಲ್ಲಿ ಒಂದೆಡೆ ಸೇರುತ್ತಾರೆ. ಉದಾ. ಬೆಂಗಳೂರಿನ ಕೊಡವ ಸಮಾಜ, ತುಳುಕೂಟ, ಕೊಂಕಣಿ ಸಮಾಜ ಇತ್ಯಾದಿ.

ಬುಡಕಟ್ಟು ಚಹರೆ ಬದಲಾಗಿ ಪ್ರಧಾನ ಸಮಾಜದೊಳಗೆ ಒಂದು 'ಜಾತಿ ಅಸ್ಮಿತೆ'ಯಾಗಿ ನೆಲೆಗೊಳ್ಳುವ ಈ ಪ್ರಕ್ರಿಯೆಗೆ ನೂರಾರು ವರ್ಷಗಳ ಇತಿಹಾಸವಿದೆ. ದೇವಿ ಪ್ರಸಾದ್ ಚಟ್ಟೋಪಾಧ್ಯಾಯರು ಹೇಳುವ ಹಾಗೆ, ಇಂದಿನ ನೂರಾರು ಜಾತಿಗಳು "Half completed de-tribalization" ಪ್ರಕ್ರಿಯೆಯಿಂದಾಗಿ ರೂಪುಗೊಂಡಿವೆ.

ಅಂದರೆ ಬುಡಕಟ್ಟು ಚಹರೆ 'ಜಾತಿಅಸ್ಮಿತೆ'ಯಾಗಿ ರೂಪುಗೊಂಡೊಡನೆ ಅದರ 'ಕ್ರಿಯಾತ್ಮಕ'ಚಹರೆ ಬದಲಾಗಿ 'ಪರಿಭಾವಿತ'ಚಹರೆಯಾಗಿ ನೆಲೆಗೊಳ್ಳುತ್ತದೆ.

ಭಾರತದಲ್ಲಿರುವ ಬಹು ಸಂಸ್ಕೃತಿಗಳನ್ನು ನಿಶ್ಚಿಂತವಾಗಿ ಬದುಕಲು ಬಿಡಬೇಕಾಗಿದೆ. ಜೊತೆಗೆ ಅವರ ಬದಲಾವಣೆಯನ್ನು ಅವರೇ ಮಾಡಿಕೊಳ್ಳುವಂತೆ ಪ್ರೇರೇಪಿಸಬೇಕಾಗಿದೆ. ಅವರ ಬದಲಾವಣೆಯಲ್ಲಿ ಶಿಕ್ಷಣ ಅತಿ ಮುಖ್ಯವಾದುದಾಗಿರುತ್ತದೆ. ಶಿಕ್ಷಣವನ್ನು ಅವರ ಭಾಷೆಯಲ್ಲಿ ಅಂದರೆ ಬುಡಕಟ್ಟು ಜನರು ಯಾವ ಭಾಷೆಯನ್ನು ಮಾತನಾಡುತ್ತಾರೋ ಆ ಭಾಷೆಯಲ್ಲಿ ಒದಗಿಸಬೇಕು. ಹೀಗೆ ಮಾಡುವದರಿಂದ ಅವರ ಭಾವನೆಗಳನ್ನು ಪ್ರಕಟಿಸಲು ಅನುಕೂಲಕರವಾಗುತ್ತದೆ. ಏಕೆಂದರೆ ಭಾಷೆ ಮಾನವನ ಆಲೋಚನಾ ವಿಧಾನವನ್ನು ವ್ಯವಸ್ಥಿತವಾಗಿ ರೂಪಿಸುತ್ತದೆ. ಆ ಮೂಲಕ ಅದು ಭಾವನಾ ವಾಹಕವಾಗಿ ಕೆಲಸ ಮಾಡುತ್ತದೆ. ಭಾಷೆಗೂ, ಭಾವನೆಗೂ ಅವಿನಾಭಾವ ಸಂಬಂಧವಿದೆ. ಒಂದನ್ನು ಬಿಟ್ಟು ಮತ್ತೊಂದು ಇರಲಾರದು. ಅವರ ಭಾಷೆಯಲ್ಲಿ ಶಿಕ್ಷಣ ಕೊಡುವುದರಿಂದ ಸಾಂಸ್ಕೃತಿಕ ಚಹರೆಯನ್ನು ಗುರುತಿಸಿಕೊಳ್ಳಲು ಸಹಾಯಕಾರಿಯಾಗುತ್ತದೆ. ಏಕೆಂದರೆ ಇಂದಿನ ವ್ಯವಸ್ಥೆಯಲ್ಲಿ ಸಾಂಸ್ಕೃತಿಕ ಚಹರೆಯನ್ನು ಗುರುತಿಸಿಕೊಳ್ಳಲು ರಕ್ತಸಂಬಂಧ, ಜಾತಿ ಧರ್ಮಗಳಿಗಿಂತಲೂ ಭಾಷೆ ಪ್ರಮುಖ ಪಾತ್ರವಹಿಸುತ್ತದೆ.

ಆಧಾರ ಗ್ರಂಥಗಳು

೧. ಕೃಷ್ಣಮೂರ್ತಿ ಹನೂರು, ೧೯೯೩, **ಮ್ಯಾಸಬೇಡರ ಸಂಸ್ಕೃತಿ**, ಬೆಂಗಳೂರು, ಕರ್ನಾಟಕ ಸಾಹಿತ್ಯ ಅಕಾಡೆಮಿ.

೨. ಪುರುಷೋತ್ತಮ ಬಿಳಿಮಲೆ, ೧೯೯೭, **ಕೂಡುಕಟ್ಟು**, ಮಲ್ಲಾಡಿಹಳ್ಳಿ, ಆನಂದಕಂದ ಗ್ರಂಥಮಾಲೆ.

೩. ಭೈರೇಗೌಡ ಎಂ., ೧೯೯೩, **ಜಾನಪದ ವೈವಿಧ್ಯ**, ಬೆಂಗಳೂರು, ಶಕ್ತಿ ಮುದ್ರಣ ಮತ್ತು ಪ್ರಕಾಶನ.

೪. ಮಂಜುನಾಥ ಬೇವಿನಕಟ್ಟಿ, ೧೯೯೪, **ಜನಪದ ಸಂಸ್ಕೃತಿ**, ಹ್ಯಾರಡ, ತೇಜಸ್ವಿ ಪ್ರಕಾಶನ.

೫. ಮಂಜುನಾಥ ಬೇವಿನಕಟ್ಟಿ, ೨೦೦೪, **ದೇಶಿV/sಜಾಗತೀಕರಣ**, ಬೆಂಗಳೂರು, ಸಿವಿಜಿ ಪಬ್ಲಿಕೇಷನ್ಸ್.

೬. ಡಾ. ಮೀರಾಸಾಬಿಹಳ್ಳಿ ಶಿವಣ್ಣ, ೨೦೦೩, **ಮ್ಯಾಸಮಂಡಲ**, ಬೆಂಗಳೂರು, ಕನ್ನಡ ಪುಸ್ತಕ ಪ್ರಾಧಿಕಾರ.

೭. ಹಿರಿಯಣ್ಣ ಅಂಬಳಿಕೆ., ೧೯೯೨, ಸೈದ್ಧಾಂತಿಕ ಜಾನಪದ, ಮೈಸೂರು, ಪ್ರಜ್ವಲ ಪ್ರಕಾಶನ.

೮. Bruck Ulla, 1998, **Identity, Local Community and local Identity** (In Tradition and Cultural Identity (Ed)Lauri Honko) Turku: Nordic Institute of Folklore.

೯. Honko Lauri, 1998, **Studies of Tradition and Cultural Identity- An Introduction** (In Tradition and Cultural Identity (Ed) Lauri Honko) Turku: Nordic Institue of Folklore.

೨೧, ೨೨ ಹಾಗೂ ೩೩.೨.೨೦೦೬ರಂದು Indian National confederation and Academy of Anthropologists, Kolkata ಅವರ 2nd Inter Congress ನ "Tribe, State and Empowerment: The Indian Experience" ಎಂಬ ವಿಚಾರಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

೨

ಬುಡಕಟ್ಟು ಸಮಸ್ಯೆ ಮತ್ತು ಅಭಿವೃದ್ಧಿ: ಸಮಾಜಶಾಸ್ತ್ರೀಯ ದೃಷ್ಟಿಕೋನ

ಡಾ ಎಂ ಗುರುಲಿಂಗಯ್ಯ

[ಡಾ ಎಂ ಗುರುಲಿಂಗಯ್ಯ ಅವರು ಮಂಗಳೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಅಧ್ಯಕ್ಷರು. ಹುಟ್ಟಿನಿಂದಲೂ ಬುಡಕಟ್ಟು ಬದುಕು ಅನುಭವಿಸಿರುವ ಅವರು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ಬುಡಕಟ್ಟುಗಳ ಸಮಸ್ಯೆ ಮತ್ತು ಅಭಿವೃದ್ಧಿಯ ಘಟ್ಟಗಳನ್ನು ಇಲ್ಲಿ ವಿವರಿಸಿದ್ದಾರೆ.]

ಭಾರತೀಯ ಸಮಾಜವು ವಿವಿಧ ಧರ್ಮ, ಭಾಷೆ, ಸಮುದಾಯ, ಜನಾಂಗ ಮತ್ತು ಬುಡಕಟ್ಟುಗಳಿಂದ ಕೂಡಿದ ಸಮಾಜವಾಗಿದ್ದು, ಸಂಕೀರ್ಣ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದೆ. ಈ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ ಏಕತೆಗಿಂತಲೂ ಹೆಚ್ಚಿಗೆ ಭಿನ್ನತೆಯ ವಿವಿಧ ಅಂಶಗಳನ್ನು ಕಾಣಬಹುದು. ಹೋಲಿಕೆಯ ಮತ್ತು ವಿವಿಧತೆಯ ಅಂಶಗಳು ಒಂದೇ ವಿಸ್ತೃತ ಸಮಾಜವಾದ ಭಾರತದಲ್ಲಿ ಬೇರೆ ಬೇರೆ ಸಾಮಾಜಿಕ ಗುಂಪುಗಳಲ್ಲಿ ಕಂಡು ಬರುತ್ತವೆ. ಈ ಸಾಮಾಜಿಕ ಗುಂಪುಗಳು ಒಂದೇ ಸಮಾಜದಲ್ಲಿ ವಿವಿಧ ಸಂಸ್ಕೃತಿಗಳನ್ನು ಪ್ರತಿನಿಧಿಸುತ್ತವೆ. ಉಪಸಂಸ್ಕೃತಿಗಳು ಮುಖ್ಯ ಸಮಾಜದ ಭಾಗವಾಗಿದ್ದಾಗ್ಯೂ ತಮ್ಮ ಪ್ರತ್ಯೇಕತೆ ಮತ್ತು ಅಸ್ಮಿತತೆಯನ್ನು ಉಳಿಸಿಕೊಂಡಿವೆ. ಭಾರತೀಯ ಸಮಾಜವನ್ನು ಒಂದು ಸಮಷ್ಠಿ ದೃಷ್ಟಿಯಿಂದ ನೋಡಿದಾಗ್ಯೂ, ಇದರೊಳಗಡೆ ಇರುವ ಇತರ ಉಪಸಂಸ್ಕೃತಿಗಳ ಅನನ್ಯತೆಯನ್ನು ಮರೆಯುವಂತಿಲ್ಲ. ಈ ಸಮಾಜದಲ್ಲಿ ನಾವು ನಗರ ಸಮಾಜ, ಗ್ರಾಮೀಣ ಸಮಾಜ ಎಂಬ ಬೇಧಗಳನ್ನು ಮಾಡುವುದರೊಂದಿಗೆ ಬುಡಕಟ್ಟು ಸಮಾಜ ಅಥವಾ ಸಂಸ್ಕೃತಿ ಎಂಬ ಮತ್ತೊಂದು ಸಮಾಜವನ್ನು ಗುರುತಿಸುತ್ತೇವೆ. ಬುಡಕಟ್ಟು ಸಮಾಜ ಬೇರೆ ಸಮಾಜಕ್ಕಿಂತ ಸರ್ವ ವಿಧದಲ್ಲಿಯೂ ಭಿನ್ನವಾಗಿರುತ್ತದೆ.

ಬುಡಟ್ಟುಗಳ ಇತಿಹಾಸವನ್ನು ನಾವು ಹುಡುಕ ಹೊರಟರೆ ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ವಿವಿಧ ಮಾನವ ಜನಾಂಗಗಳಿಗೆ ಸೇರಿದ ಬುಡಕಟ್ಟುಗಳು ಕಂಡುಬರುತ್ತವೆ. ಬುಡಕಟ್ಟುಗಳೆಂದು ಕರೆಯಲ್ಪಡುವ ಆದಿವಾಸಿಗಳು ಪ್ರಪಂಚದಾದ್ಯಂತ ಹಂಚಿಹೋಗಿದ್ದಾರೆ.

ಭಾರತದಲ್ಲಿ ಬುಡಕಟ್ಟು ಜನರು ಸಾಮಾನ್ಯವಾಗಿ ಎಲ್ಲಾ ವಲಯಗಳಲ್ಲಿ ಕಂಡುಬರುತ್ತಾರೆ. ಮುಖ್ಯವಾಗಿ ಬೆಟ್ಟ ಗುಡ್ಡ, ಕಾಡು ಮೇಡು, ಗಿರಿ ಶಿಖರ, ಕಣಿವೆ, ಕಾನನ ಹಾಗೂ ಕರಾವಳಿ ತಪ್ಪಲಿನ ಪಶ್ಚಿಮ ಘಟ್ಟಗಳಲ್ಲಿ ವಾಸಿಸುವ ಬುಡಕಟ್ಟು ಜನರನ್ನು ಕಾಣಬಹುದು. ದೇಶದ ಉದ್ದಗಲಕ್ಕೂ ಬುಡಕಟ್ಟು ಜನರು ಹಂಚಿಹೋಗಿದ್ದು, ಹಲವು ಬುಡಕಟ್ಟುಗಳು ಗುರುತಿಸಲ್ಪಡದೇ ಅಭಿವೃದ್ಧಿಯ ವಾಹಿನಿಯಿಂದ ದೂರ ಉಳಿದಿವೆ ಮತ್ತು ಸಮಸ್ಯೆಗಳನ್ನು ಎದುರಿಸುತ್ತಿವೆ. ಕೆಲವು ಬುಡಕಟ್ಟುಗಳು ಭಾರತದ ಜಾತಿ ವ್ಯವಸ್ಥೆಯ ಪ್ರಭಾವಕ್ಕೊಳಗಾಗಿ ಬದಲಾವಣೆಯ ಗಾಳಿಯಲ್ಲಿ ಸಿಲುಕಿವೆ.

ಬುಡಕಟ್ಟು ಜನರು ಮುಖ್ಯ ಸಮಾಜದೊಂದಿಗೆ ದೂರವಿದ್ದುದರಿಂದ ಮತ್ತು ಸಾಂಸ್ಕೃತಿಕವಾಗಿ ಮತ್ತು ಭೌಗೋಳಿಕವಾಗಿ ಪ್ರತ್ಯೇಕವಾಗಿದ್ದುದರಿಂದ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವರು ಪ್ರಾಚೀನ ಸಮುದಾದವರಾಗಿದ್ದುದೇ ಇವರ ಹಿಂದುಳಿದಿರುವಿಕೆಗಳ ಕಾರಣಗಳಲ್ಲಿ ಒಂದು ಎನ್ನಬಹುದು. ಬುಡಕಟ್ಟಿನ ಸಂಸ್ಕೃತಿ ಬಹಳ ಶ್ರೀಮಂತವಾಗಿದ್ದರೂ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳಲ್ಲಿ ಬುಡಕಟ್ಟುಗಳು ಅತ್ಯಂತ ಹಿಂದುಳಿದಿವೆ. ಭಾರತದಲ್ಲಿ ಬುಡಕಟ್ಟು ಜನರು ಎದುರಿಸುವ ಪ್ರಮುಖ ಸಮಸ್ಯೆಗಳೆಂದರೆ, ಭೂಮಿ, ಬಡತನ, ಋಣಭಾರ, ಅನಕ್ಷರತೆ, ಆರೋಗ್ಯ, ನಿರುದ್ಯೋಗ, ವಸತಿ, ಸಂಪರ್ಕ, ಶೋಷಣೆ, ಅಮಾನವೀಯ ಪದ್ಧತಿಗಳು, ಬುಡಕಟ್ಟಾಗದ ಸಮಸ್ಯೆ, ಮಿಳಿತವಾಗದ ಸಮಸ್ಯೆ ಮುಂತಾದವು.

ಭಾರತದ ಬಹುತೇಕ ಬುಡಕಟ್ಟು ಜನರು ಬಡತನದ ರೇಖೆಗಿಂತ ಕೆಳಗಿದ್ದಾರೆ. ಅಂದರೆ ಇವರು ತಮ್ಮ ಜೀವಮಾನವನ್ನೆಲ್ಲಾ ಬಡತನದಲ್ಲಿಯೇ ಕಳೆಯಬೇಕಾಗುತ್ತದೆ. ಯಾವುದೇ ಆರ್ಥಿಕ ಸಂಪನ್ಮೂಲಗಳು ಇವರಿಗೆ ಲಭ್ಯವಾಗುವುದಿಲ್ಲ. ಇವರ ಬಡತನಕ್ಕೆ ಇವರ ಅನಕ್ಷರತೆಯೇ ಮುಖ್ಯ ಕಾರಣ ಎನ್ನಬಹುದು. ಬುಡಕಟ್ಟಿನ ಜನರು ಅನೇಕ ಸಮಸ್ಯೆಗಳಿಗೆ ತುತ್ತಾಗುತ್ತಾರೆ. ಭಾರತದಲ್ಲಿ ಶೇಕಡ ೮೫ ಕ್ಕಿಂತಲೂ ಹೆಚ್ಚು ಬುಡಕಟ್ಟು ಜನರು ಬಡತನದ ರೇಖೆಗಿಂತ ಕೆಳಗಿದ್ದಾರೆ. ಇದು ಇವರ ಬಡತನದ ಮಟ್ಟವನ್ನು ತೋರಿಸುತ್ತದೆ. ಉದಾಹರಣೆಗೆ ಕರ್ನಾಟಕದ ಸಂದರ್ಭದಲ್ಲಿ ಹೇಳುವುದಾದರೆ ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಿದ ಸಾಮಾಜಿಕ ಆರ್ಥಿಕ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಶೇಕಡ ೬೧ ಗ್ರಾಮೀಣ ಬುಡಕಟ್ಟುಗಳ ಕುಟುಂಬಗಳು ಬಡತನ ರೇಖೆಗಿಂತ ಕೆಳಗಿವೆ. ಭಾರತದ ಬುಡಕಟ್ಟುಗಳಲ್ಲಿ ಅನಕ್ಷರತೆಯ ಪ್ರಮಾಣ ಅಧಿಕ ಇದೆ. ಇವರಲ್ಲಿ ಅಕ್ಷರ ಸಂಸ್ಕೃತಿಯಿರುವವರು ವಿರಳ. ೨೦೦೧ರ ಜನಗಣತಿಯ ಪ್ರಕಾರ ಬುಡಕಟ್ಟು ಸಾಕ್ಷರತೆ ೨೯.೬೦%ರಷ್ಟಿದ್ದು, ಒಟ್ಟಾರೆ ದೇಶದ ಸಾಕ್ಷರತೆ ೬೭.೧%ರಷ್ಟಿದೆ. ಅಂದರೆ ದೇಶದ ಸರಾಸರಿ ಸಾಕ್ಷರತೆ ಶೇಕಡ ೧೦ಕ್ಕಿಂತಲೂ ಕಡಿಮೆ ಇದೆ. ಅಂದರೆ ಇವರಲ್ಲಿ ಓದು ಬರಹ ಬರುವವರ ಸಂಖ್ಯೆ ಇಷ್ಟಾದರೆ, ಔಪಚಾರಿಕವಾಗಿ ಶಾಲಾ ಕಾಲೇಜುಗಳಿಗೆ ಹೋಗುವವರ ಪ್ರಮಾಣ ಇಲ್ಲವೇ ಇಲ್ಲ ಎನ್ನಬಹುದು. ಇತ್ತೀಚೆಗೆ ಬುಡಕಟ್ಟು ಜನರಲ್ಲಿ ಅಲ್ಲೊಬ್ಬ ಇಲ್ಲೊಬ್ಬ ಶಾಲೆಗೆ ಹೋಗುತ್ತಿದ್ದಾರೆ. ಒಂದು ವೇಳೆ

ಶಾಲೆಗೆ ಹೋದರೂ ಮಧ್ಯದಲ್ಲಿಯೇ ಶಾಲೆ ಬಿಡುವವರ ಸಂಖ್ಯೆ ಹೆಚ್ಚು. ಉನ್ನತ ಶಿಕ್ಷಣವಂತೂ ಇವರಿಗೆ ಕನಸಿನ ಮಾತು. ಅನಕ್ಷರತೆಯೇ ಬುಡಕಟ್ಟು ಜನರ ಎಲ್ಲಾ ಸಮಸ್ಯೆಗಳಿಗೆ ಮೂಲ. ಇದರಿಂದಾಗಿ ಅಜ್ಞಾನ, ಮೂಢನಂಬಿಕೆ, ದೌರ್ಜನ್ಯಕ್ಕೆ ಒಳಗಾಗುವುದು ಹೆಚ್ಚಾಗುತ್ತದೆ. ಉದಾಹರಣೆಗೆ ಮಿಜೋರಾಂನ ಬುಡಕಟ್ಟುಗಳಲ್ಲಿ ಸಾಕ್ಷರತೆ ಪ್ರಮಾಣ ಶೇಕಡ ೮೨ರಷ್ಟಿದ್ದರೆ, ದಕ್ಷಿಣ ಭಾರತದ ಬುಡಕಟ್ಟುಗಳಲ್ಲಿ ಇದು ಶೇಖಡ ೨೦ಕ್ಕಿಂತಲೂ ಕಡಿಮೆ ಇದೆ. ಇತ್ತೀಚೆಗೆ ಸಾಕ್ಷರಸ್ಥರ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರಗಳು ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿವೆ. ಅದರಿಂದಾಗಿ ಸಾಕ್ಷರತೆಯ ಪ್ರಮಾಣ ಬುಡಕಟ್ಟುಗಳಲ್ಲಿ ನಿಧಾನಗತಿಯಲ್ಲಿ ಹೆಚ್ಚುತ್ತಿದ್ದು, ಇದೊಂದರಿಂದಲೇ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುತ್ತಿಲ್ಲ.

ಬುಡಕಟ್ಟುಗಳನ್ನು ಬೆಂಬಿಡದೆ ಕಾಡುತ್ತಿರುವ ಸಮಸ್ಯೆಗಳಲ್ಲಿ ನಿರುದ್ಯೋಗ ಮತ್ತು ಅರೆನಿರುದ್ಯೋಗ ಮುಖ್ಯವಾದಂತಹ ಸಮಸ್ಯೆಯಾಗಿವೆ. ಇವರು ಪ್ರತ್ಯೇಕವಾಗಿ ತಮ್ಮದೇ ಆದ ನೆಲೆಗಳಲ್ಲಿ ವಾಸಿಸುವುದರಿಂದ ನಗರ ಸಮಾಜದಲ್ಲಿ ದೊರೆಯುವಂತಹ ಉದ್ಯೋಗದ ಅವಕಾಶಗಳು ಬುಡಕಟ್ಟು ಜನರಿಗೆ ದೊರೆಯುವುದಿಲ್ಲ. ಸಾಂಪ್ರದಾಯಿಕ ಕಸುಬುಗಳನ್ನು ಬಿಟ್ಟರೆ ಅಸಂಪ್ರದಾಯಿಕ ಜಾತಿ ಮುಕ್ತ ಉದ್ಯೋಗದ ಅವಕಾಶಗಳು ಇವರಿಗೆ ದೊರೆಯುವುದಿಲ್ಲ. ಇವರಲ್ಲಿ ಸರ್ಕಾರಿ ಹುದ್ದೆಗಳಲ್ಲಿರುವವರು ತುಂಬಾ ಕಡಿಮೆ. ಶೇಕಡ ಒಂದಕ್ಕಿಂತಲೂ ಕಡಿಮೆ ಎಂದರೆ ತಪ್ಪಾಗಲಾರದು. ಇನ್ನು ಇವರು ಕೈಗೊಳ್ಳುವ ದಿನನಿತ್ಯದ ಸಣ್ಣಪುಟ್ಟ ಬುಡಕಟ್ಟು ಕುಲಕಸುಬುಗಳಿಂದ ಇವರಿಗೆ ವರ್ಷದ ಎಲ್ಲಾ ದಿನಗಳಲ್ಲಿ ಉದ್ಯೋಗ ಸಿಗುವುದಿಲ್ಲ. ಒಂದು ವೇಳೆ ಸಿಕ್ಕರೂ ಇವರ ಆರ್ಥಿಕ ಜೀವನಕ್ಕೆ ಸಾಕಾಗುವಷ್ಟು ಆದಾಯ ಬರುವುದಿಲ್ಲ. ಬುಟ್ಟಿ ಹೆಣೆಯುವುದರಿಂದಾಗಲೀ ಇಲ್ಲವೇ ಕಾಡಿನಲ್ಲಿ ಗೆಡ್ಡೆ, ಗೆಣಸು ಸಂಗ್ರಹಿಸಿ ಮಾರಾಟ ಮಾಡುವುದರಿಂದಲೂ ಇವರ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಿಲ್ಲ. ಇವರ ನಿರುದ್ಯೋಗಕ್ಕೆ ಕಾರಣ, ಇವರು ವಿದ್ಯಾವಂತರಾಗದೇ ಇರುವುದು ಮತ್ತು ಶಿಕ್ಷಣದ ಅವಕಾಶಗಳ ಕೊರತೆಯಿಂದಾಗಿ.

ಬುಡಕಟ್ಟಿನ ಜನರು ಸರ್ವಚೇತನವಾದಿಗಳಾದುದರಿಂದ ಅನಾರೋಗ್ಯದ ನಿವಾರಣೆಗೆ ಇವರು ದೇವರಿಗೆ ಮೊರೆಹೋಗುತ್ತಾರೆ. ಆದುದರಿಂದ ಬುಡಕಟ್ಟು ಜನರು ಅನೇಕ ರೋಗ ರುಜಿನಗಳಿಂದ ಬಳಲುತ್ತಾರೆ. ಆರೋಗ್ಯಕ್ಕೆ ಸಂಬಂಧಪಟ್ಟ ಅರಿವಿನ ಕೊರತೆಯಿಂದಾಗಿ ಅನಾರೋಗ್ಯ ಸಮಸ್ಯೆ ಇವರಲ್ಲಿ ಗಂಭೀರ ಸಮಸ್ಯೆಯಾಗಿದೆ. ನೈರ್ಮಲ್ಯದ ಕೊರತೆ ಮತ್ತು ಆಸ್ಪತ್ರೆಗಳ ಸೌಲಭ್ಯಗಳ ಕೊರತೆಯಿಂದಾಗಿ ಅನೇಕ ಗಂಭೀರ, ವಾಸಿಯಾಗದಂತಹ ಕಾಯಿಲೆಗಳಿಗೆ ತುತ್ತಾಗಿ ಸಾಯುವವರ ಪ್ರಮಾಣ ಜಾಸ್ತಿ. ಕೆಲವು ಬುಡಕಟ್ಟುಗಳ ಮಹಿಳೆಯರಲ್ಲಿ ಹೆರಿಗೆಯ ಸಮಯದಲ್ಲಿ ತಾಯಿ ಮತ್ತು ಮಗು ಸಾವನ್ನಪ್ಪುವ ಪ್ರಸಂಗಗಳು ಹೆಚ್ಚಾಗಿವೆ. ಇದಕ್ಕೆ ಇವರಲ್ಲಿನ ಮೂಢನಂಬಿಕೆಗಳೇ ಕಾರಣ. ಬಹುತೇಕ ಬುಡಕಟ್ಟು ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳೇ ಇಲ್ಲ. ಇದ್ದರೂ ವೈದ್ಯರ ಕೊರತೆ

ಮತ್ತು ಅವರ ಕಾಳಜಿ, ಬದ್ಧತೆಯ ಕೊರತೆ. ಶುಚಿತ್ವದ ಬಗ್ಗೆ ಕೆಲವು ಬುಡಕಟ್ಟುಗಳಲ್ಲಿ ಅರಿವು ಇರದ ಕಾರಣ ನಾನಾ ತರಹದ ಚರ್ಮದ ವ್ಯಾದಿಗಳಿಗೆ ಬಲಿಯಾಗಬೇಕಾಗುತ್ತದೆ. ಕೆಲವು ಬುಡಕಟ್ಟು ಜನರು ಅಂಟುರೋಗಗಳಿಂದಾಗಿ ಬಳಲುತ್ತಿದ್ದಾರೆ. ಗುಣಪಡಿಸಲಾಗದ ರೋಗಗಳಿಂದಾಗಿ ಇವರ ಜೀವನದ ಅವಧಿ ಕಡಿಮೆಯಾಗುತ್ತದೆ. ಇತ್ತೀಚೆಗೆ ಸರ್ಕಾರದ ಕೆಲವು ಆರೋಗ್ಯ ಕಾರ್ಯಕ್ರಮಗಳಿಂದಾಗಿ ಅಲ್ಲಲ್ಲಿ ಆರೋಗ್ಯದ ಅರಿವಿನ ಬಗ್ಗೆ ಕಾರ್ಯಗಳು ನಡೆಯುತ್ತಿವೆ. ಸ್ವಲ್ಪ ಮಟ್ಟಿನ ಆರೋಗ್ಯದ ಬಗೆಗಿನ ಅರಿವು ಬುಡಕಟ್ಟು ಜನರಲ್ಲಿ ಕಂಡುಬರುತ್ತಿದೆ. ಅನಾರೋಗ್ಯಕರ ವಾತಾವರಣದಿಂದಾಗಿ ಬುಡಕಟ್ಟು ಜನರು ಕ್ಷಯ, ಮಲೇರಿಯಾ, ನೇತ್ರರೋಗ, ಮಧುಮೇಹ ಮತ್ತು ಇತರೆ ಗುಹ್ಯ ರೋಗಗಳಿಂದ ಬಳಲುತ್ತಿದ್ದಾರೆ.

ಮುಗ್ಧ ಜೀವಿಗಳಾದ ಬುಡಕಟ್ಟು ಜನರು ಇತರೆ ಸಮಾಜದ ಜನಗಳಿಂದಾಗಿ ಹಲವು ರೀತಿಯ ಶೋಷಣೆಗೆ ಒಳಗಾಗುತ್ತಿದ್ದಾರೆ. ಇವರ ಅನಕ್ಷರತೆ, ಅಜ್ಞಾನ, ಮುಗ್ಧತೆಯನ್ನು ಬೇರೆ ಸಮುದಾಯದ ಜನರು ದುರುಪಯೋಗಪಡಿಸಿಕೊಳ್ಳುತ್ತಾರೆ. ಕಡಿಮೆ ಕೂಲಿಗೆ ತಮ್ಮ ಜಮೀನಿನಲ್ಲಿ ದುಡಿಸಿಕೊಳ್ಳುವುದು, ಅವಾಚ್ಯ ಶಬ್ಧಗಳಿಂದ ನಿಂದಿಸುವುದು, ಮಹಿಳೆಯರಿಗೆ ಲೈಂಗಿಕ ಕಿರುಕುಳ ಕೊಡುವುದು, ಜೀತದಾಳಾಗಿ ದುಡಿಸಿಕೊಳ್ಳುವುದು, ಅಮಾನವೀಯ ಪದ್ಧತಿಗಳನ್ನು ಬಲವಂತವಾಗಿ ಹೇರುವುದು, ಭೂಕಬಳಿಕೆ ಮುಂತಾದವು ಶೋಷಣೆಯ ವಿವಿಧ ಮುಖಗಳು. ಉದಾ: ದಕ್ಷಿಣ ಕನ್ನಡ ಕೊರಗ ಬುಡಕಟ್ಟು ಜನರಲ್ಲಿ ಅಜಲು ಪದ್ಧತಿಗಳನ್ನು ಆಚರಿಸುವಂತೆ ಪ್ರೇರೇಪಿಸುವುದು ಕಂಡುಬರುತ್ತದೆ ಎನ್ನುವುದು ಇತ್ತೀಚಿನ ವಿದ್ಯಮಾನಗಳಿಂದ ತಿಳಿದು ಬರುತ್ತದೆ. ದಕ್ಷಿಣ ಭಾರತದ ಕೆಲವು ಬುಡಕಟ್ಟುಗಳ ಜನರಿಂದ ಭೂಮಾಲಿಕರು ಬಲವಂತವಾಗಿ ಭೂಮಿಯನ್ನು ಕಬಳಿಸಿಕೊಂಡಿದ್ದಾರೆ. ಅದೇ ರೀತಿ ಮಲೆ ಕುಡಿಯರನ್ನು ಜಮೀನ್ದಾರರ ವರ್ಗ ಜೀತದಾಳುಗಳನ್ನಾಗಿ ದುಡಿಸಿಕೊಳ್ಳುವ ಚಿತ್ರಣವನ್ನು ಮತ್ತು ಶಾಲೆಗೆ ಹೋಗದಂತೆ ನೋಡಿಕೊಳ್ಳುವುದನ್ನು ನಾವು ಬುಡಕಟ್ಟು ಜನರ ಬಾಯಿಂದಲೇ ಕೇಳಬಹುದಾಗಿದೆ.

ಸಂಪ್ರದಾಯದ ಹೆಸರಿನಲ್ಲಿ ಭಾರತದ ಕೆಲವು ಬುಡಕಟ್ಟುಗಳಲ್ಲಿ ಅಮಾನವೀಯ ಆಚರಣೆಗಳು ಬುಡಕಟ್ಟು ಜನರು ತಲತಲಾಂತರದಿಂದ ನಡೆಸಿಕೊಂಡು ಬಂದ ಇಲ್ಲವೇ ಸಮಾಜದಿಂದ ಬಲವಂತವಾಗಿ ಹೇರಲ್ಪಟ್ಟ ಆಚರಣೆಗಳಾಗಿವೆ. ಅತ್ಯಂತ ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಬುಡಕಟ್ಟುಗಳಲ್ಲಿ ಮನುಷ್ಯ ಕುಲವೇ ನಾಚಿಕೆ ಪಡುವಂತಹ ಜೀವವಿರೋಧಿ ಅಮಾನವೀಯ ಆಚರಣೆಗಳು ರೂಢಿಯಲ್ಲಿವೆ. ಇದಕ್ಕೆ ಜ್ವಲಂತ ನಿದರ್ಶನವೆಂದರೆ ದಕ್ಷಿಣ ಕನ್ನಡದ ಕೊರಗ ಜನಾಂಗದಲ್ಲಿರುವ ಅಜಲು ಪದ್ಧತಿ. ಈ ಆಚರಣೆಯನ್ನು ಸಾಂಸ್ಕೃತಿಕ ಪರಂಪರೆಯ ದ್ಯೋತಕವೆಂದು ವಾದಿಸಿದರೂ ಮಾನವೀಯ ದೃಷ್ಟಿಕೋನದಲ್ಲಿ ಇವುಗಳು ಅಮಾನವೀಯ ಆಚರಣೆಗಳಾಗುತ್ತವೆ. ಕೊರಗರಲ್ಲಿಯ ಅಜಲು ಪದ್ಧತಿ ಸರ್ಕಾರದ ಗಮನ ಸೆಳೆದು ರಾಜ್ಯ ಸರ್ಕಾರ ಇತ್ತೀಚೆಗೆ ಅಜಲು ಪದ್ಧತಿಯನ್ನು

ಕಾನೂನಿನ ಮೂಲಕ ನಿಷೇಧಿಸಿದೆ. ಇತ್ತೀಚೆಗೆ ಈ ಪದ್ಧತಿಯು ಕಡಿಮೆಯಾಗುತ್ತಿದೆ ಎಂದು ನಂಬಲಾಗಿದೆ.

ರಾಜ್ಯದ ಕಾಡುಗೊಲ್ಲ ಬುಡಕಟ್ಟಿನಲ್ಲಿ ಇನ್ನೊಂದು ರೀತಿಯ ಅಮಾನವೀಯ ಆಚರಣೆ ಜಾರಿಯಲ್ಲಿದೆ. ಕರ್ನಾಟಕದ ಚಿತ್ರದುರ್ಗ, ತುಮಕೂರು, ಬೆಂಗಳೂರು, ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬರುವ ಕಾಡುಗೊಲ್ಲ ಬುಡಕಟ್ಟು ಅಲೆಮಾರಿ ಜನಾಂಗವಾಗಿದ್ದು, ಅತ್ಯಂತ ಹಿಂದುಳಿದ ಬುಡಕಟ್ಟಾಗಿದೆ. ಇವರಲ್ಲಿ ಹೆರಿಗೆ ಪ್ರಕ್ರಿಯೆ ಪ್ರಕೃತಿದತ್ತವಾಗಿದ್ದರೂ ಅತ್ಯಂತ ಸೂತಕದ ವಿಚಾರ. ಬಸುರಿ ಹೆಂಗಸಿಗೆ ಹೆರಿಗೆ ನೋವು ಕಾಣಿಸಿಕೊಂಡ ತಕ್ಷಣ ಅವಳನ್ನು ಹಟ್ಟಿ ಹಾದಿಯಿಂದ ದೂರ ಕರೆದೊಯ್ಯಲಾಗುತ್ತದೆ. ಅಲ್ಲಿ ಅಪ್ಪ,ಅಮ್ಮ ಅಥವಾ ಸಂಬಂಧಿಕರೆನಿಸಿಕೊಂಡವರು ಯಾರು ಆ ಮಹಿಳೆಯನ್ನು ಮುಟ್ಟುವಂತಿಲ್ಲ. ಅವಳ ನೆರವಿಗೆ ಹೋಗುವಂತಿಲ್ಲ. ಇಂತಹ ಸಂದರ್ಭದಲ್ಲಿ ಅಪ್ಪಿತಪ್ಪಿಯೂ ವೈದ್ಯರು ಇಲ್ಲವೇ ಆಸ್ಪತ್ರೆಯ ನೆನಪು ಮಾಡಿಕೊಳ್ಳುವುದಿಲ್ಲ. ಒಂದು ವೇಳೆ ವೈದ್ಯರು ನೆರವಿಗೆ ಬಂದರೆ ಅವರನ್ನು ತಡೆಯುತ್ತಾರೆ. ಬಸುರಿ ಹೆಂಗಸು ತಾನೆ ಹೆರಿಗೆ ಮಾಡಿಕೊಳ್ಳ ಬೇಕಾಗುತ್ತದೆ. ಕರುಳ ಬಳ್ಳಿಯನ್ನು ತಾನೇ ಕತ್ತರಿಸಬೇಕಾಗುತ್ತದೆ. ಹಳ್ಳಿಯ ಜನರು ಮೂಕ ಪ್ರೇಕ್ಷಕರಂತೆ ದೂರನಿಂತು ನೋಡುತ್ತಿರುತ್ತಾರೆ. ದೇವರ ಕೃಪೆಯಿಂದ ಹೆರಿಗೆ ಸಲೀಸಾಗಿ ಆದರೆ ಮಗು ಮತ್ತು ತಾಯಿ ಬದುಕುಳಿಯುತ್ತಾರೆ. ಇಲ್ಲದಿದ್ದರೆ ಸಾವನ್ನಪ್ಪುತ್ತಾರೆ. ಇವರಲ್ಲಿ ಹೆರಿಗೆ ಸಂದರ್ಭದಲ್ಲಿ ಪ್ರತಿ ಮೂರು ಶಿಶುಗಳಿಗೆ ಒಂದು ಶಿಶು ಮತ್ತು ತಾಯಿ ಸಾವನ್ನಪ್ಪಿದ ಘಟನೆಗಳಿವೆ. ಇದರಿಂದ ಕಾಡುಗೊಲ್ಲ ಮಹಿಳೆಯ ಹೆರಿಗೆಯ ಸಂದರ್ಭದಲ್ಲಿ ಶಿಶುಗಳ ಮರಣ ಅತ್ಯಂತ ಹೆಚ್ಚು ಮತ್ತು ಮಹಿಳೆಯರು ಸಾವನ್ನಪ್ಪುವ ಸಂಭವ ಜಾಸ್ತಿ ಎಂದು ಸಂಶೋಧನೆಗಳಿಂದ ದೃಢಪಟ್ಟಿದೆ. ಹೆರಿಗೆಯ ನಂತರ ಎರಡು ತಿಂಗಳಿಗೂ ಹೆಚ್ಚಿನ ಕಾಲ ಮಗು ಮತ್ತು ತಾಯಿಯನ್ನು ಮುಟ್ಟುವಂತಿಲ್ಲ ಹಾಗೂ ಅವರ ನೆರಳು ಬೇರೆಯವರ ಮೇಲೆ ಬೀಳುವಂತಿಲ್ಲ. ಒಂದು ವೇಳೆ ನೆರಳು ಬಿದ್ದರೆ ಅವರೂ ಮೈಲಿಗೆಯಾಗುತ್ತಾರೆ. ಅವರು ಮತ್ತೆ ಬುಡಕಟ್ಟು ದೇವರಿಗೆ ದಂಡ ತೆತ್ತು ಶುಚಿತ್ವ ಪಡೆಯಬೇಕಾಗುತ್ತದೆ. ಸುಮಾರು ಮೂರು ತಿಂಗಳುಗಳ ಕಾಲ ಮಗು ಮತ್ತು ಬಾಣಂತಿಯು ಯಾರ ನೆರವಿಲ್ಲದೆ, ಮಳೆಯೆನ್ನದೆ, ಗಾಳಿ, ಗುಡುಗು, ಮಿಂಚೆನ್ನದೆ ಅವಳಿಗಾಗಿಯೇ ನಿರ್ಮಿಸಿದ ಗುಡಿಸಲಿನಲ್ಲಿ ಕಾಲ ಕಳೆಯ ಬೇಕಾಗುತ್ತದೆ.

ಬುಡಕಟ್ಟುಗಳ ಮುಖ್ಯ ಸಮಸ್ಯೆ ಭೂಮಿಯ ಮತ್ತು ನೆಲೆಯ ಸಮಸ್ಯೆ. ಭಾರತದ ಬಹುತೇಕ ಬುಡಕಟ್ಟು ಜನರಿಗೆ ತಮ್ಮದೇ ಆದಂತಹ ಭೂಮಿ ಇಲ್ಲದಿರುವುದು ಕಂಡು ಬರುತ್ತದೆ. ಇವರು ಸಾಮಾನ್ಯವಾಗಿ ಅರಣ್ಯಗಳನ್ನೇ ನಂಬಿಕೊಂಡು ವಾಸಿಸುತ್ತಾರೆ. ಇತ್ತೀಚೆಗೆ ಅರಣ್ಯ ನಾಶದಂತಹ ಪ್ರಕ್ರಿಯೆಯಲ್ಲಿ ಬುಡಕಟ್ಟು ಜನರಿಗೆ ಅವರ ಹಿಂದುಳಿದಿರುವಿಕೆ ಯಿಂದಾಗಿ ಭೂ ಒಡೆತನದ ಕಲ್ಪನೆ, ಭೂಮಿಯ ದಾಖಲೆಗಳು ಗೊತ್ತಿಲ್ಲ. ಬ್ರಿಟೀಷರ ಕಾಲದಲ್ಲಿ ಬ್ರಿಟೀಷ್ ಸರ್ಕಾರ ಭೂಮಿಯನ್ನು ಮತ್ತು ಅರಣ್ಯ ಭೂಮಿಯನ್ನು

ಜಮೀನ್ದಾರರಿಗೆ ವರ್ಗಾಯಿಸಿತು ಮತ್ತು ಉಳಿದ ಭೂಮಿಯನ್ನೆಲ್ಲಾ ಅರಣ್ಯ ಭೂಮಿ ಎಂದು ಘೋಷಿಸಿತು. ಇದರಿಂದ ಬುಡಕಟ್ಟು ಜನರು ಭೂಮಿಯ ಜೊತೆಗಿನ ಸಂಬಂಧ ಕಳೆದು ಕೊಂಡರು. ಹತ್ತು ಹಲವಾರು ತಲೆಮಾರುಗಳಿಂದ ಜೀವಿಸುತ್ತಿರುವ ಬುಡಕಟ್ಟು ಜನರಿಗೆ ತಮ್ಮದೇ ಆದ ಭೂದಾಖಲೆ ಮತ್ತು ಭೂಮಿಯ ಒಡೆತನ ಇಲ್ಲದಂತಾಯಿತು. ಮೊದಲಿದ್ದ ಬಹುತೇಕ ಅರಣ್ಯ ನೀತಿಗಳು ಅಥವಾ ಕಾನೂನುಗಳು ನಗರ ಮಾರುಕಟ್ಟೆಗಳಿಗೆ ಅರಣ್ಯ ಉತ್ಪನ್ನವನ್ನು ಒದಗಿಸುವುದಕ್ಕೆ ಸಂಬಂಧಿಸಿದವುಗಳಾಗಿದ್ದವು. ಬುಡಕಟ್ಟುಗಳೂ ಸಹ ಅರಣ್ಯ ಉತ್ಪನ್ನವನ್ನು ಒದಗಿಸುವುದಕ್ಕೆ ತಮಗೆ ಸಮೀಪವಿರುವ ಸ್ಥಳೀಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುತ್ತಿದ್ದರು. ಇವರಿಗೆ ಯಾವುದೇ ಅಧಿಕೃತವಾದ ಇವರಿಗೆಂದೇ ಮೀಸಲಿಟ್ಟ ಅರಣ್ಯ ಪ್ರದೇಶಗಳಿರಲಿಲ್ಲ. ೧೮೬೫ರ ಭಾರತದ ಅರಣ್ಯ ಕಾಯಿದೆಗೆ ೧೮೭೮ರಲ್ಲಿ ತಿದ್ದುಪಡಿ ತಂದು ಅರಣ್ಯಗಳನ್ನು ಕಂದಾಯ ಅರಣ್ಯಗಳು, ಸಂರಕ್ಷಿತ ಅರಣ್ಯಗಳು ಮತ್ತು ಗ್ರಾಮ ಅರಣ್ಯಗಳು ಎಂದು ವಿಭಾಗ ಮಾಡಿ ಪ್ರತಿಯೊಂದಕ್ಕೂ ತನ್ನದೇ ಆದ ನಿಯಮಗಳನ್ನು ರೂಪಿಸಲಾಯಿತು.

ಸರ್ಕಾರದ ಈ ನೀತಿಯಿಂದಾಗಿ ಅರಣ್ಯದ ಉತ್ಪನ್ನಗಳನ್ನೇ ತಮ್ಮ ಜೀವಾಳವಾಗಿರಿಸಿ ಕೊಂಡಿದ್ದ ಬುಡಕಟ್ಟುಗಳಿಗೆ ಬರ ಸಿಡಿಲು ಬಡಿದಂತಾಗಿ ಭೂಮಿ ನದಿ ಮತ್ತು ಅರಣ್ಯಗಳ ಭಾಗವಾಗಿದ್ದ ಇವರು ಇವೆಲ್ಲದರಿಂದ ದೂರವಾದರು. ಪರಿಣಾಮವಾಗಿ ಝಾರ್ಖಂಡ್, ಒರಿಸ್ಸಾ, ಮಹಾರಾಷ್ಟ್ರ, ಮಧ್ಯಪ್ರದೇಶ, ತಮಿಳುನಾಡು ಮತ್ತು ಕೇರಳ ರಾಜ್ಯಗಳ ಬುಡಕಟ್ಟು ಜನರು ಭೂರಹಿತ ಬುಡಕಟ್ಟುಗಳಾಗಿ ಉಳಿದರು. ಒಂದು ಗೇಣಸನ್ನಾದರೂ ಬೆಳೆಯಲು ನಮ್ಮದೆನ್ನುವ ಭೂಮಿ ನಮಗಿಲ್ಲ. ಪ್ರತಿಯೊಂದಕ್ಕೂ ನಾವು ಹೊರಗಿನವರ ಮೇಲೆ ಅವಲಂಬಿತರಾಗಿದ್ದೇವೆ ಎಂದು ಕೇರಳದ ವೈನಾಡು ಪ್ರದೇಶದ ಬುಡಕಟ್ಟು ಸಿ ಕೆ ಜಾನು ಹೇಳುತ್ತಾರೆ (ಸಂವಾದ ಆಗಸ್ಟ್ ೨೦೦೩). ಇದು ಬುಡಕಟ್ಟು ಜನರ ಭೂಮಿಯ ಸಮಸ್ಯೆಯನ್ನು ಎತ್ತಿ ತೋರಿಸುತ್ತದೆ.

ಬುಡಕಟ್ಟು ಜನರ ರಾಜಕೀಯ ನಾಯಕತ್ವದ ಕೊರತೆಯಿಂದಲೋ ಅಥವಾ ಸರ್ಕಾರ ವೈಜ್ಞಾನಿಕವಾಗಿ ಬುಡಕಟ್ಟು ಜನರು ಯಾರು ಎಂದು ಗುರುತಿಸಲು ಸಾಧ್ಯವಾಗದೇ ಇರುವುದರಿಂದಲೋ ಅಥವಾ ಬುಡಕಟ್ಟು ಜನರು ತಮ್ಮ ಸಮಸ್ಯೆಗಳನ್ನು ಸರಿಯಾಗಿ ಬಿಂಬಿಸಲು ಸಾಧ್ಯವಾಗದೆ ಇರುವುದರಿಂದಲೋ ಎಷ್ಟೋ ಬುಡಕಟ್ಟುಗಳು ಬುಡಕಟ್ಟಿನ ಅಧಿಕೃತ ಸ್ಥಾನಮಾನ ಪಡೆಯುವುದೇ ಇಲ್ಲ. ಇಂತಹ ಸಂದರ್ಭವನ್ನು ಭಾರತಾದ್ಯಂತ ನೋಡಬಹುದು. ಎಷ್ಟೋ ಸಂದರ್ಭಗಳಲ್ಲಿ ಮೀಸಲಾತಿ ನೀತಿ ನಿರೂಪಿಸುವಾಗ ಜಾತಿ ಯಾವುದು ಜಾತಿಯಿಂದ ಎಲ್ಲಾ ವಿಧದಲ್ಲಿ ಬೇರೆಯಾಗಿರುವ ಬುಡಕಟ್ಟು ಯಾವುದು ಎಂಬ ವ್ಯತ್ಯಾಸದ ಅರಿವಿನ ಕೊರತೆಯಿರುವುದು, ಮೀಸಲಾತಿಯ ನೀತಿಯನ್ನು ಮತ್ತು ಆಯೋಗಗಳ ಶಿಫಾರಸ್ಸುಗಳನ್ನು ಅನುಷ್ಠಾನ ಮಾಡುವಲ್ಲಿ ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ಆರ್ಥಿಕವಾಗಿ ಸಬಲವಾಗಿರುವ ಮತ್ತು ರಾಜಕೀಯ ನಾಯಕತ್ವವನ್ನು ಪಡೆದಿರುವ ಜಾತಿಗಳು

ಅಥವಾ ಬುಡಕಟ್ಟುಗಳು ಬುಡಕಟ್ಟು ಸ್ಥಾನಮಾನವನ್ನು ಪಡೆಯುತ್ತವೆ. ನಿಜವಾಗಿ ಬುಡಕಟ್ಟು ಲಕ್ಷಣಗಳನ್ನೂ ಹೊಂದಿದ್ದು, ಜಾತಿ ವ್ಯವಸ್ಥೆಯಿಂದ ದೂರವಿರುವ ಎಷ್ಟೋ ಬುಡಕಟ್ಟುಗಳು ಇಂದಿಗೂ ಬುಡಕಟ್ಟು ಸ್ಥಾನಮಾನ ಪಡೆಯದೆ ಸರ್ಕಾರದ ಎಲ್ಲಾ ಅವಕಾಶಗಳಿಂದ ವಂಚಿತವಾಗಿವೆ ಎನ್ನುವುದರಲ್ಲಿ ತಪ್ಪಿಲ್ಲ. ಉದಾ ಕರ್ನಾಟಕದ ಕಾಡು ಗೊಲ್ಲರು, ದಕ್ಷಿಣ ಕನ್ನಡ ಜಿಲ್ಲೆಯ ಕುಡುಬಿಗಳು ಮತ್ತು ಉತ್ತರ ಕರ್ನಾಟಕದ ಕೆಲವು ಸಮುದಾಯಗಳು ನಿಜವಾದ ಬುಡಕಟ್ಟುಗಳು. ಆದರೆ ಸರ್ಕಾರದ ಮೀಸಲಾತಿಯ ನೀತಿಯಡಿಯಲ್ಲಿ ಇವುಗಳನ್ನು ಹಿಂದುಳಿದ ವರ್ಗಗಳೆಂದು ಉಪಚರಿಸಲಾಗಿದೆ. ಈ ನೀತಿಯಿಂದಾಗಿ ಈ ಸಮುದಾಯಗಳು ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದು, ಬುಡಕಟ್ಟಾಗಿದ್ದು ಬುಡಕಟ್ಟಾಗದ ಸಮಸ್ಯೆಯನ್ನು ಎದುರಿಸುತ್ತಿವೆ.

ರಾಜ್ಯದಲ್ಲಿಯೂ ಸೇರಿದಂತೆ ಈ ದೇಶದಲ್ಲಿ ಬುಡಕಟ್ಟುಗಳ ಸಮಸ್ಯೆ ಒಂದೇ ತೆರನಾಗಿಲ್ಲ. ಬಹುತೇಕ ಉತ್ತರ ಭಾರತದ ಬುಡಕಟ್ಟುಗಳು ಅವುಗಳ ಜನಸಂಖ್ಯಾ ಪ್ರಾಬಲ್ಯ ಮತ್ತು ಸ್ವಲ್ಪ ಮಟ್ಟಿನ ಶಿಕ್ಷಣದಿಂದಾಗಿ ತಮ್ಮ ಸಂವಿಧಾನಾತ್ಮಕ ಹಕ್ಕುಗಳ ರಕ್ಷಣೆಯ ಜೊತೆಗೆ ಸರ್ಕಾರದಿಂದ ವಿಶೇಷ ಸವಲತ್ತುಗಳನ್ನು ಪಡೆಯುವಲ್ಲಿ ಸಫಲವಾಗಿವೆ. ಆದರೆ ದಕ್ಷಿಣ ಭಾರತದ ಬೆಟ್ಟಗುಡ್ಡ, ಗಿರಿ ಕಾನನಗಳಲ್ಲಿ ವಾಸಿಸುವ ಬುಡಕಟ್ಟುಗಳು ಮೂಲ ಸವಲತ್ತುಗಳಿಲ್ಲದೆ ತುಂಬಾ ನಿಕೃಷ್ಟ ಸ್ಥಿತಿಯಲ್ಲಿವೆ ಎಂಬುದು ಅವರ ನೆಲೆಗಳನ್ನು ನೋಡಿದರೆ ಗೊತ್ತಾಗುತ್ತದೆ. ಇನ್ನು ಬಯಲು ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟುಗಳು ಸಂವಿಧಾನಾತ್ಮಕ ಸವಲತ್ತುಗಳನ್ನು ಪಡೆಯುವುದರ ಜೊತೆಗ ಜೀವನ ವಿಧಾನಗಳಲ್ಲಿ ಜಾತಿ ವ್ಯವಸ್ಥೆಗೆ ಹತ್ತಿರವಾಗುತ್ತಿವೆ. ಕನಿಷ್ಟ ಪಕ್ಷ ಸರ್ಕಾರದ ಕಾರ್ಯಕ್ರಮಗಳು ಅವರಿಗೆ ತಲುಪುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಇಂತಹ ಬುಢಕಟ್ಟುಗಳು ತಮ್ಮಷ್ಟಕ್ಕೆ ತಾವು ಪ್ರತ್ಯೇಕ ವಾಗಿದ್ದರೂ ಸಹ ಸರ್ಕಾರದ ಕಾರ್ಯಕ್ರಮಗಳಲ್ಲಿ ಇವರ ಪಾಲ್ಗೊಳ್ಳುವಿಕೆ ಇದೆ. ಆದರೆ ಕೆಲವು ಬುಡಕಟ್ಟುಗಳು ಅಂದರೆ ಕಂದಾಯ ಗ್ರಾಮವೆಂದು ಸರ್ಕಾರದಿಂದ ಘೋಷಿಸದೆ ಇರುವಂತಹ ಬುಡಕಟ್ಟುಗಳ ಪ್ರದೇಶ ಮತ್ತು ಕಂದಾಯ ನೆಲೆಗಳಲ್ಲದಿರುವಂತಹ ಬುಡಕಟ್ಟು ನೆಲೆಗಳು ಹಲವು ಮೂಲ ಸೌಕರ್ಯಗಳಿಲ್ಲದೆ ಬುಡಕಟ್ಟು ಜನರ ದಿನನಿತ್ಯದ ಜೀವನ ನಿರ್ವಹಣೆಗೆ ಮತ್ತು ಶಿಕ್ಷಣಕ್ಕೆ ತುಂಬಾ ಅಡ್ಡಿಯಾಗಿರುವುದು ಕಂಡು ಬರುತ್ತದೆ.

ಬುಡಕಟ್ಟು ಅಭಿವೃದ್ಧಿಯ ವಿಧಾನಗಳು

ಸ್ವಾತಂತ್ರ್ಯಾ ನಂತರ ಭಾರತ ಸರ್ಕಾರ ಹಲವು ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಿತು. ಅವುಗಳಲ್ಲಿ ಬುಡಕಟ್ಟು ಅಭಿವೃದ್ಧಿಯೂ ಒಂದು ಮಹತ್ತ್ವವಾದ ಕಾರ್ಯಯೋಜನೆ ಯಾಗಿತ್ತು. ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ಠಕ್ಕರಬಾಬಾ ಮುಂತಾದ ಮಹನೀಯರುಗಳು ಬುಡಕಟ್ಟು ಜನರ ಅಭಿವೃದ್ಧಿಗಾಗಿ ಹಲವು ಅಭಿವೃದ್ಧಿ ನೀತಿಗಳನ್ನು ಪ್ರಸ್ತಾಪಿಸಿ ಅಂದೇ ರೂಪಿಸಿದ್ದರು. ಹಾಗಾದರೆ ಬುಡಕಟ್ಟು ಜನರ ಅಭಿವೃದ್ಧಿ ಹೇಗಾಗಬೇಕು? ಯಾವ ತೆರನಾದ ನೀತಿಗಳು ಅಥವಾ ಯೋಜನೆಗಳು ಬುಡಕಟ್ಟು ಜನರ ಅಭಿವೃದ್ಧಿಗೆ

ಪ್ರತ್ಯೇಕವಾಗಿ ಸಹಾಯಕವಾಗುತ್ತವೆ? ಯೋಜನೆಗಳ ಸ್ವರೂಪ ಹೇಗಿರಬೇಕು? ಬುಡಕಟ್ಟುಗಳು ಪ್ರತ್ಯೇಕತೆಯನ್ನು ಉಳಿಸಿಕೊಳ್ಳಬೇಕೆ ಅಥವಾ ರಾಷ್ಟ್ರೀಯ ಧಾರೆಯಲ್ಲಿ ವಿಲೀನವಾಗಬೇಕೆ? ಈ ತೆರನಾದ ಪ್ರಶ್ನೆಗಳು ಸಮಾಜಶಾಸ್ತ್ರಜ್ಞರ ಮತ್ತು ಮಾನವಶಾಸ್ತ್ರಜ್ಞರ ತಲೆಹೊಕ್ಕು ನಿದ್ರೆಗೆಡಿಸಿದವು. ಪರಿಣಾಮವಾಗಿ ಇಬ್ಬರು ವಿದ್ವಾಂಸರಾದ ವೆರಿಯರ್ ಎಲ್ವಿನ್ ಮತ್ತು ಜಿ ಎಸ್ ಘುರ್ರೆ ನಡುವೆ ಈ ಪ್ರಶ್ನೆಗಳ ಬಗ್ಗೆ ಮತ್ತು ಬುಡಕಟ್ಟುಗಳ ಸಮಸ್ಯೆ ಮತ್ತು ಅಭಿವೃದ್ಧಿಯ ಬಗ್ಗೆ ವಾದ ವಿವಾದಗಳು ನಡೆದು ಮಹತ್ವಪೂರ್ಣ ಚರ್ಚೆಗಳು ನಡೆಯಲು ಅವಕಾಶವಾಯಿತು. ಆ ಸಮಯದಲ್ಲಿ ವೆರಿಯರ್ ಎಲ್ವಿನ್‌ರವರು ೧೯೩೯ ಮತ್ತು ೧೯೪೩ ರಲ್ಲಿ ಬುಡಕಟ್ಟುಗಳ ಅಧ್ಯಯನ ಬಗ್ಗೆ ಎರಡು ಪುಸ್ತಕಗಳನ್ನು ಪ್ರಕಟಿಸಿದರು. ಈ ಪುಸ್ತಕಗಳಲ್ಲಿ ಎಲ್ವಿನ್‌ರವರು ಬುಡಕಟ್ಟುಗಳನ್ನು ಹೊರಗಿನವರಿಂದ ರಕ್ಷಿಸಲು ಪ್ರತ್ಯೇಕವಾಗಿಡಬೇಕು ಎಂದು ಪ್ರತಿಪಾದಿಸಿದ್ದರು. ವೆರಿಯರ್ ಎಲ್ವಿನ್‌ರವರು ಬುಡಕಟ್ಟುಗಳ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ಮಾತ್ರವಲ್ಲದೇ ಅವರನ್ನು ಪ್ರತ್ಯೇಕವಾಗಿಯೇ ಬೆಳೆಸಬೇಕು ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ಪ್ರಸಿದ್ಧ ಸಮಾಜಶಾಸ್ತ್ರಜ್ಞ ಪ್ರೊ ಜಿ ಎಸ್ ಘುರ್ರೆರವರು ಬುಡಕಟ್ಟುಗಳು ಹಿಂದುಳಿದ ಹಿಂದೂಗಳಾಗಿದ್ದು, ಮುಖ್ಯವಾಹಿನಿಯಲ್ಲಿ ವಿಲೀನವಾಗುವುದೇ ಒಳಿತು ಎಂಬ ಅಭಿಪ್ರಾಯ ಹೊಂದಿದ್ದರು. ಮುಂದುವರಿದು ಘುರ್ರೆಯವರು ಭಾರತದ ಬುಡಕಟ್ಟುಗಳು ಬಹುದೊಡ್ಡ ಜನಸಂಖ್ಯೆಯಿಂದ ಬೇರ್ಪಟ್ಟಿರುವುದೇ ಅವರ ಹಿಂದುಳಿದಿರುವಿಕೆಗೆ ಕಾರಣ ಎಂದು ನಂಬಿದ್ದರು. ಆದ್ದರಿಂದ ಬುಡಕಟ್ಟುಗಳ ಕಡುಬಡತನವನ್ನು ಹೋಗಲಾಡಿಸಲು ಮತ್ತು ಜೀವನ ಮಟ್ಟವನ್ನು ವೃದ್ಧಿಸಲು ಮುಖ್ಯವಾಹಿನಿಯಲ್ಲಿ ವಿಲೀನ ಮಾಡಬೇಕು ಎಂಬುದಾಗಿ ಅಭಿಪ್ರಾಯಪಟ್ಟರು.

ವಿದ್ವಾಂಸರುಗಳ ವಾದ, ಚರ್ಚೆ, ಪ್ರತಿಪಾದನೆ ಮತ್ತು ಸಂವೇದನೆಗಳ ದೃಷ್ಟಿಕೋನ ಏನೇ ಇದ್ದರೂ, ಇಂದು ಬುಡಕಟ್ಟುಗಳ ಸಾಮಾಜಿಕ,ಆರ್ಥಿಕ ಮತ್ತು ಸಾಂಸ್ಕೃತಿಕ ಪರಿಸರೀಯ ಸ್ಥಿತಿಗತಿಗಳನ್ನು ಅವಲೋಕಿಸಿದರೆ, ಕೈಗಾರೀಕರಣ, ನಗರೀಕರಣ, ಆಧುನೀಕರಣ ಮತ್ತು ಪಾಶ್ಚಾತ್ತೀಕರಣದ ಪ್ರಕ್ರಿಯೆಗಳು ಬುಡಕಟ್ಟು ಜನಜೀವನದ ಮೇಲೆ ಪ್ರಭಾವ ಬೀರುತ್ತಿರುವುದು ಕಂಡು ಬರುತ್ತಿದೆ. ಒಂದು ವೇಳೆ ನಾವು ಬುಡಕಟ್ಟುಗಳನ್ನು ಪ್ರತ್ಯೇಕವಾಗಿಟ್ಟು ಅವರನ್ನು ಸಂರಕ್ಷಿಸುತ್ತೇವೆ ಮತ್ತು ಅವರ ಅಭಿವೃದ್ಧಿಯನ್ನು ಸಾಧಿಸುತ್ತೇವೆ ಎಂದು ಹೇಳಿದರೆ ಅದು ಅಪ್ಪಟ ಸುಳ್ಳಾಗುತ್ತದೆ. ಕಾರಣ ಬುಡಕಟ್ಟು ಜನರ ಮತ್ತು ಅವರ ಸಂಸ್ಕೃತಿಯ ಮೇಲೆ ಈ ಮೇಲೆ ಹೇಳಿದ ಪ್ರಕ್ರಿಯೆಗಳು ಬಿರುಗಾಳಿಯಾಗಿ ಬೀಸಿ ತಲ್ಲಣವನ್ನು ಎಬ್ಬಿಸುತ್ತಿವೆ. ನಾವು ಎಷ್ಟೇ ಪ್ರಯತ್ನ ಪಟ್ಟರೂ ನಗರೀಕರಣ, ಆಧುನೀಕರಣ ಪ್ರಕ್ರಿಯೆಗಳ ಪ್ರಭಾವವನ್ನು ತಪ್ಪಿಸಲಿಕ್ಕೆ ಸಾಧ್ಯವಿಲ್ಲ ಮತ್ತು ಇವು ಈಗಿನ ಸಮಾಜಗಳ ಬದಲಾವಣೆಯ ಅವಿಭಾಜ್ಯ ಅಂಗಗಳಾಗಿವೆ. ಒಂದು ವಾದದ ಪ್ರಕಾರ ಬುಡಕಟ್ಟಿನ ಸಂಸ್ಕೃತಿಯು ನಾಶವಾಗುತ್ತಿದೆ, ಅದನ್ನು ರಕ್ಷಿಸಿ ಬುಡಕಟ್ಟಿನ ಸಂಸ್ಕೃತಿಯ ಅನನ್ಯತೆಯನ್ನು ಉಳಿಸಿಕೊಳ್ಳಬೇಕು ಎಂಬುದು.

ಆದರೆ ಬುಡಕಟ್ಟುಗಳಿಗೆ ಕೇವಲ ಸಾಂಸ್ಕೃತಿಕ ಅನನ್ಯತೆಗಳಿರದೆ ಇತರೆ ಸಾಮಾಜಿಕ ಆರ್ಥಿಕ ಅಥವಾ ಇನ್ನಿತರೆ ಅನನ್ಯತೆಗಳು ಇರುತ್ತವೆ. ಉದಾಹರಣೆಗಾಗಿ ಬುಡಕಟ್ಟುಗಳ ದೇಶೀಯ ತಂತ್ರಜ್ಞಾನ ಮತ್ತು ಬುಡಕಟ್ಟುಗಳ ದೇಶೀಯ ಔಷಧ ಪದ್ಧತಿ ಇಂಥವುಗಳ ಸಂರಕ್ಷಣೆ ಅಗತ್ಯವಾಗಿದೆ. ಇವುಗಳನ್ನು ಕಾಪಾಡಿ ಇವುಗಳಿಗೆ ಜಾಗತಿಕ ಮಾರುಕಟ್ಟೆಯನ್ನು ಒದಗಿಸ ಬೇಕಾಗುತ್ತದೆ. ಕಾಲ ಕಳೆದಂತೆಲ್ಲಾ ಹಲವು ತೆರನಾದ ಪ್ರಭಾವಗಳಿಗೆ ತುತ್ತಾಗಿ ಬುಡಕಟ್ಟುಗಳಲ್ಲಿ ಸಾಮಾಜಿಕ ಚಲನೆ ಮತ್ತು ಬದಲಾವಣೆ ಉಂಟಾಗುವುದರಿಂದ ಬುಡಕಟ್ಟು ಸಂಸ್ಕೃತಿ ಮತ್ತು ಅವರ ಸಾಂಪ್ರದಾಯಿಕ ತಂತ್ರಜ್ಞಾನವನ್ನು ರಕ್ಷಿಸುವುದು ಅನಿವಾರ್ಯವಾಗಿದೆ. ಏಕೆಂದರೆ ಬುಡಕಟ್ಟುಗಳು ಅರಣ್ಯಗಳಲ್ಲಿ ತಲೆತಲಾಂತರದಿಂದ ವಾಸಿಸುತ್ತಾ ಅರಣ್ಯ ಜೀವಿಗಳಿಗೆ ತೊಂದರೆ ಮಾಡದಂತೆ ಮತ್ತು ಗಿಡಮೂಲಿಕೆಯ ಔಷಧಗಳಲ್ಲಿ ಪ್ರಾವೀಣ್ಯತೆ ಯನ್ನು ಪಡೆದು ಅರಣ್ಯಗಳ ಅವಿಭಾಜ್ಯ ಅಂಗವಾಗಿದ್ದಾರೆ. ಇಲ್ಲಿ ನಮ್ಮ ಮುಂದಿರುವ ಪ್ರಶ್ನೆಗಳೆಂದರೆ ಬುಡಕಟ್ಟುಗಳು ತಮ್ಮ ಪಾಡಿಗೆ ತಾವು ತಮ್ಮ ಮೂಲ ಸಂಸ್ಕೃತಿಯಲ್ಲಿ ಇರಬೇಕೆ ಅಥವಾ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕೆ ಅಥವಾ ಸಮಾಜದ ಭಾಗವಾಗಬೇಕೆ ಎಂಬುದು. ಹೇಗೂ ಸಾಮಾಜಿಕ ಪರಿವರ್ತನೆಗಳ ಪ್ರಭಾವ ಬುಡಕಟ್ಟು ಜನರ ಮೇಲೆ ಆಗುವುದರಿಂದ, ಬುಡಕಟ್ಟು ಜನರ ಸಂಸ್ಕೃತಿ, ನೆಲ, ಜಲ, ಅದರ ಸಾಂಪ್ರದಾಯಿಕ ಕಸುಬು ತಂತ್ರಜ್ಞಾನವನ್ನು ಸಂರಕ್ಷಿಸಿಕೊಂಡೇ ಅವರನ್ನು ನಿಜವಾದ ಅಭಿವೃದ್ಧಿಯ ದಿಕ್ಕಿನತ್ತ ತರುವುದು ಸೂಕ್ತವಾದುದಾಗಿದೆ. ಮೂಲ ಸೌಕರ್ಯಗಳಾದ ನೀರು, ವಿದ್ಯುತ್, ರಸ್ತೆ, ಶಾಲೆ ಮುಂತಾದ ಸೌಲಭ್ಯಗಳನ್ನು ಕಲ್ಪಿಸಿ ಜೀವನ ಮಟ್ಟವನ್ನು ಉತ್ತಮ ಪಡಿಸುವುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಬುಡಕಟ್ಟು ಆಯೋಗದ ರಾಷ್ಟ್ರೀಯ ಅಧ್ಯಕ್ಷರು ಹೇಳುವಂತೆ ಎಷ್ಟೋ ಬುಡಕಟ್ಟು ಪುನರ್‌ವಸತಿ ಯೋಜನೆಗಳು ವಿಫಲವಾಗಿವೆ ಎಂದಿದ್ದಾರೆ. ಪುನರ್‌ವಸತಿ ಕಾಲೋನಿಗಳಲ್ಲಿ ವಿದ್ಯುತ್, ರಸ್ತೆ, ಶಾಲಾ ಸೌಲಭ್ಯಗಳ ಕೊರತೆ ಎದ್ದು ಕಾಣುತ್ತದೆ. ಈ ನಿಟ್ಟಿನಲ್ಲಿ ಬುಡಕಟ್ಟುಗಳ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಬುಡಕಟ್ಟುಗಳು ವಾಸಿಸುವ ಪ್ರದೇಶಗಳನ್ನು ಪರಿಶಿಷ್ಟ ಬುಡಕಟ್ಟುಗಳ ಪ್ರದೇಶಗಳೆಂದು ಘೋಷಿಸಿ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಅಲ್ಲದೆ ಕರ್ನಾಟಕ ರಾಜ್ಯದ ಕೆಲವು ಪ್ರದೇಶಗಳನ್ನೊಳಗೊಂಡಂತೆ ಹಲವು ಬುಡಕಟ್ಟು ನೆಲೆಗಳನ್ನು ಗುರುತಿಸಿ ಕಂದಾಯ ಗ್ರಾಮಗಳೆಂದು ಘೋಷಿಸಬೇಕು. ಆಗ ಮಾತ್ರ ಸರ್ಕಾರದ ಯೋಜನೆಯ ಕಾರ್ಯಕ್ರಮಗಳು ನೇರವಾಗಿ ಬುಡಕಟ್ಟು ಜನರಿಗೆ ತಲುಪಲು ಸಾಧ್ಯವಾಗುತ್ತದೆ. ಮುಖ್ಯವಾಗಿ ಶಾಲೆಗಳನ್ನು ಸ್ಥಾಪಿಸಿ ಪ್ರಾಥಮಿಕ ಶಿಕ್ಷಣವನ್ನು ಕೊಡುವುದು ಮುಖ್ಯವಾಗುತ್ತದೆ. ಜೊತೆಗೆ ಉನ್ನತ ಶಿಕ್ಷಣಕ್ಕೆ ಪ್ರೇರೇಪಿಸುವುದು, ಇಂದಿನ ಅಗತ್ಯಗಳಲ್ಲಿ ಒಂದಾಗಿದೆ.

ಬುಡಕಟ್ಟು ಸಮುದಾಯಗಳಲ್ಲಿ ಜೀತ ಪದ್ಧತಿಯಿಂದಾಗಿ ಶಾಲೆಗೆ ಹೋಗುವವರ ಸಂಖ್ಯೆ ಕಡಿಮೆ ಇದೆ. ಇಂದಿಗೂ ಜಮೀನ್ದಾರರು ಬುಡಕಟ್ಟು ಮಕ್ಕಳನ್ನು ಜೀತಕ್ಕೆ ಇಟ್ಟುಕೊಂಡು ಶಾಲೆಗೆ ಹೋಗುವುದನ್ನು ತಡೆಯುವ ವ್ಯವಸ್ಥಿತ ಸಂಚನ್ನು ಕೆಲವು ಕಡೆಗಳಲ್ಲಿ

ನೋಡಬಹುದಾಗಿದೆ. ಶಾಲೆಗೆ ಕಲಿಯಲು ಹೋದರೆ ವಿದ್ಯಾವಂತರಾಗಿ ತಮ್ಮ ಹಕ್ಕುಗಳ ಪ್ರತಿಪಾದನೆಯ ಬಗ್ಗೆ ಅರಿವು ಬರುತ್ತದೆ. ಆಗಾಗ ನಮ್ಮ ಜಮೀನಿನಲ್ಲಿ ಮತ್ತು ಮನೆಯಲ್ಲಿ ಜೀತದಾಳುಗಳಾಗಿ ದುಡಿಯಲು ಬರುವುದಿಲ್ಲವೆಂದು ಬೇಕಂತಲೇ ಅವರನ್ನು ಶಾಲೆಗೆ ಹೋಗದಂತೆ ನೋಡಿಕೊಳ್ಳುತ್ತಾರೆ. ಸರ್ಕಾರ ಇತ್ತೀಚೆಗೆ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ಮತ್ತು ಉತ್ತೇಜನ ಕೊಡುತ್ತಿದ್ದು, ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡಿರುವುದ ರಿಂದ ಇಂದು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಮಕ್ಕಳು ಶಾಲೆಗೆ ಕಲಿಯಲು ಹೋಗುತ್ತಿರುವು ದನ್ನು ನೋಡಬಹುದು. ಇಂತಹದೇ ಶಿಕ್ಷಣದ ಕಾರ್ಯಕ್ರಮಗಳನ್ನು ವಿಶೇಷವಾಗಿ ಬುಡಕಟ್ಟು ಜನರ ಮಕ್ಕಳಿಗಾಗಿ ಅವರಿರುವ ಪ್ರದೇಶಗಳಿಗೆ ವಿಸ್ತರಿಸಿದರೆ ಅದರಿಂದ ಈ ಜನರ ಮೊದಲ ಪೀಳಿಗೆಯ ಜನರ ಶಿಕ್ಷಣದ ದಾಹದ ಸಮಸ್ಯೆ ನಿವಾರಣೆಯಾಗುವುದರಲ್ಲಿ ಸಂಶಯವಿಲ್ಲ. ಬುಡಕಟ್ಟು ಜನರು ಎಲ್ಲರಂತೆ ವಿದ್ಯಾವಂತರಾಗಿ ಅವರೂ ಅಭಿವೃದ್ಧಿಯ ಯೋಜನೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಲು ಸಹಾಯಕವಾಗುತ್ತದೆ. ಆದ್ದರಿಂದ ಶಿಕ್ಷಣ ಬುಡಕಟ್ಟು ಜನರಿಗೆ ಒಂದು ಮುಖ್ಯವಾದ ವಾಹಕವಾಗಿದೆ ಮತ್ತು ಅವರ ಸಾಮಾಜಿಕ ಚಲನೆಗೆ ಅನುವು ಮಾಡಿಕೊಡುತ್ತದೆ. ಈ ಪ್ರಕ್ರಿಯೆಯಿಂದ ಬುಡಕಟ್ಟುಗಳ ಅನನ್ಯತೆಯನ್ನು ಉಳಿಸಿ ಮತ್ತು ಸಂರಕ್ಷಿಸಿಕೊಂಡೇ ಅವರ ಅಭಿವೃದ್ಧಿ ಮಾಡಬಹುದು. ಉದಾ: ಈಶಾನ್ಯ ವಲಯದ ನಾಗಾಗಳು ತಮ್ಮ ಸಂಸ್ಕೃತಿಯ ಅನನ್ಯತೆಯನ್ನು ಉಳಿಸಿಕೊಂಡೇ ಹೋರಾಟದ ಮೂಲಕ ತಮ್ಮ ಹಕ್ಕುಗಳನ್ನು ರಕ್ಷಿಸಿ ಮತ್ತು ಪ್ರತಿಪಾದಿಸಿಕೊಂಡು ಅಭಿವೃದ್ಧಿ ಹೊಂದುತ್ತಿದ್ದಾರೆ. ಪರಿಣಾಮವಾಗಿ ಅಲ್ಲಿನ ಸರ್ಕಾರ ನಾಗಾ ಬುಡಕಟ್ಟುಗಳ ಪ್ರದೇಶವನ್ನು ಅನುಸೂಚಿತ ಪ್ರದೇಶ ಎಂದು ಘೋಷಿಸಿದೆ. ಕರ್ನಾಟಕದ ಸಂದರ್ಭದಲ್ಲಿ ಹೇಳುವುದಾದರೆ ಬಯಲು ಪ್ರದೇಶಗಳಲ್ಲಿ ಕಂಡುಬರುವ ಕೆಲವು ಬುಡಕಟ್ಟು ಜನಾಂಗಗಳು ಜಾತಿ ವ್ಯವಸ್ಥೆಯ ಪ್ರಭಾವದಿಂದಾಗಿ ತಮ್ಮ ಸಾಂಸ್ಕೃತಿಕ ಐಡೆಂಟಿಟಿಯನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬುದು ಸತ್ಯವಾದ ಮಾತು. ಅದಾಗುವುದಕ್ಕೆ ಮೊದಲು ಅವರ ಸಾಂಸ್ಕೃತಿಕ ವೈವಿಧ್ಯತೆಯನ್ನು ರಕ್ಷಿಸಿ ದಾಖಲಿಸುವುದು ಅಗತ್ಯವಾಗಿದೆ. ಜೊತೆಗೆ ಹೆಚ್ಚಿನದಾಗಿ ಬುಡಕಟ್ಟುಗಳ ಸಾಂಸ್ಕೃತಿಕ ರಚನೆ ಮತ್ತು ಸ್ವರೂಪಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅಭಿವೃದ್ಧಿ ಯೋಜನೆಗಳು ವಿಫಲಗೊಳ್ಳುವ ಸಾಧ್ಯತೆ ಹೆಚ್ಚಾಗಿರುತ್ತದೆ. ಬುಡಕಟ್ಟುಗಳ ಆಚಾರ ವಿಚಾರಗಳು ನಾಶವಾಗದಂತೆ ನೋಡಿಕೊಳ್ಳಬೇಕು ಎಂಬುದು ಗಾಂಧೀಜಿಯವರ ಒಂದು ಮುಖ್ಯವಾದ ಆದರ್ಶವಾಗಿತ್ತು. ಯಾವ ರೀತಿಯಿಂದಲೂ ಅವರ ಸಂಸ್ಕೃತಿಯು ನಾಶವಾಗ ದಂತೆ ಅವರನ್ನು ಉದ್ಧರಿಸಬೇಕೆಂಬುದೇ ಅವರ ಇಚ್ಛೆಯಾಗಿತ್ತು. ನೆಹರೂರವರೂ ಸಹ ತಮ್ಮ ಪಂಚಶೀಲ ತತ್ವಗಳಲ್ಲಿ ಬುಡಕಟ್ಟುಗಳ ಜೀವನದ ಸ್ಥಿತಿಗತಿಗಳನ್ನು ಅವರ ಸಂಸ್ಕೃತಿಗೆ ಧಕ್ಕೆಯಾಗದಂತೆ ಸುಧಾರಿಸಬೇಕು, ಅಲ್ಲದೆ ರಸ್ತೆ, ಸಾರಿಗೆ ಸಂಪರ್ಕ, ಶಾಲೆಗಳ ಸ್ಥಾಪನೆ, ವೈದ್ಯ ಶಾಲೆ ಮತ್ತು ಗೃಹ ಕೈಗಾರಿಕೆಗಳ ನಿರ್ಮಾಣ ಅವಶ್ಯಕ ಎಂದು ಅಭಿಪ್ರಾಯ ಪಟ್ಟಿದ್ದರು. ಜೊತೆಗೆ ಬುಡಕಟ್ಟು ಜನರಿಗೆ ಸೇರಿದ ಅರಣ್ಯ ಮತ್ತು ಭೂಮಿಗೆ ಸಂಬಂಧಿಸಿದ ಹಕ್ಕುಗಳನ್ನು ಸಂರಕ್ಷಿಸಬೇಕು ಎಂಬುದಾಗಿ ಹೇಳಿದ್ದಾರೆ.

ಸಂವಿಧಾನದ ಸವಲತ್ತುಗಳು ಮತ್ತು ಬುಡಕಟ್ಟುಗಳ ಅಭಿವೃದ್ಧಿ

ಭಾರತದ ಸ್ವಾತಂತ್ರ್ಯ ನಂತರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಜಾತಿ ಮತ್ತು ಸಮುದಾಯಗಳನ್ನು ಗುರುತಿಸಿ ಅವುಗಳನ್ನು ಅಧ್ಯಯನ ಮಾಡಿ ಅವರಲ್ಲಿರುವ ಅಸಮಾನತೆ ಮತ್ತು ಹಿಂದುಳಿದಿರುವಿಕೆಯನ್ನು ತೊಡೆದು ಹಾಕುವ ಸಲುವಾಗಿ ಹಾಗೂ ಸಾಮಾಜಿಕ ನ್ಯಾಯವನ್ನು ಒದಗಿಸಿ ಸಂವಿಧಾನ ಬದ್ಧವಾದ ಹಕ್ಕನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಯಿತು. ಭಾರತದ ಸಂವಿಧಾನದ ಕಲಂ ೩೪೨ (೧)ರ ಪ್ರಕಾರ ರಾಷ್ಟ್ರಪತಿಯವರು ಮತ್ತು ಸಂಸತ್ತು ಎಲ್ಲಾ ರೀತಿಯಿಂದಲೂ ಹಿಂದುಳಿದ ಅರ್ಹ ಸಮುದಾಯಗಳನ್ನು ಅನುಸೂಚಿತ ಬುಡಕಟ್ಟುಗಳೆಂದು ಪರಿಗಣಿಸಿ ವಿವಿಧ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಕಲ್ಪಿಸಬಹುದಾಗಿದೆ. ಪ್ರಾರಂಭಿಕ ಹಂತದಲ್ಲಿ ಭಾರತ ಸರ್ಕಾರವು ಬುಡಕಟ್ಟುಗಳ ಅಭಿವೃದ್ಧಿಗೆ ಮೂರು ನೀತಿಗಳನ್ನು ರೂಪಿಸಲಾಯಿತು. ಅವುಗಳೆಂದರೆ ರಕ್ಷಣಾತ್ಮಕ ಬುಡಕಟ್ಟುಗಳ ಅಭಿವೃದ್ಧಿಗೆ ಮೂರು ನೀತಿಗಳನ್ನು ರೂಪಿಸಲಾಯಿತು. ಅವುಗಳೆಂದರೆ ರಕ್ಷಣಾತ್ಮಕ ನೀತಿಯು ಸಂವಿಧಾನಾತ್ಮಕ ಮತ್ತು ಕಾನೂನಾತ್ಮಕ ಹಕ್ಕುಗಳನ್ನು ಒಳಗೊಂಡಿದ್ದು, ಬುಡಕಟ್ಟು ಜನರ ಹಿತಾಸಕ್ತಿಗಳನ್ನು ಕಾಪಾಡುವಂತಾಗಿದ್ದವು. ಮೀಸಲಾತಿ ನೀತಿಯು ವಿವಿಧ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ವಿಸ್ತರಿಸುವ ಯೋಜನೆಯನ್ನೊಳಗೊಂಡಿತ್ತು. ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಮತ್ತು ಚಟುವಟಿಕೆಗಳನ್ನು ಬುಡಕಟ್ಟು ಜನರ ಕಲ್ಯಾಣ ಸಾಧಿಸಲು ಪ್ರಾರಂಭಿಸಲಾಯಿತು. ರಾಷ್ಟ್ರಪತಿಯವರ ಅನುಮೋದನೆಯಿಂದ ಅನುಸೂಚಿತ ಬುಡಕಟ್ಟುಗಳ ಪಟ್ಟಿಗೆ ಸೇರಿದ ಸಮುದಾಯಗಳು ಬುಡಕಟ್ಟುಗಳು ಸಂವಿಧಾನ ಬದ್ಧವಾಗಿ ವಿಶೇಷ ಸವಲತ್ತುಗಳನ್ನು ಪಡೆಯಬಹುದಾಗಿತ್ತು, ಆಯಾ ರಾಜ್ಯಗಳು ಸಹ ಸಂವಿಧಾನಬದ್ಧ ಮೀಸಲಾತಿಯ ಸೌಲಭ್ಯವನ್ನು ತಮ್ಮ ತಮ್ಮ ರಾಜ್ಯದಲ್ಲಿ ಪರಿಶಿಷ್ಟ ಬುಡಕಟ್ಟುಗಳೆಂದು ರಾಷ್ಟ್ರಪತಿಯವರು ಅನುಮೋದಿಸಿದ ಪಟ್ಟಿಯಲ್ಲಿರುವ ಅನುಸೂಚಿತ ಬುಡಕಟ್ಟುಗಳಿಗೆ ಸಂವಿಧಾನ ಬದ್ಧವಾದ ಸೌಲಭ್ಯಗಳನ್ನು ಮತ್ತು ಮೀಸಲಾತಿಯ ಹಕ್ಕುಗಳನ್ನು ರಕ್ಷಿಸುವುದು ಆದ್ಯ ಕರ್ತವ್ಯವಾಗಿರುತ್ತದೆ. ಅದರಂತೆ ಸಂವಿಧಾನಬದ್ಧ ಕಾರ್ಯಕ್ರಮಗಳ ಜಾರಿಯ ಹೊಣೆ ಮತ್ತು ಜವಾಬ್ದಾರಿ ಸರ್ಕಾರದ್ದಾಗಿರುತ್ತದೆ. ಸಂವಿಧಾನದ ಕೆಲವು ಕಲಂಗಳು ಬುಡಟ್ಟುಗಳಿಗೆ ಸರ್ಕಾರದಿಂದ ವಿಶೇಷ ಉಪಚಾರ ಅಥವಾ ಮೀಸಲು ಸೌಲಭ್ಯ ಪಡೆಯಲು ಅವಕಾಶ ಮಾಡಿಕೊಟ್ಟಿವೆ.

ಸಂವಿಧಾನದ ೪೬ನೆಯ ಅನುಚ್ಛೇದವು ರಾಜ್ಯದ ದುರ್ಬಲ ವರ್ಗಗಳ ಅದರಲ್ಲಿಯೂ ಬುಡಕಟ್ಟುಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಬೇಕು ಎಂದು ಹೇಳುತ್ತದೆ. ಕಲಂ ೨೪೪ರ ಪ್ರಕಾರ ರಾಷ್ಟ್ರಪತಿಯವರು ಹೆಚ್ಚಿನ ಸಂಖ್ಯೆಯಲ್ಲಿ ಬುಡಕಟ್ಟು ಜನರಿರುವ ಪ್ರದೇಶವನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಬಹುದಾಗಿದೆ. ಆಯಾ ರಾಜ್ಯಗಳ ರಾಜ್ಯಪಾಲರುಗಳು ತಮ್ಮ ಪರಮಾಧಿಕಾರವನ್ನು ಉಪಯೋಗಿಸಿ ರಾಜ್ಯದ ಯಾವುದೇ ಭಾಗವನ್ನು ಅನುಸೂಚಿತ ಪ್ರದೇಶ ಎಂದು ಘೋಷಿಸುವ ಅಧಿಕಾರ ಹೊಂದಿದ್ದಾರೆ.

ಅನುಚ್ಛೇದ ೩೩೯ ಕೇಂದ್ರ ಸರ್ಕಾರದ ನಿರ್ದೇಶನದಂತೆ ರಾಜ್ಯ ಸರ್ಕಾರಗಳು ರಾಜ್ಯದ ಅನುಸೂಚಿತ ಬುಡಕಟ್ಟುಗಳ ಕಲ್ಯಾಣಕ್ಕೆ ಅಗತ್ಯವಾದ ನಿರ್ದಿಷ್ಟ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ತಿಳಿಸುತ್ತದೆ. ಸಂವಿಧಾನದ ೨೭೫ನೇ ಅನುಚ್ಛೇದವು ಸಂವಿಧಾನದ ಸವಲತ್ತುಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಗಳಿಗೆ ಸಹಾಯವನ್ನು ನೀಡುವ ಅವಕಾಶವನ್ನು ಮಾಡಿಕೊಟ್ಟಿದೆ. ಸಂವಿಧಾನದ ೩೩೦, ೩೩೨ ಮತ್ತು ೩೩೪ರ ಕಲಂಗಳು ಅನುಸೂಚಿತ ಬುಡಕಟ್ಟುಗಳಿಗೆ ಸಂಸತ್ತು ಮತ್ತು ರಾಜ್ಯ ವಿಧಾನ ಸಭೆಗಳಲ್ಲಿ ಮೀಸಲಾತಿಯ ಸವತ್ತುಗಳನ್ನು ಒದಗಿಸುವ ಅವಕಾಶವನ್ನು ಒದಗಿಸಿವೆ. ಸಂವಿಧಾನದ ೩೩೫ನೇ ವಿಧಿಯು ಅನುಸೂಚಿತ ಬುಡಕಟ್ಟುಗಳಿಗೆ ನಾಗರಿಕ ಸೇವೆಗಳಲ್ಲಿ ಮೀಸಲಾತಿಯನ್ನು ಒದಗಿಸಿಕೊಂಡ ಅವಕಾಶವನ್ನು ಒದಗಿಸಿದೆ. ಸಂವಿಧಾನದ ೧೫, ೧೬ ಮತ್ತು ೧೯ನೇ ಅನುಚ್ಛೇದಗಳು ಬುಡಕಟ್ಟುಗಳ ಹಿತಾಸಕ್ತಿಯನ್ನು ಮತ್ತು ಜೀವನವನ್ನು ಕಾಪಾಡುವ ಉದ್ದೇಶವನ್ನು ಹೊಂದಿವೆ.

ಸಂವಿಧಾನದ ೫ನೇ ಪಟ್ಟಿ ಭಾಗ ಬಿ ಪ್ಯಾರಾ ೪ರ ಭಾಗವು ಪ್ರತಿಯೊಂದು ರಾಜ್ಯವು ಕಡ್ಡಾಯವಾಗಿ ಬುಡಕಟ್ಟು ಪ್ರದೇಶ ಇರಲಿ ಅಥವಾ ಇಲ್ಲದಿರಲಿ ಆದರೆ ಅನುಸೂಚಿತ ಬುಡಕಟ್ಟುಗಳನ್ನೊಳಗೊಂಡ ಒಂದು ಬುಡಕಟ್ಟು ಸಲಹಾ ಸಮಿತಿಯನ್ನು ರಚಿಸುವ ಅವಕಾಶವನ್ನು ಒದಗಿಸಿದೆ. ಈ ಬುಡಕಟ್ಟು ಸಲಹಾ ಸಮಿತಿಯ ಕಾರ್ಯವೇನೆಂದರೆ ರಾಜ್ಯದಲ್ಲಿ ಬುಡಕಟ್ಟುಗಳ ಕಲ್ಯಾಣ ಮತ್ತು ಉನ್ನತಿಗೆ ಸಂಬಂಧಿಸಿದಂತೆ ಸಲಹೆ ಕೊಡುವುದಾಗಿರುತ್ತದೆ. ಬುಡಕಟ್ಟು ಸಲಹಾ ಸಮಿತಿಯು ಬುಡಕಟ್ಟು ಪ್ರದೇಶಗಳಿಗೆ ಸಂಬಂಧಿಸಿದಂತೆ ನಿಯಮ ಮತ್ತು ಕಾನೂನುಗಳನ್ನು ರೂಪಿಸುವ ಬಗ್ಗೆ ಚರ್ಚಿಸಿ ಆ ಕಾನೂನುಗಳು ಬುಡಕಟ್ಟು ಪ್ರದೇಶಕ್ಕೆ ಅನ್ವಯಿಸುತ್ತವೆಯೋ ಅಥವಾ ಇಲ್ಲವೋ ಎಂಬ ಉದ್ದೇಶವನ್ನಿಟ್ಟುಕೊಂಡು ಮುಖ್ಯವಾಹಕಗಳಾಗಿ ಕೆಲಸ ನಿರ್ವಹಿಸಬೇಕಾಗುತ್ತದೆ. ನೀತಿ ನಿರೂಪಕರು, ಆಡಳಿತಗಾರರು ಮತ್ತು ಬುಡಕಟ್ಟು ಜನರು ಹಾಗೂ ಬುಡಕಟ್ಟೇತರ ಜನರಿಗೆ ಒಟ್ಟಿಗೆ ಕೆಲಸ ಮಾಡಲು ಈ ಬುಡಕಟ್ಟು ಸಲಹಾ ಸಮಿತಿಗಳು ಮುಖ್ಯವಾದ ವೇದಿಕೆಗಳಾಗ ಬೇಕಾಗುತ್ತದೆ. ಸಂವಿಧಾನದ ಅನುಚ್ಛೇದನ ೩೩೮ರ ಪ್ರಕಾರ ಸಂವಿಧಾನದ ಮುಖ್ಯವಾದ ಸವಲತ್ತುಗಳಲ್ಲಿ ಒಂದಾದ ಬುಡಕಟ್ಟುಗಳ ಅಭಿವೃದ್ಧಿಗೆ ಮತ್ತು ಹಿತಾಸಕ್ತಿಗಳಿಗೆ ಆಯುಕ್ತರನ್ನು ನೇಮಿಸುವುದು ಮುಖ್ಯವಾದುದಾಗಿದೆ. ಕೇಂದ್ರ ಸರ್ಕಾರ ಈ ಅನುಚ್ಛೇದದ ಪ್ರಕಾರ ವಿಶೇಷ ಅಧಿಕಾರಿಯನ್ನು ನೇಮಿಸುತ್ತದೆ. ಈ ಅಧಿಕಾರಿಯು ಬುಡಕಟ್ಟುಗಳ ಕಲ್ಯಾಣ ಕಾರ್ಯಕ್ರಮ ಗಳನ್ನು ಜಾರಿಗೊಳಿಸುವುದರಲ್ಲಿ ಮುಖ್ಯ ಪಾತ್ರವಹಿಸಬೇಕಾಗುತ್ತದೆ. ಅಲ್ಲದೆ ಆಗಾಗ್ಗೆ ಬುಡಕಟ್ಟುಗಳ ಅಭಿವೃದ್ಧಿಗೆ ಅನುಷ್ಠಾನಗೊಂಡ ಕಾರ್ಯಕ್ರಮಗಳ ಪರಿಶೀಲನೆ ಮಾಡುವುದು, ಉಸ್ತುವಾರಿ ನೋಡಿಕೊಳ್ಳುವುದು ಈ ಅಧಿಕಾರಿಯ ಕರ್ತವ್ಯವಾಗಿರುತ್ತದೆ. ಜೊತೆಗೆ ಒಟ್ಟಾರೆ ಬುಡಕಟ್ಟು ಜನರ ಸಂವಿಧಾನಾತ್ಮಕ ಹಿತಾಸಕ್ತಿಗಳನ್ನು ಕಾಪಾಡುವುದು ಈ ಅಧಿಕಾರಿಯ ಕರ್ತವ್ಯವಾಗಿರುತ್ತದೆ.

ಸಮಿತಿ, ಆಯೋಗಗಳು ಮತ್ತು ಬುಡಕಟ್ಟು ಅಭಿವೃದ್ಧಿ

ಸಂವಿಧಾನಾತ್ಮಕ ರಕ್ಷಣೆ ಮತ್ತು ಸವಲತ್ತುಗಳಲ್ಲದೆ ಭಾರತದ ಬುಡಕಟ್ಟುಗಳ ಬದುಕನ್ನು ಉತ್ತಮಪಡಿಸಲು ಹಲವು ಯೋಜನೆಗಳನ್ನು ಸರ್ಕಾರ ಕೈಗೊಂಡಿರುವುದು ಗಮನಾರ್ಹ ಸಂಗತಿ. ಅವುಗಳಲ್ಲಿ ಸಮಿತಿ ಮತ್ತು ಆಯೋಗಗಳನ್ನು ಸ್ಥಾಪಿಸುವುದು ಮುಖ್ಯವಾದಂತಹದ್ದಾಗಿದ್ದು, ಆ ಮೂಲಕ ಕಾರ್ಯಕ್ರಮಗಳನ್ನು ರೂಪಿಸುವುದನ್ನು ಕಾಣಬಹುದಾಗಿದೆ. ಬುಡಕಟ್ಟು ಜನರಿಗೆ ಕನಿಷ್ಟ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯತಂತ್ರ ರೂಪಿಸಲು ೧೯೬೧ರಲ್ಲಿ ಕೇಂದ್ರ ಸರ್ಕಾರ ದೆಬರ್‌ರವರ ಅಧ್ಯಕ್ಷತೆಯಲ್ಲಿ ಮೊಟ್ಟ ಮೊದಲ ಬುಡಕಟ್ಟು ಆಯೋಗವನ್ನು ರಚಿಸಲಾಯಿತು. ಈ ಆಯೋಗದ ಶಿಪಾರಸ್ಸಿನಂತೆ ಬುಡಕಟ್ಟುಗಳ ಸಮಗ್ರ ಯೋಜನೆಗಳನ್ನು ರೂಪಿಸಿ ಕನಿಷ್ಠ ಅವಶ್ಯಕತೆಗಳಾದ ಆಹಾರ, ನೀರು, ಉದ್ಯೋಗ, ಶಿಕ್ಷಣ, ಆರೋಗ್ಯ, ರಸ್ತೆ ಸೌಕರ್ಯವನ್ನು ಒದಗಿಸಲಾಯಿತು. ೧೯೭೨ರಲ್ಲಿ ರಚಿತವಾದ ಬುಡಕಟ್ಟು ಪ್ರದೇಶಗಳ ಅಭಿವೃದ್ಧಿಯ ಕಾರ್ಯಪಡೆಯು ಬುಡಕಟ್ಟುಗಳ ಅಭಿವೃದ್ಧಿಗೆ ನೀತಿಯನ್ನು ರೂಪಿಸುವಾಗ ಪರಿಸರೀಯ ಉದ್ಯೋಗ ಮತ್ತು ಸಾಮಾಜಿಕ ಸೂಚಕಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ಮಾಡಿತು. ಇದರಿಂದ ಬುಡಕಟ್ಟು ಜನರಿಗೆ ಅತೀ ಶೀಘ್ರದಲ್ಲಿ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುತ್ತದೆ ಎಂಬುದು ಕಾರ್ಯಪಡೆಯ ಉದ್ದೇಶವಾಗಿತ್ತು. ನಂತರ ೧೯೮೦ರಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಬುಡಕಟ್ಟು ಉಪಯೋಜನೆಯನ್ನು ರೂಪಿಸಲಾಯಿತು. ಈ ಯೋಜನೆಯು ಮುಖ್ಯವಾಗಿ ಎರಡು ಅಂಶಗಳನ್ನು ಒಳಗೊಂಡಿತ್ತು.

ಬುಡಕಟ್ಟುಗಳ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಮತ್ತು ಶೋಷಣೆಯಿಂದ ಬುಡಕಟ್ಟು ಜನರನ್ನು ತಪ್ಪಿಸುವುದು. ಬುಡಕಟ್ಟು ಉಪಯೋಜನೆಗೆ ಹಣಕಾಸಿನ ನೆರವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒದಗಿಸಿದವು. ಈ ಯೋಜನೆಯ ಅಡಿಯಲ್ಲಿ ಶಿಕ್ಷಣ, ಆರೋಗ್ಯ ಮತ್ತು ವಸತಿ ಒದಗಿಸುವುದರ ಜೊತೆಗೆ ಕುಟುಂಬ ಆಧಾರಿತ ವರಮಾನದ ಯೋಜನೆಗಳಾದ ಕೃಷಿ, ಹೈನುಗಾರಿಕೆಗೆ ಸಹಕಾರ, ಬುಡಕಟ್ಟುಗಳ ಕುರಕುಶಲ ಕಲೆಗೆ ಮತ್ತು ಇತರೆ ಪರಿಣತಿಗೆ ಹೆಚ್ಚು ಒತ್ತು ಕೊಡಲಾಯಿತು. ಬುಡಕಟ್ಟು ಉಪಯೋಜನೆಯಲ್ಲಿ ಒಟ್ಟಾರೆ ಮೂಲ ಸೌಕರ್ಯಗಳಿಗೆ ಹೆಚ್ಚಿನ ಗಮನಹರಿಸಿದ್ದರಿಂದ ಬುಡಕಟ್ಟು ಜನರ ಅಭಿವೃದ್ಧಿಯನ್ನು ಅಷ್ಟೇನು ಸಾಧಿಸಿದಂತಾಗಲಿಲ್ಲ. ಆದರೂ, ಶಿಕ್ಷಣದ ಮಟ್ಟಿಗೆ ಹೇಳುವುದಾದರೆ ಬುಡಕಟ್ಟು ಅಭಿವೃದ್ಧಿಯನ್ನು ಸಾಧಿಸಿದಂತಾಯಿತು. ಇದರಿಂದ ಶೇಕಡ ೬೫ ರಷ್ಟು ಬುಡಕಟ್ಟು ನೆಲೆಗಳು ಶಾಲೆಗಳನ್ನು ಹೊಂದಲು ಸಾಧ್ಯವಾಯಿತು.

೧೯೬೦ರಲ್ಲಿ ಕೇಂದ್ರ ಸರ್ಕಾರ ಎರಡನೇ ಅನುಸೂಚಿತ ಪ್ರದೇಶ ಮತ್ತು ಬುಡಕಟ್ಟುಗಳ ಆಯೋಗವನ್ನು ರಚಿಸಿದ್ದು, ದಿಲೀಪ್‌ಸಿಂಗ್ ಭುರಿಯಾರನ್ನು ಅದರ ಅಧ್ಯಕ್ಷರನ್ನಾಗಿ ನೇಮಕ ಮಾಡಿತು. ಆ ಆಯೋಗವು ಬುಡಕಟ್ಟುಗಳ ಅಭಿವೃದ್ಧಿಗೆ ಮತ್ತು ಕಲ್ಯಾಣಕ್ಕೆ ೪೦ ವರ್ಷಗಳ ಒಂದು ಯೋಜನೆಯನ್ನು ರೂಪಿಸಿದೆ. ಈ ಯೋಜನೆಯ ಮುಖ್ಯ ಉದ್ದೇಶ ಭೂಮಿ,

ನೀರು ಮತ್ತು ಅರಣ್ಯಕ್ಕೆ ಸಂಬಂಧಿಸಿದಂತೆ ಬುಡಕಟ್ಟು ಜನರ ಹಕ್ಕುಗಳ ರಕ್ಷಣೆ, ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ಇತರೆ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಾಗಿದೆ. ಜುಲೈ ೨೦೦೩ರಲ್ಲಿ ಆಯೋಗದ ಅಧ್ಯಕ್ಷರಾದ ಭುರಿಯಾ ಮತ್ತು ಇತರೆ ಸದಸ್ಯರು ನಮ್ಮ ರಾಜ್ಯಕ್ಕೆ ಭೇಟಿ ನೀಡಿದಾಗ ಅವರು ಕರ್ನಾಟಕದಲ್ಲಿ ಪ್ರಸ್ತುತ ಯಾವುದೇ ಬುಡಕಟ್ಟುಗಳು ಇರುವ ಪ್ರದೇಶವನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಲಾಗಿಲ್ಲ. ಆದರೆ ರಾಜ್ಯದಿಂದ ಬುಡಕಟ್ಟು ಪ್ರದೇಶಗಳನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಲು ಕೆಲವು ಬೇಡಿಕೆಗಳು ಬಂದಿವೆ ಎಂದರು.

ಪಂಚವಾರ್ಷಿಕ ಯೋಜನೆಗಳಲ್ಲಿ ಬುಡಕಟ್ಟು ಅಭಿವೃದ್ಧಿ

ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಪ್ರಾಮುಖ್ಯತೆ ಕೊಟ್ಟಿತ್ತಾದರೂ ಸ್ಪಷ್ಟ ಮತ್ತು ವಿಶೇಷ ಗಮನಹರಿಸಲು ಸಾಧ್ಯವಾಗಲಿಲ್ಲ. ಕೇವಲ ಅಲ್ಪಸ್ವಲ್ಪ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಯಿತು. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಒದಗಿಸಲಾದ ಹಣಕಾಸು ಶೇಕಡ ಒಂದರಷ್ಟು. ಎರಡನೇ ಯೋಜನೆಯಲ್ಲಿ ಕೆಲವು ಆಯ್ದ ಬುಡಕಟ್ಟು ಪ್ರದೇಶಗಳಿಗೆ ವಿಶೇಷ ವಿವಿಧೋದ್ದೇಶ ಬುಡಕಟ್ಟು ಯೋಜನೆಗಳನ್ನು ಜಾರಿಗೆ ತರಲಾಯಿತು. ಈ ಯೋಜನೆಗೆ ಮೀಸಲಿಟ್ಟ ಹಣ ಶೇಕಡ ೦.೯೦ರಷ್ಟು, ೩ನೇ ಯೋಜನೆಯ ಅಡಿಯಲ್ಲಿ ಬುಡಕಟ್ಟು ಪ್ರದೇಶಗಳ ಸ್ಥಿತಿಗತಿಯನ್ನು ಸುಧಾರಿಸುವುದರ ಜೊತೆಗೆ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಬುಡಕಟ್ಟುಗಳು ಪಾಲ್ಗೊಳ್ಳುವಂತೆ ಅನುವು ಮಾಡಿಕೊಡುವ ಬುಡಕಟ್ಟು ಅಭಿವೃದ್ಧಿಯ ಬ್ಲಾಕ್ ಪದ್ಧತಿಯನ್ನು ಅನುಷ್ಠಾನಕ್ಕೆ ತರಲಾಯಿತು. ಈ ಯೋಜನೆಗೆ ಖರ್ಚು ಮಾಡಿದ ಹಣ ಶೇಕಡ ೦.೬೦ ನಾಲ್ಕನೆಯ ಯೋಜನೆಯಲ್ಲಿ ಬುಡಕಟ್ಟು ಯೋಜನೆಯ ಮುಖ್ಯವಾದ ಆಯಾಮವೆಂದರೆ ಶಾಸನಾತ್ಮಕ ಮತ್ತು ಕಾರ್ಯಾತ್ಮಕ ಅಂಶಗಳ ಮೂಲಕ ಬುಡಕಟ್ಟು ಜನರನ್ನು ಹೊರಗಿನವರ ಶೋಷಣೆಯಿಂದ ಮುಕ್ತಿಪಡಿಸುವುದಾಗಿತ್ತು. ಶೇಕಡ ೦.೫೦ರಷ್ಟು ಹಣವನ್ನು ಈ ಯೋಜನೆಗೆ ವ್ಯಯಿಸಲಾಯಿತು. ನಾಲ್ಕನೇ ಯೋಜನೆಯು ಬುಡಕಟ್ಟು ಆರ್ಥಿಕತೆಯನ್ನು ಮುಖ್ಯ ವಾಹಿನಿಯ ಆರ್ಥಿಕತೆಯೊಡನೆ ವಿಲೀನ ಮಾಡಬೇಕೆನ್ನುವ ಕಡೆ ಒತ್ತು ಕೊಟ್ಟಿತು. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಇಡೀ ಬುಡಕಟ್ಟು ಅಭಿವೃದ್ಧಿಯ ಸಮಸ್ಯೆಯನ್ನು ವಿಮರ್ಶಾತ್ಮಕವಾಗಿ ಪರಾಮರ್ಶಿಸಲಾಯಿತು ಮತ್ತು ಬುಡಕಟ್ಟು ಅಭಿವೃದ್ಧಿಯನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಯಿತು. ಬುಡಕಟ್ಟುಗಳು ಹೆಚ್ಚಿಗೆ ಇರುವ ಪ್ರದೇಶ ಮತ್ತು ಬುಡಕಟ್ಟುಗಳು ಅಲ್ಲಲ್ಲಿ ಚದುರಿರುವ ಪ್ರದೇಶ. ಶೇಕಡ ೫೦ಕ್ಕಿಂತ ಹೆಚ್ಚು ಬುಡಕಟ್ಟುಗಳ ಪ್ರದೇಶದಲ್ಲಿ ಶೇಕಡ ೬೫ರಷ್ಟು ಬುಡಕಟ್ಟು ಜನರು ಇರುವವರಿಗೆ ೫ನೇ ಯೋಜನೆಯಲ್ಲಿ ಬುಡಕಟ್ಟು ಉಪಯೋಜನೆಯನ್ನು ತಯಾರಿಸಲಾಯಿತು. ಸಾಮನ್ಯವಾಗಿ ಬುಡಕಟ್ಟು ಉಪಯೋಜನೆಯು ರಾಜ್ಯ ಮತ್ತು ಕೇಂದ್ರದ ಯೋಜನೆಗಳಿಗಿಂತ ಹೆಚ್ಚು ವ್ಯಾಪ್ತಿಯುಳ್ಳದ್ದಾಗಿತ್ತು. ಈ ಯೋಜನೆಯು ಬುಡಕಟ್ಟು ಜನರನ್ನು ಭೂಮಿಗೆ ಸಂಬಂಧಿಸಿದ ಸಂಬಂಧ

ಗಳಲ್ಲಿ ಶೋಷಣೆಯನ್ನು ತಪ್ಪಿಸುವುದು, ಲೇವಾದೇವಿದಾರರಿಂದ ಮುಕ್ತಿ ಒಂದು ಕಡೆಯಾದರೆ, ಇನ್ನೊಂದೆಡೆ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದರ ಕಡೆಗೆ ಪ್ರಾಮುಖ್ಯತೆ ಕೊಟ್ಟಿತು. ಈ ಯೋಜನೆಯ ಮೂಲ ಉದ್ದೇಶ ಬುಡಕಟ್ಟು ಜನರ ಸಂಘಟನಾತ್ಮಕ ಸಾಮರ್ಥ್ಯ ಮತ್ತು ಸ್ವಸಾಮರ್ಥ್ಯವನ್ನು ಬೆಳೆಸಲೋಸುಗ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯನ್ನು ತ್ವರಿತಗೊಳಿಸುವುದಾಗಿತ್ತು.

ಬುಡಕಟ್ಟು ಉಪಯೋಜನೆಯನ್ನು ಪರಿಣಾಮಾತ್ಮಕವಾಗಿ ಜಾರಿಗೆ ತರಲು ೧೮೪ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಗಳು ೨೭೭ ಬುಡಕಟ್ಟು ಪ್ಯಾಕೆಟ್ಸ್ ಅಂದರೆ ಮಾರ್ಪಡಿಸಿದ ಪ್ರದೇಶ ಅಭಿವೃದ್ಧಿ ವಿಧಾನ ಮತ್ತು ೭೫ ಆದಿಮ ಬುಡಕಟ್ಟು ಗುಂಪುಗಳ ಸೂಕ್ಷ್ಮ ಯೋಜನೆಗಳು ಸ್ಥಾಪಿಸಲಾಯಿತು. ಈ ವಿಶೇಷ ಯೋಜನೆಯಲ್ಲಿ ತೊಡಗಿಸಿದ ಹಣ ಶೇಕಡ ೩.೧ರಷ್ಟು. ಇದು ಕಳೆದ ಒಂದರಿಂದ ನಾಲ್ಕನೇ ಯೋಜನೆಗಳಲ್ಲಿ ವ್ಯಯಿಸಿದ ಹಣಕ್ಕಿಂತ ಹೆಚ್ಚಾಗಿರುವುದು ಗಮನಾರ್ಹ ಸಂಗತಿ. ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡ ೫.೬೭ರಷ್ಟು ಹಣವನ್ನು ಬುಡಕಟ್ಟು ಅಭಿವೃದ್ಧಿಗೆ ಮೀಸಲಿಡಲಾಯಿತು. ಬುಡಕಟ್ಟು ಉಪಯೋಜನೆಯ ವಿಧಾನವು ಬುಡಕಟ್ಟು ಯೋಜನೆಯ ಮುಖ್ಯ ಸಾಧನವಾಗಿ ಉಳಿದಾಗ್ಯೂ, ವಾಸ್ತವವಾಗಿ ಏಳನೇ ಯೋಜನೆಯಲ್ಲಿ ಗುಂಪು ಅಭಿವೃದ್ಧಿ ವಿಧಾನ ಅಥವಾ ಸಮುದಾಯ ಅಭಿವೃದ್ಧಿ ವಿಧಾನವನ್ನು ಬಳಸಿ ೭೫ ಆದಿಮ ಬುಡಕಟ್ಟುಗಳನ್ನು ಗುರುತಿಸಲಾಯಿತು. ಶೇಕಡ ೬.೬೭ರಷ್ಟು ಹಣವನ್ನು ಈ ಯೋಜನೆಗೆ ಖರ್ಚು ಮಾಡಲಾಯಿತು. ೮ನೇ ಯೋಜನೆಯಡಿಯಲ್ಲಿ ವಿಶೇಷ ಕಾರ್ಯತಂತ್ರ ರೂಪಿಸುವುದರ ಜೊತೆಗೆ ಬುಡಕಟ್ಟು ಜನರ ಪ್ರಗತಿಗೋಸ್ಕರ ಕೇಂದ್ರ ಸರ್ಕಾರವು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವನ್ನು ವಿಸ್ತರಿಸಿತು. ಈ ಯೋಜನೆಯ ಅಡಿಯಲ್ಲಿ ಬುಡಕಟ್ಟು ಯೋಜನೆಗೆ ರಾಷ್ಟ್ರೀಯ ಆದಾಯದ ಶೇಕಡ ೮ರಷ್ಟನ್ನು ಖರ್ಚು ಮಾಡಲಾಯಿತು. ೯ನೇ ಯೋಜನೆಯಲ್ಲಿ ಬುಡಕಟ್ಟು ಜನರನ್ನು ಸಶಕ್ತರನ್ನಾಗಿಸುವುದರ ಜೊತೆಗೆ ಸಮಾಜದ ಇನ್ನುಳಿದ ದುರ್ಬಲ ವರ್ಗಗಳನ್ನು ಗಣನೆಗೆ ತೆಗೆದುಕೊಂಡು ಸರ್ಕಾರೇತರ ಸಂಸ್ಥೆಗಳ ಸಹಕಾರದಿಂದ ಅಭಿವೃದ್ಧಿಯ ಕಾರ್ಯಗಳನ್ನು ಕೈಗೊಳ್ಳಲಾಯಿತು. ಈ ಯೋಜನೆಗೆ ವ್ಯಯಿಸಿದ ಹಣ ಶೇಕಡ ೯.೯೭ರಷ್ಟು. ೧೦ನೇ ಯೋಜನೆಯಲ್ಲಿ ಬುಡಕಟ್ಟು ಅಭಿವೃದ್ಧಿಯ ವಿಧಾನವೆಂದರೆ ಬುಡಕಟ್ಟು ಆರ್ಥಿಕತೆಯನ್ನು ಹೊರಗಿನ ಮಾರುಕಟ್ಟೆಗಳಿಂದ ರಕ್ಷಿಸುವುದು ಮತ್ತು ಪ್ರೋತ್ಸಾಹಿಸುವುದು. ಅಲ್ಲದೆ ಕಿರು ಪ್ರಮಾಣದ ಅರಣ್ಯ ಉತ್ಪನ್ನಗಳಾದ ಔಷಧ ಸಸ್ಯಗಳನ್ನು ಬುಡಕಟ್ಟು ಜನರು ಉಪಯೋಗಿಸಿಕೊಳ್ಳಲು ಬೌದ್ಧಿಕ ಆಸ್ತಿಯ ಹಕ್ಕುಗಳಲ್ಲಿರುವ ಸೌಲಭ್ಯಗಳನ್ನು ಒದಗಿಸುವುದು.

ಬುಡಕಟ್ಟು ಅಭಿವೃದ್ಧಿಯ ಇತ್ತೀಚಿನ ಒಲವುಗಳು

ಬುಡಕಟ್ಟು ಅಭಿವೃದ್ಧಿಯಲ್ಲಿ ಸರ್ಕಾರದ ಜೊತೆಗೆ ಕೆಲವು ಸರ್ಕಾರೇತರ ಸಂಸ್ಥೆಗಳು ಕೈ ಜೋಡಿಸಿರುವುದು ಇತ್ತೀಚಿನ ವಿದ್ಯಮಾನಗಳಲ್ಲಿ ಒಂದು. ಸರ್ಕಾರ ಅಭಿವೃದ್ಧಿ ಯೋಜನೆ

ಗಳನ್ನು ಅನುಷ್ಠಾನಕ್ಕೆ ತಂದರೆ ಆ ಯೋಜನೆಗಳು ಬುಡಕಟ್ಟುಗಳಿಗೆ ತಲುಪುವಲ್ಲಿ ಮತ್ತು ಅವುಗಳ ಬಗ್ಗೆ ಅರಿವು ಮೂಡಿಸುವಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ ಮಹತ್ವವಾದದ್ದು. ಆ ನಿಟ್ಟಿನಲ್ಲಿ ಹಲವು ಸರ್ಕಾರೇತರ ಸಂಸ್ಥೆಗಳು ಬುಡಕಟ್ಟು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಪರಿಣಾಮಾತ್ಮಕವಾಗಿ ಭಾಗವಹಿಸಿರುವುದು ಶ್ಲಾಘನೀಯವಾದುದು. ಆದಾಗ್ಯೂ, ಕೆಲವು ಸರ್ಕಾರೇತರ ಸಂಸ್ಥೆಗಳು ಹೆಸರಿಗೆ ಮಾತ್ರ ಅಭಿವೃದ್ಧಿಯ ನೆಪದಲ್ಲಿ ಹಣ ಮಾಡುವ ಸಂಸ್ಥೆಗಳಾಗಿ ರೂಪುಗೊಳ್ಳುತ್ತಿವೆ. ಬುಡಕಟ್ಟುಗಳ ಅಭಿವೃದ್ಧಿ ಎಂದರೆ ಕೇವಲ ಆರ್ಥಿಕ ಅಭಿವೃದ್ಧಿಯಾಗಿರದೆ ಇತರೆ ಸಾಮಾಜಿಕ ಸಾಂಸ್ಕೃತಿಕ ಆಯಾಮಗಳನ್ನು ಒಳಗೊಂಡಿರುತ್ತದೆ. ಸ್ವಾತಂತ್ರ್ಯ ನಂತರದ ದಿನಗಳಿಂದಲೂ ಬುಡಕಟ್ಟು ಅಭಿವೃದ್ಧಿಯ ಬಗ್ಗೆ ನೆಹರೂರವರನ್ನು ಒಳಗೊಂಡಂತೆ ಹತ್ತು ಹಲವಾರು ವ್ಯಕ್ತಿಗಳು, ಸಂಘಸಂಸ್ಥೆಗಳು, ಚಿಂತನೆ ನಡೆಸಿರುವುದನ್ನು ಗಮನಿಸಬಹುದು. ಸರ್ಕಾರಗಳ ಜೊತೆಗೆ ಸರ್ಕಾರೇತರ ಸಂಸ್ಥೆಗಳು ವಿಶ್ವವಿದ್ಯಾಲಯಗಳು ಬುಡಕಟ್ಟು ಅಭಿವೃದ್ಧಿಯಲ್ಲಿ ತೊಡಗಿಕೊಂಡಿರುವುದು ಗಮನಾರ್ಹ ಸಂಗತಿ. ಬುಡಕಟ್ಟು ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಮೊದಲು ಬುಡಕಟ್ಟು ಸಮಸ್ಯೆಗಳು ಗುರುತಿಸಲ್ಪಡಬೇಕು.

ಬುಡಕಟ್ಟು ಸಮಸ್ಯೆಗಳನ್ನು ಗುರುತಿಸಬೇಕಾದರೆ ಅವುಗಳ ಶಾಸ್ತ್ರೀಯ ಮತ್ತು ವೈಜ್ಞಾನಿಕ ಅಧ್ಯಯನ ಅವಶ್ಯಕ. ಈ ದಿಸೆಯಲ್ಲಿ ಬುಡಕಟ್ಟು ಅಭಿವೃದ್ಧಿಗೆ ಕೆಲವು ಸಂಸ್ಥೆಗಳು ಬುಡಕಟ್ಟು ಜನರ ಜೀವನ ಅಥವಾ ಸಮಸ್ಯೆಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡುವುದರ ಮೂಲಕ ಅವುಗಳ ಅಭಿವೃದ್ಧಿಗೆ ಕಾರಣವಾಗಿವೆ. ಈ ಸಂಬಂಧವಾಗಿ ಭಾರತದಲ್ಲಿ ಅನೇಕ ಸಂಸ್ಥೆಗಳು ಬುಡಕಟ್ಟು ಅಧ್ಯಯನವನ್ನು ಕೈಗೊಂಡಿವೆ. ಅವುಗಳಲ್ಲಿ ಎಥನೊಲಾಜಿಕಲ್ ಸರ್ವೆ ಆಫ್ ಇಂಡಿಯಾ ಮುಖ್ಯವಾದಂತಹದು. ಇದು ಬುಡಕಟ್ಟು ಜನರ ಏಳಿಗೆಗಾಗಿಯೇ ಸ್ಥಾಪಿಸಲ್ಪಟ್ಟಿರುವ ಸಂಸ್ಥೆ. ಬುಡಕಟ್ಟು ಜನರ ಬಗ್ಗೆ ಸಮಗ್ರ ಮಾಹಿತಿಯನ್ನು ಸಂಗ್ರಹಿಸುವುದು. ಅವರ ಜೀವನ ವಿಧಾನಗಳ ಬಗ್ಗೆ ಅಧ್ಯಯನ ಮಾಡುವುದು ಇದರ ಕಾರ್ಯವಾಗಿದೆ.

ಬುಡಕಟ್ಟುಗಳ ಬಗ್ಗೆ ಅಧ್ಯಯನ ವಿಶ್ವವಿದ್ಯಾಲಯಗಳ ಮಟ್ಟದಲ್ಲಿಯೂ ನಡೆಯುತ್ತದೆ. ವಿಶ್ವವಿದ್ಯಾಲಯಗಳು ಸರ್ಕಾರದಿಂದ ಮತ್ತು ಯುಜಿಸಿ ಯ ನೆರವಿನಿಂದ ಬುಡಕಟ್ಟು ಅಧ್ಯಯನಕ್ಕೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಮದರಾಸು ವಿಶ್ವವಿದ್ಯಾನಿಲಯ ಈ ರೀತಿಯ ಧನಸಹಾಯ ಪಡೆದು ಗಮನಾರ್ಹ ರೀತಿಯ ಕೆಲಸ ಮಾಡಿದೆ ಎಂದು ಹೇಳಲಾಗುತ್ತಿದೆ. ಇದೇ ರೀತಿ ವಿಶ್ವವಿದ್ಯಾಲಯಗಳ ಸಮಾಜಶಾಸ್ತ್ರ ವಿಭಾಗಗಳು, ಮಾನವಶಾಸ್ತ್ರ ವಿಭಾಗಗಳು, ಕನ್ನಡ ವಿಭಾಗಗಳು, ಬುಡಕಟ್ಟು ಅಧ್ಯಯನ ವಿಭಾಗಗಳು ಹಲವು ರೀತಿಯ ಬುಡಕಟ್ಟು ಯೋಜನೆಗಳನ್ನು ಕೈಗೆತ್ತಿಕೊಂಡು ಬುಡಕಟ್ಟು ಜನರ ಜೀವನ, ಸಮಸ್ಯೆಗಳು, ಜಾನಪದ, ಅಭಿವೃದ್ಧಿ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆಗಳನ್ನು ಮಾಡುತ್ತಿವೆ. ಕೆಲವು ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಜೊತೆಗೆ ರಾಜ್ಯ ಸರ್ಕಾರಗಳು ಅದರಲ್ಲೂ ಕರ್ನಾಟಕ ರಾಜ್ಯದ ಮಟ್ಟಿಗೆ ಹೇಳುವುದಾದರೆ ಬುಡಕಟ್ಟುಗಳ ಅಧ್ಯಯನಕ್ಕೆ ವಿಶೇಷ ಆಸಕ್ತಿ ವಹಿಸಿ, ತನ್ನ ಅಧೀನದಲ್ಲಿ ಬರುವ ಅಂಗ ಸಂಸ್ಥೆಗಳಾದ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಪುಸ್ತಕ ಪ್ರಾಧಿಕಾರ ಇತ್ಯಾದಿ ಇಲಾಖೆಗಳ ಮೂಲಕ ಬುಡಕಟ್ಟು ಜನರ ಅಧ್ಯಯನಕ್ಕೆ ಪ್ರೋತ್ಸಾಹಿಸಿ, ಪುಸ್ತಕ ಪ್ರಕಟಣೆಗೆ ಅನುವು ಮಾಡಿಕೊಟ್ಟಿದೆ. ಈ ಮೇಲೆ ಹೇಳಿದ ಇಲಾಖೆಗಳ ವತಿಯಿಂದ ಹಲವಾರು ಬುಡಕಟ್ಟುಗಳ ಕುರಿತ ಪುಸ್ತಕಗಳು ಪ್ರಕಟವಾಗಿವೆ. ಅಲ್ಲದೆ ವಿಶ್ವವಿದ್ಯಾನಿಲಯಗಳ ಪ್ರಸಾರಾಂಗಗಳು ಬುಡಕಟ್ಟು ಅಧ್ಯಯನದ ಕುರಿತು ಉಪನ್ಯಾಸಗಳನ್ನು ಏರ್ಪಡಿಸುವುದರೊಂದಿಗೆ, ಬುಡಕಟ್ಟುಗಳ ಕುರಿತು ಸಾಮಾಜಿಕ, ಸಾಂಸ್ಕೃತಿಕ ಮತ್ತು ಜಾನಪದ ಅಧ್ಯಯನಗಳನ್ನು ಕೈಗೊಂಡು ಕೃತಿ ಪ್ರಕಟಣೆಯಲ್ಲಿ ತೊಡಗಿವೆ. ಇಲ್ಲಿ ಮುಖ್ಯವಾದ ವಿಷಯವೇನೆಂದರೆ ಈ ಎಲ್ಲಾ ಸಂಸ್ಥೆಗಳು, ಇಲಾಖೆಗಳು, ಪ್ರಸಾರಾಂಗ ಗಳು ಬುಡಕಟ್ಟು ಅಧ್ಯಯನಕ್ಕೆ ಸಂಬಂಧಿಸಿದಂತೆ ಕೃತಿಗಳನ್ನು ಕನ್ನಡದಲ್ಲಿ ಪ್ರಕಟಿಸಿರುವುದು. ಈ ಒಂದು ಪ್ರಯತ್ನದಿಂದ ನಾಡಿನ ಜನತೆ ತಮ್ಮ ಮಾತೃ ಭಾಷೆಯಲ್ಲಿ ಬುಡಕಟ್ಟಿನ ಸಂಪೂರ್ಣ ಚಿತ್ರಣ ದೊರೆಯುವುದರಿಂದ ಅಲ್ಲಿರುವ ಸಮಸ್ಯೆಗಳನ್ನಾಗಲೀ, ಅಥವಾ ಅಭಿವೃದ್ಧಿಯನ್ನಾಗಲೀ ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ. ಜೊತೆಗೆ ಇದು ನೀತಿ ನಿರೂಪಕರಿಗೂ ಸಹಾಯಕವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಬುಡಕಟ್ಟು ಅಧ್ಯಯನಕ್ಕೆ ಸಂಬಂಧಿಸಿದಂತೆ ಮತ್ತೊಂದು ಮೈಲಿಗಲ್ಲೆಂದರೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಬುಡಕಟ್ಟು ಅಧ್ಯಯನ ವಿಭಾಗವನ್ನು ಸ್ಥಾಪಿಸಿರುವುದು. ಈ ಬುಡಕಟ್ಟು ಅಧ್ಯಯನ ವಿಭಾಗದಲ್ಲಿ ಬುಡಕಟ್ಟುಗಳ ಅಧ್ಯಯನ ಕೈಗೊಂಡಿದ್ದು, ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಪಿಎಚ್ ಡಿ ಅಧ್ಯಯನಗಳೂ ಒಳಗೊಂಡಂತೆ, ಬುಡಕಟ್ಟು ಜನರ ಸಮಸ್ಯೆಗಳ ಅಧ್ಯಯನ, ಅವರ ಸಾಮಾಜಿಕ ಚಳವಳಿಗಳ ಅಧ್ಯಯನ, ಅವರ ಅಭಿವೃದ್ಧಿಯ ಅಧ್ಯಯನ ಇತ್ಯಾದಿ ಕ್ಷೇತ್ರಗಳಲ್ಲಿ ಸಂಶೋಧನೆ ಮಾಡುತ್ತಿದ್ದಾರೆ. ಜೊತೆಗೆ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಬುಡಕಟ್ಟು ಜನರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣ ಮತ್ತು ಸಮ್ಮೇಳನಗಳನ್ನು ಏರ್ಪಡಿಸುವುದನ್ನು ನಾವು ಕಾಣಬಹುದಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ವಿಭಾಗವು ಬುಡಕಟ್ಟು ಅಧ್ಯಯನಗಳ ವಿವಿಧ ಸಂಶೋಧನೆಗಳನ್ನು ಕೃತಿಗಳ ರೂಪದಲ್ಲಿ ಪ್ರಕಟಿಸುತ್ತಿರುವುದು ಜ್ಞಾನ ಪ್ರಸರಣ ಮತ್ತು ಬುಡಕಟ್ಟುಗಳ ಅಭಿವೃದ್ಧಿಯ ದೃಷ್ಟಿಕೋನದಲ್ಲಿ ಒಂದು ಮಹತ್ತರ ಹೆಜ್ಜೆಯಾಗಿದೆ. ಇತ್ತೀಚೆಗೆ ಇದೇ ವಿಭಾಗದ ವತಿಯಿಂದ "ಬುಡಕಟ್ಟು ಅಧ್ಯಯನ" ಎಂಬ ಪತ್ರಿಕೆ (ಜರ್ನಲ್)ಯ ಪ್ರಕಟವಾಗುತ್ತಿರುವುದು ಅತ್ಯಂತ ಶ್ಲಾಘನೀಯವಾದುದು. ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಬುಡಕಟ್ಟು ಅಧ್ಯಯನ ಕೃತಿಗಳನ್ನು ಪ್ರಕಟಿಸಿದೆ. ೨೦೦೩ರ ಆಗಸ್ಟ್ ತಿಂಗಳಿನಲ್ಲಿ ಲೋಕಸಭೆಯು ರಾಷ್ಟ್ರೀಯ ಬುಡಕಟ್ಟುಗಳ ಆಯೋಗವನ್ನು ರಚಿಸಲು ಅವಕಾಶ ಮಾಡಿಕೊಡುವ ಸಂವಿಧಾನಕ್ಕೆ ೮೯ನೇ ತಿದ್ದುಪಡಿ ತರುವ ಮಸೂದೆಗೆ ಅಂಗೀಕಾರ ನೀಡಿರುವುದು ಬುಡಕಟ್ಟು ಅಭಿವೃದ್ಧಿಯ ಇನ್ನೊಂದು ಹೆಜ್ಜೆಯಾಗಿದೆ. ಇದುವರೆಗೂ ರಾಷ್ಟ್ರಮಟ್ಟದಲ್ಲಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಒಂದೇ ಆಯೋಗವಿದ್ದುದು ಗಮನಾರ್ಹ ಸಂಗತಿ. ಈಗ ಕೇಂದ್ರ

ಸರ್ಕಾರದಲ್ಲಿ ಪ್ರತ್ಯೇಕ ಬುಡಕಟ್ಟು ಅಭಿವೃದ್ಧಿ ಖಾತೆಯನ್ನು ಸೃಷ್ಟಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬುಡಕಟ್ಟುಗಳ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ರೂಪಿಸಿ ಅವುಗಳ ಮೂಲಕ ಬುಡಕಟ್ಟು ಜನರ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಪ್ರಯತ್ನಿಸುತ್ತಿವೆ.

ಕೊನೆಯ ಮಾತು

ಬುಡಕಟ್ಟುಗಳ ಸ್ಥಿತಿಗತಿಗಳು ಸುಧಾರಿಸಬೇಕಾದರೆ ಮೊದಲನೆಯದಾಗಿ ಬುಡಕಟ್ಟು ಜನರಿಗೆ ಶಿಕ್ಷಣದ ಅವಕಾಶ ಒದಗಿಸುವುದು ಅವಶ್ಯಕವಾಗಿದೆ. ಬುಡಕಟ್ಟುಗಳ ನೆಲೆಗಳಲ್ಲಿ ಶಾಲೆಗಳನ್ನು ಸ್ಥಾಪಿಸುವುದರ ಮೂಲಕ ಪ್ರಾಥಮಿಕ ಶಿಕ್ಷಣದ ಜೊತೆಗೆ ಉನ್ನತ ಶಿಕ್ಷಣದ ಅವಕಾಶಗಳನ್ನು ಕಲ್ಪಿಸುವುದು ಮಹತ್ವದ್ದಾಗಿದೆ. ಭೂರಹಿತ ಬುಡಕಟ್ಟು ಜನರಿಗೆ ಭೂಮಿಯನ್ನು ಹಂಚುವುದೂ ಸೇರಿದಂತೆ ಕೃಷಿಗೆ ಸಂಬಂಧಿಸಿದಂತೆ ಉತ್ತೇಜನ ನೀಡಬೇಕಾಗುತ್ತದೆ. ಈಗಾಗಲೇ ಬುಡಕಟ್ಟುಗಳಿಗೆ ಪುನರ್‌ವಸತಿ ಒದಗಿಸಿರುವ ಪ್ರದೇಶಗಳಲ್ಲಿ ಪುನರ್‌ವಸತಿ ಯೋಜನೆಗಳು ಕೆಲವು ಮೂಲ ಸೌಲಭ್ಯಗಳಿಲ್ಲದೆ ವಿಫಲವಾಗಿವೆ ಎಂಬ ಕೂಗು ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಸೂಕ್ತ ಕ್ರಮಗಳ ಅವಶ್ಯಕತೆ ಇದೆ. ಬುಡಕಟ್ಟು ಜನರಿಗೆ ಕಿರು ಅರಣ್ಯ ಉತ್ಪನ್ನಗಳನ್ನು ಪಡೆಯಲು ಅನುಮತಿಸುವುದರ ಮೂಲಕ ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದಂತಾಗುತ್ತದೆ. ಜೊತೆಗೆ ಬುಡಕಟ್ಟುಗಳ ಜನರಲ್ಲಿರುವ ಗಿಡಮೂಲಿಕೆಯ ಔಷಧ ಜ್ಞಾನವನ್ನು ಜಾಗತೀಕರಿಸಿ ಪೇಟೆಂಟ್ ಒದಗಿಸುವುದರಿಂದ ಉತ್ತಮ ಮಾರುಕಟ್ಟೆ ಸಿಗುವಂತೆ ಮಾಡಬೇಕಾಗುತ್ತದೆ. ಕರ್ನಾಟಕ ರಾಜ್ಯದ ಕೆಲವು ಬುಡಕಟ್ಟುಗಳೂ ಸೇರಿದಂತೆ ಭಾರತದ ಕೆಲವು ಬುಡಕಟ್ಟುಗಳ ಸಂವಿಧಾನಬದ್ಧವಾದ ಅನುಸೂಚಿತ ಪಟ್ಟಿಯಲ್ಲಿ ಸೇರಿಲ್ಲವಾದ್ದರಿಂದ ಅಂತಹ ಬುಡಕಟ್ಟುಗಳನ್ನು ಸರ್ಕಾರಗಳು ಅನುಸೂಚಿತ ಪಟ್ಟಿಯಲ್ಲಿ ಸೇರಿರುವ ಮೂಲಕ ಅವರಿಗೆ ಸಾಮಾಜಿಕ ನ್ಯಾಯ ಒದಗಿಸಿದಂತಾಗಿ ಅವರ ಅಭಿವೃದ್ಧಿ ಸಾಧ್ಯವಾಗುತ್ತದೆ. ಬುಡಕಟ್ಟುಗಳಲ್ಲಿರುವ ಕೆಲವು ಅಮಾನವೀಯ ಆಚರಣೆಗಳನ್ನು ಸರ್ಕಾರೇತರ ಸಂಸ್ಥೆಗಳ ಮತ್ತು ಜನರ ಸಹಯೋಗದೊಂದಿಗೆ ನಿರ್ಮೂಲನೆಗೊಳಿಸಿದರೆ ಬುಡಕಟ್ಟುಗಳು ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಂಡು ಕುರುಡು ನಂಬಿಕೆಗಳನ್ನು ಬಿಡುವುದರೊಂದಿಗೆ ಸಾಮಾಜಿಕ ಸಬಲೀಕರಣ ಸಾಧಿಸಲು ಸಾಧ್ಯವಾಗುತ್ತದೆ. ಬುಡಕಟ್ಟು ಜನರ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಬುಡಕಟ್ಟು ಜನರ ಸಮಸ್ಯೆಗಳನ್ನು ಅವರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿ ಗುಣಾತ್ಮಕ ಅಭಿವೃದ್ಧಿಯ ಮಾರ್ಗೋಪಾಯಗಳನ್ನು ಕಂಡುಹಿಡಿದು ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದು ಇಂದಿನ ಅಗತ್ಯವಾಗಿದೆ.

ಗ್ರಂಥಋಣ

೧. ನಂಜಮ್ಮಣ್ಣಿ ಎಂ., ೧೯೭೪, ಸಾಮಾಜಿಕ ಮಾನವಶಾಸ್ತ್ರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೨. ಮೇತ್ರಿ ಕೆ ಎಂ., ೨೦೦೨, ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. Gurulingaiah M. 'Purity and Pollution among Kadu Gollas', SAMAJA Shodhana, Journal of Mangalore Sociology Association, Vol. 6, No.2, Oct, 1997

೪. Kumar A., 2002, Tribal Development in India, Sarup and Sons Publications, New Delhi

೫. Nadeem Hasnain, 1983, Tribal India Today, Harman Publication, New Delhi

೬. Shah Dilip, Tribal Development, Planning and Performance, Kurukshetra, Journal of Rural Development, June, 2003

೭. ಸಂವಾದ ಮಾಸ ಪತ್ರಿಕೆ ಆಗಸ್ಟ್ ೨೦೦೩

೮. ಪ್ರಜಾವಾಣಿ

೯. ದ ಹಿಂದೂ ದಿನಪತ್ರಿಕೆ

೩

ಬುಡಕಟ್ಟು ಸಮುದಾಯದ ಸಮಸ್ಯೆಗಳು: ಕೆಲವು ವಿಚಾರಗಳು

ಡಾ ಆರ್ ಬಿ ಕುಮಾರ್

[ಡಾ ಆರ್ ಬಿ ಕುಮಾರ್ ಅವರು ಮುದ್ದೆ ಕಂಬಾರ ಸಮುದಾಯವನ್ನು ಒಂದು ಬುಡಕಟ್ಟಿನ ಹಿನ್ನೆಲೆಯಲ್ಲಿ ಅಧ್ಯಯನಿಸಿದ್ದಾರೆ. ಜೊತೆಗೆ ಇಂದು ಬುಡಕಟ್ಟುಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ತಮ್ಮ ವಿಚಾರಗಳನ್ನು ಇಲ್ಲಿ ಮಂಡಿಸಿದ್ದಾರೆ.]

ಆಧುನಿಕತೆಯಿಂದ ಹಲವಾರು ಬದಲಾವಣೆಗಳು ಆಗಿವೆಯೆಂಬುದು ನಿಜ. ಆದರೆ ಬುಡಕಟ್ಟು ಸಮುದಾಯಗಳ ವಿಚಾರದಲ್ಲಿ ಈ ಮಾತು ನಿಜವಾಗಲಾರದು. ಪಾರಂಪರಿಕ ಜ್ಞಾನವನ್ನು ತಮ್ಮಲ್ಲಿ ಅಡಗಿಸಿಕೊಂಡಿದ್ದ ಬುಡಕಟ್ಟು ಸಮುದಾಯಗಳು ಆಧುನಿಕ ತಂತ್ರಜ್ಞಾನ ಹಾಗೂ ಅವುಗಳಿಂದ ಹುಟ್ಟಿದ ಕಾರ್ಖಾನೆಗಳ ಭರಾಟೆಯಿಂದಾಗಿಯೇ ತಮ್ಮ ಮೂಲ ಕಸುಬುಗಳಿಂದ ದೂರ ಸರಿಯಬೇಕಾದ ಅನಿವಾರ್ಯತೆಯುಂಟಾಯಿತು. ವಿದೇಶಿಯರು ಹೊತ್ತು ತಂದ ಆಧುನಿಕತೆಯ ಗಾಳಿ ಭಾರತೀಯ ಬುಡಕಟ್ಟುಗಳಲ್ಲಿ ದುಸ್ವಪ್ನವಾಗಿ ಪರಿಣಮಿಸಿತು. ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ಕಬ್ಬಿಣ ತಯಾರಿಸುತ್ತಿದ್ದ ಮುದ್ದೆ ಕಮ್ಮಾರರಂತಹ ಸಮುದಾಯ ಆಧುನಿಕತೆಯ ಪರಿಣಾಮವಾಗಿ ತನ್ನ ಮೂಲ ಕಸುಬನ್ನೇ ತ್ಯಜಿಸಿ ಅಪರಾಧಿ ಸಮುದಾಯವಾಗಿ ರೂಪುಗೊಳ್ಳುವಂತಾಯಿತು. ಇದು ಕೇವಲ ಮುದ್ದೆ ಕಮ್ಮಾರ ಸಮುದಾಯದ ಪ್ರಶ್ನೆಯಾಗಿ ಮಾತ್ರ ಉಳಿಯಲಿಲ್ಲ. ಇವರಂತಹ ಎಷ್ಟೋ ಬುಡಕಟ್ಟುಗಳು ಮುದ್ದೆಕಮ್ಮಾರ ಸಮುದಾಯ ಅನುಭವಿಸುತ್ತಿರುವ ಕಷ್ಟ ನಷ್ಟಗಳನ್ನೇ ಅನುಭವಿಸಿದವು ಹಾಗೂ ಇಂದಿಗೂ ಅನುಭವಿಸುತ್ತಿವೆ.

ಅಸಮಾನತೆಯನ್ನು ಕೇವಲ ಹಣದ ಮೂಲಕ ಅಳೆಯುತ್ತಿರುವ ಇಂದಿನ ವ್ಯವಸ್ಥೆಯಲ್ಲಿ ಜಾಗತೀಕರಣ ಎನ್ನುವುದು ಇನ್ನೂ ಹೆಚ್ಚಿನ ಭಯವನ್ನೇ ಬುಡಕಟ್ಟು ಸಮುದಾಯಗಳಲ್ಲಿ ಹುಟ್ಟು ಹಾಕಿದೆ. ಕೆಲವೇ ಕೆಲವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಜಾಗತೀಕರಣ ಎನ್ನುವ ಮಂತ್ರ ಜಪಿಸುತ್ತಾ ಅಭಿವೃದ್ಧಿ ಹೊಂದಿದ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳನ್ನು ತಮ್ಮ ಕಬಂಧ ಬಾಹುವಿನಲ್ಲಿ ಬಿಗಿಯಾಗಿ ಬಂಧಿಸುತ್ತಾ ಸಾಗಿದೆ ಈ ವ್ಯವಸ್ಥೆಯಲ್ಲಿ ಬುಡಕಟ್ಟು ಸಮುದಾಯಗಳು ಇನ್ನೂ ತಳಕ್ಕೆ ಸರಿಯುವ ಸಾಧ್ಯತೆಯೇ ಹೆಚ್ಚಾಗಿ ಕಂಡು

ಬರುತ್ತಿದೆ. ಇಂತಹ ಉಸಿರು ಕಟ್ಟಿಸುವ ವಾತಾವರಣದಿಂದ ಅಮಾಯಕ ಬುಡಕಟ್ಟುಗಳನ್ನು ಕಾಪಾಡಬೇಕಾದ ಹೊಣೆ ಪ್ರತಿಯೊಬ್ಬ ಪ್ರಜ್ಞಾವಂತರದಾಗಿರುತ್ತದೆ. ಈ ನಿಟ್ಟಿನಲ್ಲಿ ಆಲೋಚಿಸಿ ಅವುಗಳ ಕ್ಷೇಮಕ್ಕಾಗಿ ಹೋರಾಡುವ ಹೊಣೆ ಬುಡಕಟ್ಟು ಸಮುದಾಯಗಳ ಕುರಿತು ಕಾಳಜಿಯುಳ್ಳ ಅಧ್ಯಯನಕಾರರು ಮಾಡಬೇಕಾಗಿದೆ.

ಪ್ರಸ್ತುತ ಈ ಲೇಖನದಲ್ಲಿ ಬುಡಕಟ್ಟು ಸಮುದಾಯಗಳು ಎದುರಿಸುತ್ತಿರುವ ಕೆಲವು ಸಮಸ್ಯೆಗಳ ಕುರಿತು ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ಮೊದಲನೆದಾಗಿ ಎಷ್ಟೋ ಬುಡಕಟ್ಟು ಸಮುದಾಯಗಳು, ಬುಡಕಟ್ಟು ಸಮುದಾಯ ವೆಂದು ಪರಿಗಣಿತವಾಗದೆ ಇರುವುದು.

ಎರಡನೆಯದಾಗಿ ಬುಡಕಟ್ಟು ಸಮುದಾಯಗಳು ಅನುಸೂಚಿತ ಪಟ್ಟಿಗೆ ಸೇರಿಯೂ ಸೌಲಭ್ಯ ವಂಚಿತವಾಗಿರುವುದು.

ಮೂರನೆಯದಾಗಿ ಬುಡಕಟ್ಟು ಸಮುದಾಯಕ್ಕೆ ಸೇರಿದ ಸಮುದಾಯಗಳು ರಾಜಕೀಯ ಪ್ರಾಬಲ್ಯದಿಂದ ಪರಿಶಿಷ್ಟ ಪಂಗಡದ ಪಟ್ಟಿಗೆ ನುಸುಳುವ ಪ್ರಯತ್ನ ನಡೆಸುವುದು. ಈ ಮೂರು ಸಮಸ್ಯೆಗಳ ಹೊರತಾಗಿ ಇನ್ನು ಎಷ್ಟೋ ಸಮಸ್ಯೆಗಳನ್ನು ಬುಡಕಟ್ಟು ಸಮುದಾಯಗಳು ಎದುರಿಸುತ್ತಿವೆ.

ಯಾವುದೇ ಒಂದು ಗುಂಪು ಅಥವಾ ಸಮುದಾಯವನ್ನು ಬುಡಕಟ್ಟು ಎಂದು ಗುರುತಿಸಲು ನಿರ್ದಿಷ್ಟವಾದ ಕೆಲವು ಲಕ್ಷಣಗಳಿವೆ. ಅವರು ಗುಂಪಾಗಿ ವಾಸಿಸುತ್ತಾರೆ. ತಮ್ಮದೇ ಆದ ಭಾಷೆಯನ್ನು ಹೊಂದಿರುತ್ತಾರೆ. ಅನ್ಯರಿಗಿಂತ ವಿಶಿಷ್ಟವಾದ ಆಚರಣಾ ವಿಧಿ ವಿಧಾನಗಳನ್ನು ಅನುಸರಿಸುತ್ತಾರೆ. ಆದರೆ ಆಧುನಿಕ ಒತ್ತಡಗಳಲ್ಲಿ ಎಷ್ಟೋ ಬುಡಕಟ್ಟುಗಳು ತಮ್ಮ Identityಯನ್ನು ಉಳಿಸಿಕೊಳ್ಳಲು ಹೋರಾಡಬೇಕಾದ ಸ್ಥಿತಿ ಇದೆ. ಇಂದು ಹಲವು ಬುಡಕಟ್ಟುಗಳು ತಮ್ಮ ಭಾಷೆಯನ್ನೇ ಕಳೆದುಕೊಳ್ಳುತ್ತಿವೆ. ಉದಾಹರಣೆಗೆ ಮುದ್ದೆಕಮ್ಮಾರ ಸಮುದಾಯ ತನ್ನದೇ ಆದ ಭಾಷೆಯನ್ನು ಹೊಂದಿತ್ತು. ಆದರೆ ಆ ಭಾಷೆ ಇಂದು ಕಳೆದುಹೋಗಿದೆ. ಮುದ್ದೆಕಮ್ಮಾರರ ಭಾಷೆ ಕನ್ನಡವಾಗಿ ಮಾರ್ಪಟ್ಟಿದೆ. ಆಧುನಿಕತೆ ಯೆನ್ನುವುದು ಬುಡಕಟ್ಟುಗಳನ್ನು ಇಬ್ಬಂದಿತನಕ್ಕೆ ದೂಡುತ್ತದೆ. ಇಂತಹ ಸಂದರ್ಭದಲ್ಲಿ ಬುಡಕಟ್ಟುಗಳು ಯಾವುವು? ಎಂದು ಗುರುತಿಸುವುದೇ ತುಂಬಾ ಕಷ್ಟಕರವಾದ ವಿಚಾರವಾಗಿ ಉಳಿಯುತ್ತದೆ. ಮುಖ್ಯವಾಗಿ ಬಯಲು ಸೀಮೆಯಲ್ಲಿ ಇತರೆ ಜಾತಿ ಸಮುದಾಯಗಳೊಂದಿಗೆ ಸಹಬಾಳ್ವೆ ಮಾಡುತ್ತಿರುವ ಬುಡಕಟ್ಟು ಸಮುದಾಯಗಳು ಇಂತಹ ಸಮಸ್ಯೆಗಳನ್ನು ಹೆಚ್ಚು ಎದುರಿಸುತ್ತಿವೆ. ಇಂತಹ ಬುಡಕಟ್ಟುಗಳನ್ನು ಗುರುತಿಸಲು ಸೂಕ್ಷ್ಮಮನೋಭಾವ ಹಾಗೂ ಆಳವಾದ ಅಧ್ಯಯನ ಮಾಡಬೇಕಾಗುತ್ತದೆ. ಕ್ಷೇತ್ರಕಾರ್ಯ ಮಾಡುವವರಲ್ಲಿ ತಾಳ್ಮೆ ಮತ್ತು ಆಳವಾದ ಅಧ್ಯಯನ ಗುಣದ ಕೊರತೆಯಿಂದಾಗಿಯೇ ಇಂದು ಎಷ್ಟೋ ಸಮುದಾಯಗಳು ಬುಡಕಟ್ಟು ಪಟ್ಟಿಯಲ್ಲಿ ಸೇರದೇ ಹೋಗಿವೆಯೆಂದು ಹೇಳಬಹುದು. ಮುದ್ದೆ ಕಮ್ಮಾರ ಸಮುದಾಯ ಕೇವಲ ಮಧ್ಯಕರ್ನಾಟಕದಲ್ಲಿ ನೆಲೆಸಿದೆಯಾದರೂ ಇದರ ಇತರ ಒಳ ಪಂಗಡಗಳು ಕೊಳ್ಳೇಗಾಲ ಮತ್ತು ಉತ್ತರ ಕನ್ನಡ ಪ್ರದೇಶಗಳಿಗೆ ವಲಸೆ ಹೋಗಿರುವುದು

ಕಂಡುಬರುತ್ತದೆ. ಕೊಳ್ಳೇಗಾಲದ ಕಮ್ಮಾರರು ಕಬ್ಬಿಣ ತಯಾರಿಸುವವರಾಗಿದ್ದಾರೆ. ಕೊಳ್ಳೇಗಾಲ ಪ್ರದೇಶದ ಹಲಗೂರು ಮುಂತಾದವುಗಳಲ್ಲಿ ಮಧ್ಯಕರ್ನಾಟಕದಲ್ಲಿ ದೊರೆಯುವ ಕಬ್ಬಿಣ ತಯಾರಿಕೆಯ ಎಲ್ಲಾ ಲಕ್ಷಣಗಳು ಇಂದಿಗೂ ಉಳಿದಿವೆ. ಪ್ರಾಯಶಃ ಕೊಳ್ಳೇಗಾಲ, ಉತ್ತರ ಕನ್ನಡ ಪ್ರದೇಶಗಳಿಗೆ ಮಧ್ಯಕರ್ನಾಟಕದಿಂದಲೇ ಕಮ್ಮಾರರು ವಲಸೆ ಹೋಗಿರುವ ಸಾಧ್ಯತೆ ಇದೆ. ಏಕೆಂದರೆ ಮಂಟೇಸ್ವಾಮಿ ಕಾವ್ಯದಲ್ಲಿ ರಾಚಪ್ಪಾಜಿಯು ಹಂಪಿ ಪ್ರದೇಶದಿಂದಲೇ ಕೊಳ್ಳೇಗಾಲದ ಕಡೆ ತೆರಳುತ್ತಾನೆಂಬ ಉಲ್ಲೇಖ ದೊರೆಯುತ್ತದೆ. ಭೌಗೋಳಿಕ ಕಾರಣಗಳಿಗಾಗಿ ಕೊಳ್ಳೇಗಾಲ ಮತ್ತು ಉತ್ತರ ಕನ್ನಡದ ಕಮ್ಮಾರರೊಂದಿಗೆ ಮಧ್ಯಕರ್ನಾಟಕದ ಮುದ್ದೆ ಕಮ್ಮಾರರು ಕೌಟುಂಬಿಕ ಸಂಬಂಧಗಳನ್ನು ಹೊಂದಲು ಸಾಧ್ಯವಾಗದೇ ಇರುವ ಸಾಧ್ಯತೆಗಳೂ ಇವೆ. ಇಂದು ಕೊಳ್ಳೇಗಾಲ ಮತ್ತು ಉತ್ತರ ಕನ್ನಡ ಪ್ರದೇಶದ ಕಮ್ಮಾರರನ್ನು ಅನುಸೂಚಿತ ಪರಿಶಿಷ್ಟ ಪಂಗಡಕ್ಕೆ ಸೇರಿಸಲಾಗಿದೆ. ಆದರೆ ಇತರ ಪ್ರದೇಶಗಳಲ್ಲಿ ನೆಲೆಸಿರುವ ಕಮ್ಮಾರರಿಗೆ ಈ ಸೌಲಭ್ಯ ದೊರೆಯದೇ ಹೋಗಿದೆ. ಪ್ರಾಯಶಃ ಕ್ಷೇತ್ರಕಾರ್ಯ ಮಾಡುವವರ ನಿರ್ಲಕ್ಷತೆ ಇದಕ್ಕೆ ಕಾರಣವಾಗಿರುವ ಸಾಧ್ಯತೆ ಇದೆ. ಇದು ಕೇವಲ ಕಮ್ಮಾರ ಸಮುದಾಯದ ಪ್ರಶ್ನೆಯಲ್ಲ. ಇಂತಹ ಎಷ್ಟೋ ಬುಡಕಟ್ಟುಗಳು ಈ ಸಮಸ್ಯೆಗಳನ್ನು ಎದುರಿಸುತ್ತಿವೆ. ಅಂದರೆ ಇಂದು ಅನುಸೂಚಿತ ಪಟ್ಟಿಯಿಂದ ಹೊರಗುಳಿದ ಬುಡಕಟ್ಟು ಸಮುದಾಯಗಳನ್ನು ಮರಳಿ ಅಧ್ಯಯನ ನಡೆಸಿ ಅವುಗಳನ್ನು ಅನುಸೂಚಿತ ಬುಡಕಟ್ಟು ಪಂಗಡಗಳಲ್ಲಿ ಸೇರಿಸಬೇಕಾದ ಅಗತ್ಯತೆ ಇದೆ. ಹೀಗೆ ಮಾಡದೇ ಹೋದಲ್ಲಿ ಆ ಎಲ್ಲಾ ಬುಡಕಟ್ಟು ಸಮುದಾಯಗಳಿಗೂ ಅನ್ಯಾಯ ಮಾಡಿದಂತಾಗುತ್ತದೆ.

ಇಲ್ಲಿ ಗಮನಿಸಬಹುದಾದ ಇನ್ನೊಂದು ಅಂಶವೆಂದರೆ ಬುಡಕಟ್ಟು ಪಂಗಡಗಳಿಗೆ ದೊರೆಯಬೇಕಾದ ಸೌಲಭ್ಯಗಳನ್ನು ಕೆಲವೇ ಕೆಲವು ಸಮುದಾಯಗಳು ಪಡೆಯುತ್ತಿವೆ. ಅನುಸೂಚಿತ ಪಟ್ಟಿಗೆ ಸೇರಿದ್ದರೂ, ಎಷ್ಟೋ ಬುಡಕಟ್ಟು ಸಮುದಾಯಗಳು ಸೌಲಭ್ಯ ವಂಚಿತವಾಗಿಯೇ ಉಳಿದಿವೆ. ಇಂತಹ ಸಮುದಾಯಗಳಿಗೂ ಸೌಲಭ್ಯ ದೊರೆಯುವಂತೆ ಮಾಡಿದರೆ ಒಳಿತು ಎನಿಸುತ್ತದೆ.

ಈ ರೀತಿಯಲ್ಲಿ ಹೊಸದಾಗಿ ಸಮೀಕ್ಷೆ ಮಾಡಿ ಪರಿಶಿಷ್ಟ ಪಂಗಡದಲ್ಲಿ ಹೊಸ ಸಮುದಾಯಗಳನ್ನು ಸೇರಿಸುವಾಗ ಕೆಲವು ತೊಂದರೆಗಳು ಏರ್ಪಡುತ್ತವೆ. ಮುಖ್ಯವಾಗಿ ಈಗಾಗಲೇ ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಗುರುತಿಸಿಕೊಂಡಿರುವ ಸಮುದಾಯಗಳು ಹೊಸದಾಗಿ ಬೇರೆ ಸಮುದಾಯಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವುದನ್ನು ಆಕ್ಷೇಪಿಸುತ್ತವೆ. ತನ್ನ ಸವಲತ್ತುಗಳನ್ನು ಹಂಚಿಕೊಳ್ಳಲು ಇನ್ನೊಂದು ಬಾಯಿ ಇಲ್ಲಿ ಸೃಷ್ಟಿಯಾಗಿದೆಯಲ್ಲ ಎನ್ನುವ ಸಂಕಟವೇ ಇಂಥ ಆಕ್ಷೇಪಣೆ-ಪ್ರತಿಭಟನೆಗಳಿಗೆ ಕಾರಣ ವಾಗಿರುತ್ತದೆ. ಈ ರೀತಿಯ ಆಕ್ಷೇಪಣೆಯಿಂದ ಹೊರಗುಳಿಯಬೇಕಾದಲ್ಲಿ ಹೊಸದಾಗಿ ಪರಿಶಿಷ್ಟ ಪಂಗಡಕ್ಕೆ ಸೇರಬಹುದಾದ ಸಮುದಾಯ/ಬುಡಕಟ್ಟುಗಳನ್ನು ಗುರುತಿಸಿ ಪರಿಶಿಷ್ಟ ಪಂಗಡಕ್ಕೆ ಸಿಗುವ ಸೌಲಭ್ಯಗಳೆಲ್ಲವೂ ಈ ಸಮುದಾಯಗಳಿಗೆ ದೊರೆಯುವಂತೆ ಪ್ರತ್ಯೇಕ ಮೀಸಲಾತಿ ಕಲ್ಪಿಸುವುದು ಇಲ್ಲವೇ ಈಗಿರುವ ಶೇ. ೩ರ ಮೀಸಲಾತಿ ಸೌಲಭ್ಯವನ್ನು ಶೇ.

೭.೫ಕ್ಕೆ ವಿಸ್ತರಿಸುವುದು. ಇದರಿಂದಾಗಿ ಈಗಾಗಲೇ ಸೌಲಭ್ಯ ಪಡೆಯುತ್ತಿರುವ ಅನುಸೂಚಿತ ಬುಡಕಟ್ಟು ಪಂಗಡಗಳ ಪ್ರತಿಭಟನೆ ತಪ್ಪಿಸಬಹುದಾಗಿದೆ.

ಎರಡನೆಯದಾಗಿ ಬುಡಕಟ್ಟು ಸಮುದಾಯಕ್ಕೆ ಸೇರದ ವ್ಯಕ್ತಿ ತಾನು ಬುಡಕಟ್ಟು ಸಮುದಾಯಕ್ಕೆ ಸೇರಿದವನೆಂದು ಹೇಳಿಕೊಂಡು ಮೀಸಲಾತಿ ಸೌಲಭ್ಯ ಪಡೆಯುವುದನ್ನು ನಿರ್ದಾಕ್ಷಿಣ್ಯವಾಗಿ ತಡೆಗಟ್ಟಬೇಕು. ಹಾಗೇ ಆ ರೀತಿ ಸೌಲಭ್ಯ ಪಡೆಯುತ್ತಿರುವ ವ್ಯಕ್ತಿಗಳ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತಾಗಬೇಕು. ಪ್ರಸ್ತುತ ಸುಮಾರು ಐವತ್ತು ಬುಡಕಟ್ಟು ಸಮುದಾಯಗಳನ್ನು ಕರ್ನಾಟಕದಲ್ಲಿ ಗುರುತಿಸಿ ಅನುಸೂಚಿತ ಪಟ್ಟಿಯಲ್ಲಿ ಸೇರಿಸಲಾಗಿದೆ ಯಾದರೂ, ಮುಖ್ಯವಾಗಿ ನೌಕರಿ ಇತ್ಯಾದಿ ಸೌಲಭ್ಯಗಳನ್ನು ಪಡೆಯುತ್ತಿರುವ ಬುಡಕಟ್ಟು ಸಮುದಾಯಗಳು ಬೆರಳೆಣಿಕೆಯಷ್ಟೆಂದರೆ ತಪ್ಪಾಗದು, ಆದ್ದರಿಂದ ಎಲ್ಲಾ ಬುಡಕಟ್ಟು ಸಮುದಾಯಗಳಿಗೂ ಸೌಲಭ್ಯ ಪಡೆಯುವಲ್ಲಿ ಸಮಾನ ಹಂಚಿಕೆಯಾಗುವಂತೆ ಗಮನ ಹರಿಸಬೇಕು.

ಕೊನೆಯದಾಗಿ ಸರ್ಕಾರಿ ವ್ಯವಸ್ಥೆಯು ಬುಡಕಟ್ಟು ಸಮುದಾಯಗಳ ಮನೋಭಾವನೆಗೆ ಸ್ಪಂದಿಸುವಂತಿರಬೇಕು. ಇಲ್ಲದೇ ಹೋದರೆ ಈಗ ನಡೆಯುತ್ತಿರುವಂತೆ ಕಾಡಿನಲ್ಲಿಯೇ ನೆಲೆಸಿರುವ ಬುಡಕಟ್ಟುಗಳನ್ನು ನಾಡಿಗೆ ಎಳೆದು ತರುವುದು. ಅವುಗಳಿಗೆ ಅನುಕೂಲ ವಾಗುವುದಕ್ಕಿಂತ ಅನಾನುಕೂಲವೇ ಹೆಚ್ಚಾಗುವಂತೆ ಮನೆಗಳನ್ನು ನಿರ್ಮಿಸಿಕೊಡುವುದು, ಬುಡಕಟ್ಟು ಮಹಿಳೆಯರನ್ನು ಲೈಂಗಿಕವಾಗಿ ಶೋಷಿಸುವುದು ನಿಲ್ಲುವಂತಾಗಬೇಕು. ಕಾಡಿನಲ್ಲಿ ವಾಸಿಸುವ ತಮಗೆ ಅನುಕೂಲವಾಗುವಂತೆ ತುಂಬಾ ಸರಳವಾದ ಮನೆಗಳನ್ನು ಅತೀ ಕಡಿಮೆ ಖರ್ಚಿನಲ್ಲಿ ಬುಡಕಟ್ಟು ಸಮುದಾಯಗಳು ನಿರ್ಮಿಸಿಕೊಳ್ಳುತ್ತವೆ. ಅಂತಹದೇ ಮನೆಗಳನ್ನು ನಿರ್ಮಿಸಿಕೊಡುವುದರಿಂದ ಸರ್ಕಾರಕ್ಕೆ ಇನ್ನು ಹೆಚ್ಚಿನ ಉಳಿತಾಯವೇ ಆಗುತ್ತದೆ. ಆದರೆ ಸರ್ಕಾರ ಮತ್ತು ಯೋಜನೆಗಳನ್ನು ರೂಪಿಸುವವರು ಇಂತಹ ಸೂಕ್ಷ್ಮಗಳನ್ನು ಅರಿಯದೇ ಹೋಗುತ್ತಾರೆ. ಇದರಿಂದ ಕಾಂಟ್ರ್ಯಾಕ್ಟುದಾರರಿಗೆ, ಯೋಜನೆ ರೂಢಿಸಿದವರಿಗೆ, ಸರ್ಕಾರಿ ಅಧಿಕಾರಿಗಳಿಗೆ ಹೆಚ್ಚಿನ ಲಾಭವೇ ಹೊರತು ಅದನ್ನು ಉಪಯೋಗಿಸಬೇಕಿದ್ದ ಸಮುದಾಯ ಗಳಿಗೆ ಅದರಿಂದ ಯಾವುದೇ ಉಪಯೋಗವಾಗುವುದಿಲ್ಲ. ಬಹುತೇಕವಾಗಿ ಸರ್ಕಾರ ರಚಿಸಿಕೊಟ್ಟ ಮನೆಗಳು ಖಾಲಿಯಾಗಿಯೇ ಉಳಿದು ಬಿದ್ದು ಹೋಗಬಹುದಾದ ಸಾಧ್ಯತೆಗಳೇ ಹೆಚ್ಚು. ಆದ್ದರಿಂದ ಅವೈಜ್ಞಾನಿಕ ರೀತಿಯಲ್ಲಿ ಮನೆ ರಚಿಸದೆ ಬುಡಕಟ್ಟು ಮನೋಭಾವನೆಗೆ ಒಗ್ಗುವಂತಹ ಮನೆಗಳನ್ನು ನಿರ್ಮಿಸಿದರೆ ಒಳಿತು, ಇದು ಕೇವಲ ಮನೆಯೊಂದರ ವಿಚಾರವಲ್ಲ. ಪ್ರತಿಯೊಂದು ಹಂತದಲ್ಲಿಯೂ ಬುಡಕಟ್ಟುಗಳ ಮನೋಭಾವನೆಗೆ ಸರ್ಕಾರ ಮತ್ತು ಅಧಿಕಾರಿಗಳು ಸ್ಪಂದಿಸಬೇಕು, ಆಧುನಿಕ ಒತ್ತಡಗಳಲ್ಲಿ ನಲುಗಿ ಹೋಗಿರುವ ಬುಡಕಟ್ಟುಗಳಿಗೆ ಇಂದು ಜಾಗತೀಕರಣದ ಭೀತಿ ಇನ್ನೂ ಢಾಳಾಗಿ ಹೆದರಿಸುತ್ತಿದೆ. ಇಂತಹ ಹಲವು ಸಮಸ್ಯೆಗಳಿಂದ ಬುಡಕಟ್ಟು ಸಮುದಾಯಗಳನ್ನು ಕಾಪಾಡುವ ಕೆಲಸ ಸರ್ಕಾರ ಮತ್ತು ಪ್ರಜ್ಞಾವಂತರು ಹಾಗೂ ಸಾರ್ವಜನಿಕರಿಂದ ಆಗಬೇಕಾಗಿದೆ.

೪

ಜನಪದ ಕಲೆಗಳ ಸಾಂಸ್ಕೃತಿಕ ಸಂವಹನ

ಡಾ ಮೊಗಳ್ಳಿ ಗಣೇಶ್

[ಡಾ ಮೊಗಳ್ಳಿ ಗಣೇಶ್ ಅವರು ಜನಪದರಲ್ಲಿಯ ದಲಿತ ಸಂವೇದನೆಗಳನ್ನು ಸಮಷ್ಟಿ ಗೊಳಿಸುವುದರ ಮೂಲಕ ಮುಖ್ಯಧಾರೆಯ ಜನರಿಗೆ ಜನಪದ ದಲಿತರ ಹಕ್ಕುಗಳ ಕುರಿತು ಮನವರಿಕೆ ಮಾಡುವ ದಿಟ್ಟ ಲೇಖಕರು. ಜನಪದ ಕಲೆಗಳ ಸಾಂಸ್ಕೃತಿಕ ಸಂವಹನ ಎಂಬೀ ಲೇಖನದಲ್ಲಿ ಅಲೆಮಾರಿ, ಆದಿವಾಸಿ ಮತ್ತು ಗ್ರಾಮೀಣ ಜನಪದರ ಕಲೆಗಳ ಮೇಲೆ ವಿಶಿಷ್ಟ ಬೆಳಕು ಚೆಲ್ಲಲಾಗಿದೆ.]

ಜನಪದ ಸಂಸ್ಕೃತಿಯು ಬೃಹತ್ ಭಾರತದ ಪ್ರಾಥಮಿಕ ರೂಪ. ಗ್ರಾಮೀಣ ಪರಂಪರೆಗಳೆಲ್ಲವು ಗತಕಾಲದ ಸಮಷ್ಟಿ ಸಂವೇದನೆಯನ್ನು ದಟ್ಟವಾಗಿ ಬಹುಕಾಲ ಘಟ್ಟಗಳಲ್ಲಿ ಅಂತರ್ಗತಿಸಿಕೊಳ್ಳುತ್ತಲೆ ವಿಕಾಸಗೊಂಡಿರುತ್ತವೆ. ಜನಪದ ಕಲೆಗಳು ಜನತೆಯ ಸಂಸ್ಕೃತಿಯನ್ನು ಹಲವು ಗುರಿಗಳಲ್ಲಿ ಅಭಿನಯಿಸುತ್ತಾ ಆಚರಿಸುತ್ತಾ ಪರಂಪರೆ ಯನ್ನು ವಿಸ್ತರಿಸುವ ಕೆಲಸವನ್ನು ಮಾಡುತ್ತಿರುತ್ತವೆ. ಪ್ರತಿಯೊಂದು ಜನಪದ ಕಲೆಯು ತನ್ನ ಕಾಲದ ಸಂಬಂಧಗಳನ್ನು ಪೂರ್ವಕಾಲದ ಮೌಲ್ಯಗಳ ಜೊತೆಗೆ ಬೆಸುಗೆ ಮಾಡುತ್ತ ಗತಕಾಲವನ್ನೆ ಬಹುರೂಪದಲ್ಲಿ ಅಭಿನಯಿಸುತ್ತಾ ದೃಷ್ಟೀಕರಿಸುತ್ತಿರುತ್ತದೆ. ಜನಪದ ಕಲೆಗಳ ಜೀವಂತಿಕೆ ಇದು. ಗತಕಾಲದ ಆಚಾರ-ವಿಚಾರ ನಂಬಿಕೆ ಸಂಪ್ರದಾಯಗಳು ಅವರು ರೂಢಿಸಿಕೊಂಡ ಕಲೆಗಳ ಮೂಲಕ ಸಾಮಾಜಿಕ ಒಪ್ಪಂದವನ್ನು ಏರ್ಪಡಿಸುತ್ತಲೆ ಸಾಂಸ್ಕೃತಿಕವಾದ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಿರುತ್ತದೆ.

ಜನಪದ ಕಲೆಗಳು ಹೀಗಾಗಿವೆ ಒಂದು ನಾಡಿದ ಸಂಸ್ಕೃತಿಯು ಪುನರ್ ಅಭಿನಯ ಮತ್ತು ಪ್ರತಿಪಾದನೆಯನ್ನು ಮಾಡುತ್ತಿರುತ್ತವೆ. ಜನಪದ ಕಲೆಯು ಒಂದು ಸಮಾಜದ ಒಟ್ಟು ನಂಬಿಕೆಯನ್ನು ಬಿಂಬಿಸುತ್ತಲೆ ಆ ಸಮುದಾಯದ ವಿಶಿಷ್ಟ ಅಭಿವ್ಯಕ್ತಿಯನ್ನು ತೋರುತ್ತಿರುತ್ತದೆ. ಜನಪದ ಕಲೆಗಳು ಸಾವಿರಾರು ಬಗೆಯಲ್ಲಿ ಪರಿಷ್ಕಾರಗೊಂಡು ವಿವಿಧ ಕಾಲದ ಸಮಾಜಗಳ ನೆನಪುಗಳನ್ನು ಹೊತ್ತು ಬಂದಿರುತ್ತವೆ. ಹೀಗಾಗಿದೆ ಜನಪದ ಕಲೆಗಳ ಸಮಷ್ಟಿ ಅಭಿವ್ಯಕ್ತಿ. ಗ್ರಾಮೀಣ ಸಮುದಾಯಗಳು ತಮ್ಮ ಸಾಂಸ್ಕೃತಿಕ ಸಾಮಾಜಿಕ ಆರ್ಥಿಕ ಹಾಗೂ ಮಾನಸಿಕ ವಲಯಗಳನ್ನು ನಿರ್ಧರಿಸಿಕೊಳ್ಳಲು ಜನಪದ ಕಲೆಗಳನ್ನು

ಕಂಡುಕೊಂಡಿವೆ. ಜನಪದ ಕಲೆಗಳು ಏಕಕಾಲಕ್ಕೆ ಹಲವು ಉದ್ದೇಶಗಳನ್ನು ಹೊಂದಿರುತ್ತವೆ. ಅಖಂಡವಾಗಿ ಜೀವನ ದರ್ಶನವನ್ನು ಬಿಂಬಿಸುವುದಕ್ಕೂ ಜನಪದ ಕಲೆಗಳು ಹುಟ್ಟಿಕೊಂಡಿವೆ. ಯಾವತ್ತೂ ಕೂಡ ಜನಪದ ಕಲೆಗಳು ಸ್ಥಾವರದ ಪ್ರಜ್ಞೆಯವಲ್ಲ. ಅವು ಲೌಖಿಕವಾಗಿದ್ದು ಕೊಂಡೇ ಅಲೌಖಿಕವಾದ ಸೆಳೆತಗಳನ್ನು ಆ ಬಗೆಯ ದಾರಿಗಳನ್ನು ಸೂಚಿಸುತ್ತ ಸಮಗ್ರವಾಗಿ ಒಂದು ಜೀವನ ಪದ್ಧತಿಯನ್ನು ಕಲೆಯ ನೆಲೆಯಿಂದಲೇ ಪುನರ್ ಸೃಷ್ಟಿಸುತ್ತಿರುತ್ತವೆ. ಜನಪದ ಕಲೆಗಳು ಕೇವಲ ಮನೋರಂಜನೆಗೇ ಸೀಮಿತವಾಗುವುದಿಲ್ಲ. ಬಹುರೂಪಿ ಅರ್ಥಗಳು ಸಾಂಸ್ಕೃತಿಕವಾಗಿ ಬೆಸೆದುಕೊಂಡಿರುತ್ತವೆ. ಗ್ರಾಮೀಣ ಲೋಕದ ಎಲ್ಲ ಸಂಕೀರ್ಣ ಸ್ವಭಾವವು ಅವುಗಳಲ್ಲಿ ಅಡಕವಾಗಿರುತ್ತದೆ.

ಜನಪದ ಕಲೆಗಳು ಮೊದಲು ರೂಪ ಪಡೆದದ್ದು ಆಚರಣೆಗಳ ಮೂಲಕ. ನಿಸರ್ಗದ ಅಗಾಧ ಶಕ್ತಿಯನ್ನು ತನ್ನದಾಗಿಸಿಕೊಳ್ಳುವ ಮಾನವನ ಅದಮ್ಯ ಆಶಯದಿಂದ ನಿಸರ್ಗದ ಆಚರಣೆ ಆರಂಭವಾಯಿತು. ನಿಸರ್ಗದ ಜೊತೆ ಸಂವಾದಿಸಲು ಹಾಗೆಯೇ ಮುಖಾಮುಖಿ ಯಾಗಲು ಆಚರಣೆಯನ್ನೆ ವಿಸ್ತರಿಸಿ; ಮನುಷ್ಯ ಅಭಿವ್ಯಕ್ತಿಗಾಗಿ ಹಲವು ಮಾಧ್ಯಮಗಳನ್ನು ಕಂಡುಕೊಂಡ. ಆದಿಮ ಕಾಲದ ಎಲ್ಲ ಆಚರಣೆಗಳು ಸೃಷ್ಟಿಯ ನಿಗೂಢವನ್ನು ಅರಿಯುವ ಮತ್ತು ಅದರ ಜೊತೆ ಸಾವಯವವಾಗಿ ಗುರುತಿಸಿಕೊಳ್ಳುವ ಹಂಬಲದಿಂದ ವಿಕಾಸವಾಗಿದೆ. ಆಚರಣೆಯ ಅಶಾಬ್ದಿಕ ಸ್ಥಿತಿಗೆ ಶಾಬ್ಧಿಕವಾದ ಭಾಷಿಕ ವಿನ್ಯಾಸವೂ ಮತ್ತು ಅಭಿನಯಾತ್ಮಕವಾದ ಆಂಗಿಕ ತೋರಿಕೆಯು ಅನಿವಾರ್ಯವಾಗಿತ್ತು. ಇದು ಕಲೆಯು ರೂಪುಗೊಳ್ಳುವ ಮಾಂತ್ರಿಕ ಸ್ಥಿತ. ಮಾಂತ್ರಿಕತೆಗೂ ಆಚರಣೆಗಳಿಗೂ ಆದಿಮ ಮನಸ್ಸಿಗೂ ಮತ್ತು ಅತೀತವಾದದ್ದನ್ನು ತನ್ನದನ್ನಾಗಿಸಿಕೊಳ್ಳಬೇಕೆಂಬ ಪ್ರಜ್ಞೆಯು ಗಾಢವಾಗಿ ಪ್ರಭಾವಿಸಿದ್ದರಿಂದ ಜನಪದ ಕಲೆಗಳು ಆಚರಣೆಯ ಕೇಂದ್ರವಾಗಿಯೇ ಕಾಣಿಸಿಕೊಂಡವು. ಆಚರಣೆಗಳನ್ನು ಜನಪದ ಕಲೆಗಳು ಸರಳಗೊಳಿಸಿ ಲೌಖಿಕದ ಪರಿಭಾಷೆಯಲ್ಲಿ ಅಭಿವ್ಯಕ್ತಿಸಿದ್ದರಿಂದ ಈ ಕಲೆಗಳಿಗೆ ಸಮಾಜಗಳು ಹೆಚ್ಚು ಹತ್ತಿರವಾದವು. ಹಾಗೆಯೇ ಅವುಗಳನ್ನು ಆರಾಧಿಸುವುದಕ್ಕೂ ಸಾಧ್ಯವಾಯಿತು. ಆಚರಣೆಯು ತನ್ನ ಮೊದಲ ಹಂತದಲ್ಲಿ ಹೆಚ್ಚು ಮಾಂತ್ರಿಕವಾಗಿದ್ದರೆ ಅದು ಕಲೆಯ ಸ್ವರೂಪಕ್ಕೆ ಬಂದಮೇಲೆ ಆರಾಧನೆಯ ಗುಣವನ್ನು ಮೈಗೂಡಿಸಿಕೊಳ್ಳುತ್ತದೆ. ಹೀಗಾಗಿಯೇ ಜಾನಪದ ಕಲೆಗಳು ಏಕಕಾಲಕ್ಕೆ ಆಚರಣೆ, ಆರಾಧನೆ, ಮಾಂತ್ರಿಕತೆ ಮತ್ತು ಧಾರ್ಮಿಕ ಸ್ವರೂಪವನ್ನು ಅಳವಡಿಸಿಕೊಳ್ಳುವುದು.

ಜನಪದ ಕಲೆಗಳು ಬಹುರೂಪ ದರ್ಶನವನ್ನು ಪ್ರದರ್ಶಿಸುತ್ತವೆ. ನಿಸರ್ಗದ ಪರಿಣಾಮವೆ ಇದಕ್ಕೆ ಪ್ರೇರಣೆ. ಅಸಂಖ್ಯಾತ ಅನುಭವಗಳಿಗೆ ಮೂಲನೆಲೆಯಾದ ನಿಸರ್ಗವು ಜನಪದ ಕಲೆಗಳಲ್ಲಿ ಸಾವಯುವ ಸಂವೇದನೆಯನ್ನು ಬಿತ್ತಿದೆ. ನಿಸರ್ಗರಾಧನೆ ಹೀಗಾಗಿಯೆ ಜನಪದ ಕಲೆಗಳಲ್ಲಿ ಗಾಢವಾಗಿ ಪ್ರತಿಬಿಂಬಿತವಾಗಿ ಪರಿಸರದ ಜೈವಿಕ ಸಂಬಂಧವನ್ನು ಅವು ತೋರುವುದು. ಜನಪದ ಕಲೆಗಳು ಬಹುಪಾಲು ಬೇಳೆ ಸಮೃದ್ಧಿಯ

ಫಲವಂತಿಕೆಯನ್ನು ಆಚರಿಸುತ್ತಿರುತ್ತವೆ. ಇದರಿಂದಾಗಿ ಕೃಷಿ ಸಂಸ್ಕೃತಿಯು ವಿಶೇಷವಾಗಿ ಅಂತಹ ಆಚರಣಾತ್ಮಕ ಕಲೆಗಳನ್ನು ರೂಢಿಸಿಕೊಂಡಿರುವುದು. ಬೇಟೆಯುಗದ ಅನುಭವಿಗಳು ಖಚಿತವಾದ ಸ್ವರೂಪ ಪಡೆದು ನೆಲೆನಿಲ್ಲುವ ಸ್ಥಿತಿ ತಲುಪಿದಾಗ ಜನಪದ ಕಲೆಗಳು ವಿಕಾಸವಾಗಿವೆ. ಕೃಷಿ ಸಂಸ್ಕೃತಿಯು ಬಹುರೂಪಿಯಾದ ಆಚರಣೆ ಮತ್ತು ದೈವಾರಾಧನೆಯನ್ನು ಭೂಮಿ ಮತ್ತು ಆಕಾಶಕ್ಕೆ ಸಂಬಂಧಿಸಿದಂತೆ ಕಂಡುಕೊಂಡ ಕೂಡಲೆ ವರ್ಣಮಯವಾದ ಶಿಸ್ತುಬದ್ಧವಾದ ಜನಪದ ಕಲೆಗಳಾಗಿ ಮಾರ್ಪಟ್ಟಿವೆ. ಫಲವಂತಿಕೆಯ ಕೃಷಿ ಆಚರಣೆಗಳು ಒಂದೊಂದು ಬಗೆಯಾದ ಪ್ರಾದೇಶಿಕವಾದ ಹಾಗೆಯೇ ಸಮುದಾಯ ನಿಷ್ಠವಾದ ದೈವಗಳನ್ನು ಅನುಸರಿಸಿಯೆ ಸಾಮಾಜಿಕ ಸಂಬಂಧಗಳನ್ನು ನಿರ್ಧರಿಸಿಕೊಂಡಿವೆ.

ಹೀಗಾಗಿಯೇ ಕರ್ನಾಟಕದ ಗ್ರಾಮೀಣ ದೈವಗಳ ಸುತ್ತ ಜನಪದ ಕಲೆಗಳು ಮಾತೃಪ್ರಧಾನ ಮೌಲ್ಯವನ್ನು ಧ್ವನಿಸುವ ಹಾಗೆಯೇ ಅಂತಹ ನಂಬಿಕೆಗಳು ಆರ್ಯದ್ರಾವೀಡ ಸಂಕಟದಿಂದ ರೂಪಾಂತರಗೊಳ್ಳುವ ಸ್ಥಿತಿಯನ್ನು ಕೂಡ ಜನಪದ ಕಲೆಗಳು ಧ್ವನಿಸುತ್ತವೆ. ಮಾರಿ ಕುಣಿತ, ಹೆಬ್ಬಾರೆ ಮೇಳದಂತಹ ಜನಪದ ಕಲೆಗಳು ವರ್ಣಸಂಕಟದ ಪರಿಣಾಮ ಗಳನ್ನು ಬಿಂಬಿಸುತ್ತವೆ. ಜನಪದ ಕಲೆಗಳೆಲ್ಲವು ಪ್ರಧಾನವಾಗಿ ಆಚರಣೆಗೆ ಸಂಬಂಧಿಸಿದವೇ ಆಗಿದೆ. ಮಾತೃ ಮತ್ತು ಪಿತೃ ಪ್ರಧಾನ ಸಂಸ್ಕೃತಿಗಳ ಸಂಘರ್ಷವನ್ನು ಆಕರ್ಷಣೆಯನ್ನು ಇವೆರಡರಿಂದಾದ ಒಪ್ಪಂದ ಮತ್ತು ವೈರುದ್ಯವನ್ನು ಜನಪದ ಕಲೆಗಳು ಸೂಕ್ಷ್ಮವಾಗಿ ಪ್ರತಿನಿಧಿಸುತ್ತವೆ. ಎಲ್ಲಮ್ಮನ ಪರಂಪರೆಗೆ ಒಳಪಟ್ಟು ಬಂದ ಜೋಗಪ್ಪ ನಾಗಲಿ, ಕಿನ್ನರಿ ಮೇಳವಾಗಲಿ ಚೌಡಿಕೆ ಮೇಳವಾಗಲಿ ಇಂತಹ ಸಂಬಂಧಗಳ ಬಿರುಕನ್ನು ತೋರುತ್ತ ತಮ್ಮ ದೈವಾಚರಣೆಯ ಸಂದಿಗ್ಧತೆಯನ್ನು ಪರೋಕ್ಷವಾಗಿ ತಿಳಿಸುತ್ತಿವೆ.

ಮಧ್ಯಕಾಲೀನ ಇತಿಹಾಸದಲ್ಲೇ ಬಹುಪಾಲು ಎಲ್ಲ ಜನಪದ ಕೃತಿಗಳು ಚಾರಿತ್ರಿಕವಾದ ರೂಪಾಂತರಗಳಿಗೆ ಒಳಗಾದದ್ದು. ಉಳಿಗಮಾನ್ಯ ವ್ಯವಸ್ಥೆ ಗ್ರಾಮೀಣ ಸಮಾಜವನ್ನು ತನ್ನ ಹಿಡಿತಕ್ಕೆ ತಂದುಕೊಂಡು ಮಾತೃಪ್ರಧಾನ ನಂಬಿಕೆಗಳನ್ನು ಬಿತ್ತುತ್ತಿದ್ದ ಎಲ್ಲ ಗ್ರಾಮ ದೈವಾಚರಣೆಗಳನ್ನು ಪ್ರಖರವಾದಿಪಟ್ಟದ ಅಧಿಕಾರ ವ್ಯವಸ್ಥೆಗೆ ತಕ್ಕಂತೆ ಮಾರ್ಪಡಿಸಿಕೊಳ್ಳಲು ಒತ್ತಡ ಹೇರಿದ್ದರಿಂದ ವೀರಗಾಸೆ ಮೇಳ, ಪಾಳೆಗಾರನ ನೃತ್ಯ, ಹುಲಿವೇಷ, ಪುರವಂತಿಕೆ ಮೇಳ ತರದ ಜನಪದ ಪ್ರದರ್ಶನ ಕಲೆಗಳು ಚಾಲ್ತಿಗೆ ಬಂದವು. ಅನೇಕ ಬಾರಿ ಪುರುಷ ದೈವಗಳು ಪ್ರತಿಪಾದನೆಗಾಗಿಯೇ ಜನಪದ ಕಲೆಗಳು ಹುಟ್ಟಿಕೊಂಡಿದ್ದಿವೆ. ಮೈಲಾರಲಿಂಗ, ಮಲೆಮಾದೇಶ್ವರ, ಮಂಟೇಸ್ವಾಮಿ, ಕುಮಾರ ರಾಮ, ಜುಂಜಪ್ಪ ಮುಂತಾದ ಸಾಂಸ್ಕೃತಿಕ ವೀರರು ಗ್ರಾಮೀಣ ಸಂಸ್ಕೃತಿಯನ್ನು ಪ್ರತಿನಿಧಿಸುತ್ತಿದ್ದರೂ ಇವರೆಲ್ಲ ಮಾತೃ ಆರಾಧನೆಯ ಕಲೆಗಳಿಗೆ ದೊಡ್ಡ ಪೆಟ್ಟನ್ನೇ ನೀಡಿದವರಾಗಿದ್ದಾರೆ. ಈ ಸಾಂಸ್ಕೃತಿಕ ವೀರರ ಸುತ್ತ ನಿರ್ಮಾಣಗೊಂಡ ಪವಾಡ ಕಲೆಗಳು, ಐತಿಹ್ಯ, ಪುರಾಣ, ಸಂಪ್ರದಾಯಗಳು, ಜಾತ್ರೆ, ಉತ್ಸವ, ಹಬ್ಬದ ಪರಿಸರಗಳೆಲ್ಲವು ಪುರುಷಾಧಿಪತ್ಯದ ಪ್ರತಿಪಾದನೆ ಮತ್ತು ಪ್ರಚಾರಕ್ಕೆ ಅನುವಾಗುವಂತೆ ಜನಪದ ಕಲೆಗಳನ್ನು ರೂಪಾಂತರಿಸಿಕೊಂಡಿವೆ. ಹೀಗಾಗಿಯೆ ವೀರಭದ್ರನ

ಕುಣಿತವು ಶೈವ ಮತದ ಮುಖವಾಣಿಯಾಗಿ ಕಾಣುವುದು. ವೈಷ್ಣವ ಹಾಗೂ ಶೈವ ಪಂಥಗಳ ಮೇಲಾಟವನ್ನು ಸೋಮನ ಕುಣತವು ತುಂಬಿ ಮಾರ್ಮಿಕವಾಗಿ ಅಭಿನಯಿಸುತ್ತದೆ. ಕರಿಯ ಸೋಮ ಮತ್ತು ಕೆಂಪು ಸೋಮಗಳೆರಡೂ ಆರ್ಯ ದ್ರಾವೀಡರ ಆಚರಣೆಗಳನ್ನು ಸಂಕೇತಿಸುತ್ತವೆ ಶೈವ ಹಾಗೂ ವೈಷ್ಣವ ಸಂಘರ್ಷಗಳನ್ನು ನಿರೂಪಿಸುತ್ತವೆ.

ಈ ಸಂಘರ್ಷದ ಸ್ಥಿತಿಯಲ್ಲೆ ಲಿಂಗ ತಾರತಮ್ಯದ ಮೌಲ್ಯಗಳು ಕೂಡ ಜನಪದ ಕಲೆಗಳಲ್ಲಿ ಸೆರಿಕೊಂಡವು. ಹರದೇಶಿ ನಾಗೇಶಿ ಮೇಳವು ಲಿಂಗ ಸಂಬಂಧಗಳ ಬಿರುಕನ್ನು ನಿರೂಪಿಸುತ್ತಲೆ ಅಂತಹ ಅಂತರವನ್ನು ಸರಿಪಡಿಸಿಕೊಳ್ಳುವ ರೀತಿಯಲ್ಲಿ ಮೇಳವನ್ನು ಬೆಳೆಸುತ್ತವೆ. ದೇವದಾಸಿ ಪದ್ಧತಿಯ ಅನೇಕ ಆಚರಣಾತ್ಮಕ ಕಲೆಗಳು ಲೈಂಗಿಕ ಶೋಷಣೆಯ ಉತ್ಕರ್ಷವನ್ನು ಬೆತ್ತಲಾಗಿಯೆ ನಿವೇದಿಸುತ್ತವೆ. ಸಾಮಾಜಿಕವಾಗಿ ತನ್ನನ್ನು ತಾನು ವ್ಯಕ್ತಪಡಿಸಿಕೊಳ್ಳಲು ಸಾಧ್ಯವಾಗದೇ ಹೋದಾಗ ಮಹಿಳೆಯರು ಮನೆಯ ಒಳಗೇ ಇಲ್ಲವೆ ವಟಾರದ ಆಸುಪಾಸಿನಲ್ಲೆ ಗೌರಿ ಪೂಜೆಯನ್ನು ಮಾಡಿಕೊಳ್ಳಬೇಕಾದ ಸ್ಥಿತಿಯೂ ಇದೆ. ಹಿಂದಿನ ಸಂದರ್ಭದಲ್ಲಿ ಸ್ತ್ರೀಯರು ಆಚರಿಸುತ್ತಿದ್ದ ಫಲವಂತಿಕೆಯ ಆಚರಣೆಗೆ ಮತ್ತು ಕಲೆಗಳು ಕಾಲಾನಂತರ ಕಿರಿದಾಗಿ ಗೌರಿ ಪೂಜೆಗೂ, ಕರಗದ ಪೂಜೆಗೂ ಬಂದು ನಿಂತವು. ಅದೇ ವೇಳೆಗೆ ಮಹಿಳಾ ಲೋಕವನ್ನು ಕ್ರೂರವಾಗಿ ಅನುಭೋಗವಾಗಿ ಬಳಸಿಕೊಳ್ಳುವಂತಹ ರೀತಿಗೆ ಅನುಕೂಲವಾಗುವಂತೆ ಜನಪದ ಕಲೆಗಳನ್ನು ಸೃಷ್ಟಿಸಿಕೊಳ್ಳಲಾಗಿದೆ. ಜನಪದ ಕಲೆಗಳು ಹೀಗಾಗಿಯೆ ಮಧ್ಯ ಯುಗದಲ್ಲಿ ಏಕಕಾಲಕ್ಕೆ ಪುರುಷಾಧಿಪತ್ಯವನ್ನು ವೈದಿಕ ಧರ್ಮಾವರಣವನ್ನು ಅಂತೆಯೆ ಉಳಿಗಮಾನ್ಯ ಪ್ರಭುತ್ವದ ಪರವಾದ ಮೌಲ್ಯಗಳನ್ನು ಒಪ್ಪಿಕೊಳ್ಳಬೇಕಾದದ್ದು.

ಕರ್ನಾಟಕದಲ್ಲಿ ನೂರಾರು ಬಗೆಯ ಜನಪದ ಕಲೆಗಳಿವೆ. ಕಡಲತೀರದ ಸಮುದಾಯ ಗಳು ಹೆಚ್ಚಾಗಿ ಭೂತಾರಾಧನೆ, ನಾಗಾರಾಧನೆ, ಕಡಲಾರಾಧನೆ ಮತ್ತು ಯಕ್ಷಗಾನ ಪ್ರದರ್ಶನವಾದ ಹಲವು ಕಲೆಗಳನ್ನು ಒಳಗೊಂಡಿದ್ದರೆ, ಬಯಲು ಸೀಮೆಯ ಸಮಾಜಗಳು ಮಾತೃದೈವಾರಾಧನೆ ಮತ್ತು ಪಿತೃದೈವಾರಾಧನೆಯ ಬಹುರೂಪಿ ಕಲೆಗಳನ್ನು ಕಾಣಬಹುದು. ಹೈದ್ರಾಬಾದ್ ಕರ್ನಾಟಕ ಸೀಮೆಯ ವಿಶೇಷವಾಗಿ ಪುರುಷ ಪರವಾದ ಅನುಭೋಗಿ ಸಂಗತಿಯಲ್ಲೇ ತನ್ನ ಮೂಲ ಧ್ವನಿಸುತ್ತಲೇ ಪುರುಷ ಪರವಾದ ಅನುಭೋಗಿ ಸಂಗತಿಯಲ್ಲೇ ತನ್ನ ಮೂಲ ಧ್ವನಿಯನ್ನು ತುಂಡರಿಸಿಕೊಳ್ಳುತ್ತದೆ. ವಚನ ಚಳುವಳಿಯ ಪರಿಣಾಮಕೂಡ ಈ ಭಾಗದ ಜನಪದ ಕಲೆಗಳ ಮೇಲೆ ದಟ್ಟವಾದ ಪ್ರಭಾವವನ್ನು ಉಂಟುಮಾಡಿದೆ. ಅತಿ ಮುಖ್ಯವಾದ ಸಂಗತಿ ಏನೆಂದರೆ, ಹೈದ್ರಾಬಾದ್ ಕರ್ನಾಟಕದ ಹಿಂದೂ ಮುಸ್ಲಿಂ ಸಮುದಾಯಗಳ ಸಾಮರಸ್ಯದ ಸಂಬಂಧಗಳು ಇಲ್ಲಿನ ಕಲೆಗಳಲ್ಲಿ ಸೇರಿಕೊಂಡಿದೆ. ಕಲ್ಗಿತುರಾ ಲಾವಣಿ ಸಂಪ್ರದಾಯವಾಗಲಿ, ಸವಾಲ್‌ಜವಾಬ್ ಪದಗಳ ಮೇಳವಾಗಲಿ, ತತ್ವಪದಗಳ ಮೇಳವಾಗಲಿ, ಇಲ್ಲವೆ ಮೊಹರಂ ಕುಣಿತ ಹಾಗೂ ಆಲಾವಿ ಹೆಜ್ಜೆಗಳು ಧಾರ್ಮಿಕವಾಗಿ ಭಿನ್ನದಾರಿಯಲ್ಲಿ ನಡೆದರೂ ಜನಪದ ಸಂಸ್ಕೃತಿಯ

ಭಾವದಿಂದ ತಮಗೆ ವಿಶಿಷ್ಟ ಎನಿಸುವ ಜನಪದ ಕಲೆಗಳನ್ನು ಈ ಭಾಗವು ರೂಢಿಸಿಕೊಂಡಿದೆ.

ಹಳೆ ಮೈಸೂರಿನ ಜನಪದ ಕಲೆಗಳು ವಿಶೇಷವಾಗಿ ಕೃಷಿ ಪ್ರಧಾನ ದೈವಾಂತರಣೆಗಳ ಮೂಲಕ ಸಾಂಸ್ಕೃತಿಕ ವೀರರ ಸುತ್ತ ಸಾಹಿತ್ಯಿಕವಾದ ಮಹಾ ಕಾವ್ಯಗಳನ್ನು ನಿರ್ಮಿಸಿಕೊಂಡು ವಕ್ಕಲು ಸಂಬಂಧಗಳನ್ನು ಪುನರ್ಭಿನಯಿಸುತ್ತವೆ. ಆದಿವಾಸಿ ಹಾಗೂ ಅಲೆಮಾರಿ ಜನಪದ ಕಲೆಗಳು ಈ ಬಗೆಯ ಕಲೆಗಳಿಗಿಂತ ಭಿನ್ನ. ಯರವರು, ಸಿದ್ದಿಯರು, ಜೇನು ಕುರುಬರು, ಕೊರಗರು, ಮೇರರು, ಕುಡುಬಿಯರು, ಹಾಲಕ್ಕಿಗರು, ಗೌಳಿಗರು, ಕಾಡುಗೊಲ್ಲರು, ಲಂಬಾಣಿಗರು, ಮುಂತಾದ ಅಂಚಿನ ಸಮುದಾಯದವರು ಆಚರಿಸುವ ಜನಪದ ಕಲೆಗಳಲ್ಲಿ ಆದಿಮ ಯುಗದ ನೆನಪುಗಳಿವೆ. ದಟ್ಟವಾದ ನಿಸರ್ಗಸಂಬಂಧದ ರೂಪಕಗಳಿವೆ. ನಾಡು ಮತ್ತು ಕಾಡಿನ ನಡುವಿನ ಸಂಬಂಧಗಳ ಸೇತುವೆಯೂ ಅವರ ಕತೆಗಳಲ್ಲಿ ಇದೆ. ನಿರ್ಧಿಷ್ಮವಾದ ಸಮುದಾಯದ ಚಹರೆ ಇವರ ಜನಪದ ಕಲೆಗಳಲ್ಲಿ ಪ್ರಮುಖವಾಗಿ ಕಾಣುತ್ತದೆ. ಕುಲಚಿನ್ಹೆ, ಮತ್ತು ಕುಲಾರಾಧೆ ಕೂಡ ಇವರ ಕಲೆಗಳಲ್ಲಿ ಬೆರೆತು ಹೋಗಿರುತ್ತದೆ.

ಗಡಿಭಾಗದ ಸೀಮೆಗಳಲ್ಲಿ ಕಂಡುಬರುವ ಜನಪದ ಕಲೆಗಳು ದ್ವಿಭಾಷಿಕ ಗುಣವನ್ನು ಅಳವಡಿಸಿಕೊಂಡಿರುತ್ತವೆ. ಕೋಲಾರ ಜಿಲ್ಲೆಯ ಬುರ್ರಕಥಾವು ಆಂಧ್ರಪ್ರದೇಶದ ಗುಣವನ್ನು ಬಿಂಬಿಸುತ್ತವೆ. ಅದು ದೊಂಬಿದಾಸರ ಪದವಾಗಿಯೂ ಮಾರ್ಪಾಟು ಮಾಡಿಕೊಳ್ಳುತ್ತದೆ. ಹೈದ್ರಾಬಾದ್ ಕರ್ನಾಟಕ ಸೀಮೆಯ ಅಲೆಮಾರಿಗಳ ಜನಪದ ಕಲೆಗಳು ಮರೆತು ಹೋಗಿರುವ ತಮ್ಮ ಮೂಲ ನೆಲೆಯನ್ನು ಹುಡುಕಿಕೊಳ್ಳುವಂತೆ ತನ್ನ ಭಗ್ನ ಸ್ಥಿತಿಯನ್ನು ನಿರೂಪಿಸುತ್ತವೆ. ಹಗಲು ವೇಷದವರು, ಹಕ್ಕಿಪಿಕ್ಕಿಯರು, ದೊಂಬರು ಇಂತಹ ಪಾಡನ್ನು ಸಾಂಕೇತಿಕವಾಗಿ ಆಡಿ ತೋರುವುದಿದೆ.

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ರೂಪ ವಿರೂಪ ಎರಡನ್ನು ಅರ್ಥಮಾಡಿಕೊಂಡು ಹೊಸ ಕಾಲದ ಸಾಂಸ್ಕೃತಿಕ ಲೋಕವನ್ನು ಪುನರ್‌ರಚಿಸಲು ಜನಪದ ಕಲೆಗಳನ್ನು ಕಡ್ಡಾಯವಾಗಿ ಗಮನಿಸಬೇಕು. ಅಭಿಜಾತ ಕಲೆಗಳೆಲ್ಲವು ಯಾವತ್ತೂ ಯಜಮಾನ್ಯವನ್ನು ಹೇರುವಂತವೆ. ಆದರೆ ಮೌಖಿಕ ಪರಂಪರೆಯನ್ನು ಕಳೆದುಕೊಂಡಿವೆ. ಬೃಹತ್ ಭಾರತದ ಅಖಂಡತೆಯನ್ನು ಅರಿಯುವುದು ಮತ್ತು ಸಂರಕ್ಷಿಸುವುದು ಎರಡೂ ಒಟ್ಟಿಗೇ ಆಗಬೇಕಾಗಿದೆ. ಜನಪದ ಕಲೆಗಳು ಆಧುನಿಕ ಜಗತ್ತಿನ ಮೋಹಕ ಅಪಾಯವೂ ಇದೆ. ಜನಪದ ಕಲೆಗಳ ಒಂದು ಗಾಢವಾದ ಸಂಬಂಧ ಇರುವುದೇ ಗ್ರಾಮೀಣ ಮಣ್ಣಿನಲ್ಲಿ. ಗ್ರಾಮ ಸಂಸ್ಕೃತಿಯ ತಳಪಾಯದಂತಿರುವ ಆಚರಣೆಗಳು ಮತ್ತವುಗಳ ಮೌಖಿಕ ಪರಂಪರೆ ನಿರ್ಮಿಸಿದ ಕಲೆಗಳು ಕಾಲದ ಅವಸ್ಥಾಂತರಗಳ ಮೂಲಕ ಕರಗುತ್ತಾ ಹೋದಂತೆಲ್ಲ ಸಮಷ್ಠಿ ಜೀವನ ದರ್ಶನವು ಅರ್ಥಾತ ಲೋಕದೃಷ್ಠಿಯು (World View) ಕರಗುತ್ತಾ ಹೋಗುತ್ತದೆ. ಇದು ಸಂಸ್ಕೃತಿಗಳು ಕರಗುತ್ತಾ ನಾಗರೀಕತೆಯ ತತ್‌ಕ್ಷಣದ ಅನುಭವಗಳು ಮಾತ್ರವೇ ಪರಮ ಸತ್ಯ ಎಂಬ ಸ್ಥಿತಿಗೆ ಕೊಂಡೊಯ್ಯುತ್ತದೆ. ಜನಪದ ಕಲೆಗಳು ನಮ್ಮ ನಾಡಿನ ಭಾಷೆ ಮತ್ತು

ಭಾವ ಲೋಕದ ಅಭಿವ್ಯಕ್ತಿಗಳು. ಇಂತಹ ಅಭಿವ್ಯಕ್ತಿಗಳು ತಲೆಮಾರುಗಳನ್ನು ಹೊತ್ತು ಬಂದಿದೆ. ಕನ್ನಡದ ಆಲೋಚನೆಗೆ ತಕ್ಕ ಬೌದ್ಧಿಕ ಶಕ್ತಿಯನ್ನು ಒಳನೋಟಗಳನ್ನು ನೀಡಬಲ್ಲ ಜನಪದ ಕಲೆಗಳು ಅಭಿಜಾತ ಕಲೆಯ ಮುಂದೆ ಹಾಗೂ ನಗರ ಕಲೆಗಳ ಠೇಂಕಾರದ ಮುಂದೆ ಸೋತವರಂತೆ ಮತ್ತು ನೊಂದವರ ಹತಾಶೆಯ ನೃತ್ಯದಂತೆ ಅಂತವರ ಪ್ರತಿಭಟನೆಯ ಕೃತಕ ರೂಪದಂತೆ ಇರುವುದು ವಿಷಾದವೆನಿಸುತ್ತದೆ. ಜನಪದ ಕಲೆಗಳ ಬಗ್ಗೆ ಸಾಂಸ್ಕೃತಿಕವಾದ ಎಚ್ಚರ ಇಂದು ವಿಶೇಷ ಜರೂರಾಗಬೇಕಾಗಿದೆ.

ಆಧುನಿಕತೆ ಮತ್ತು ಜನಪದ ಕಲೆಗಳು

ಆಧುನಿಕತೆಯು ಕಾಲದ ಒಂದು ಸ್ಥಿತಿ. ಬದಲಾವಣೆಯನ್ನು ರೂಪಿಸುವ ಆಧುನಿಕತೆಯು ನಾಗರೀಕತೆಗಳ ಮೂಲಕವೆ ಸಂಸ್ಕೃತಿಯ ಜೊತೆ ಮುಖಾ ಮುಖಿಯಾಗುತ್ತ ಬಂದಿದೆ. ಅನೇಕ ಭಾರಿ ಆಧುನಿಕತೆಯು ಗತಕಾಲದ ಭಾವನಾತ್ಮಕ ಸಂಬಂಧಗಳ ಮೇಲೆ ದಾಳಿ ಮಾಡುತ್ತಿರುತ್ತದೆ. ಜೊತೆಯಲ್ಲಿ ಪರಂಪರೆಯ ಎಷ್ಟೋ ಭಾವನೆಗಳನ್ನು ಅಳಿಸಿ ಅದರ ಮೇಲೆ ತನ್ನ ಕಾಲದ ಆಕೃತಿಯನ್ನು ಒತ್ತಾಯಿಸುತ್ತಲೆ ಇರುತ್ತದೆ. ಆಧುನಿಕತೆಯು ಸಂಸ್ಕೃತಿಯಂತೆ ವರ್ತಿಸಲಾರದು. ಸಂಸ್ಕೃತಿಯು ಅಂತರ್ಜಲದಂತೆ ಸಮುದಾಯಗಳ ಸಮಷ್ಠಿ ಮನಸ್ಸಿನ ಒಳಗೇ ಹರಿಯುತ್ತ ಅತ್ಯಂತ ಮಂದಗತಿಯಲ್ಲಿ ಸಾಗುತ್ತದೆ. ಆಧುನಿಕತೆ ಮಾತ್ರ ಸದಾ ವೇಗೋತ್ಕರ್ಷದಲ್ಲಿ ಸಮಾಜಗಳನ್ನು ಮುನ್ನಡೆಸಲು ಹಾತೊರೆಯುತ್ತಿರುತ್ತದೆ. ಹೀಗಾಗಿ ಸಂಸ್ಕೃತಿ ಮತ್ತು ಆಧುನಿಕತೆಗಳು ಹೊಂದಾಣಿಕೆ ಮಾಡಿಕೊಳ್ಳುವ ಕ್ರಮದಲ್ಲಿ ಪರಂಪರಾಗತವಾದ ಕಲೆಗಳು ಮೌಲ್ಯಗಳು ಜೀವನ ಪದ್ಧತಿಗಳು ಅನಿವಾರ್ಯವಾಗಿ ಕಾಲದ ಮರೆಗೆ ಸರಿದು ಬಿಡುತ್ತವೆ.

ಹೀಗೆ ಹಿಂದಕ್ಕೆ ಸರಿಯುವ ಹಂತದಲ್ಲಿ ಯಾವುದನ್ನು ಕಳೆದು ಕೊಳ್ಳಬೇಕು, ಎಷ್ಟನ್ನು ಉಳಿಸಿಕೊಳ್ಳಬೇಕು ಹೊಸದನ್ನು ಹೇಗೆ ಮಾರ್ಪಡಿಸಿಕೊಳ್ಳಬೇಕು ಎಂಬ ಆಯ್ಕೆ ಮತ್ತು ತೀರ್ಮಾನ ಸ್ವತಃ ಸಂಸ್ಕೃತಿಗಳಿಗಾಗಲಿ, ಆಯಾ ಸಮುದಾಯಗಳಿಗಾಗಲಿ ಇರುವುದಿಲ್ಲ. ಆಧುನಿಕತೆಯ ರಾಜಕಾರಣ ಮತ್ತು ಅದರ ತಂತ್ರಜ್ಞಾನವು ಮಾತ್ರವೆ ಅಂತಹ ಅಧಿಕಾರವನ್ನು ತನ್ನಲ್ಲಿ ಕೇಂದ್ರೀಕರಿಸಿಕೊಂಡು ತನಗೆ ಬೇಕಾದ ರೀತಿಯಲ್ಲಿ ಸಂಸ್ಕೃತಿಯ ವ್ಯಕ್ತ ರೂಪಗಳಾದ ಜನಪದ ಕಲೆಗಳನ್ನು ಬಳಸಿ ನಿಯಂತ್ರಿಸುತ್ತದೆ. ಇದರಿಂದ ಜನಪದ ಕಲೆಗಳು ಕೇವಲ ಬಳಕೆಗೆ ಮಾತ್ರ ಸಂಬಂಧಪಟ್ಟ ವಿಷಯಗಳಾಗುತ್ತವೆಯೆ ಹೊರತು ಅವುಗಳ ಸಾಂಸ್ಕೃತಿಕ ಅಸ್ಮಿತೆಯಾಗಲಿ ಅವುಗಳ ಸಮುದಾಯಗಳ ವಾಸ್ತವ ಬದುಕಿನ ನರಕವಾಗಲಿ ಪರಿಗಣನೆಗೆ ಬರುವುದೇ ಇಲ್ಲ. ಎಷ್ಟಾದರೂ ಆಧುನಿಕತೆ ಎಂಬ ವ್ಯವಸ್ಥೆಯು ಕಠಿಣವಾದ ಏಕರೂಪ ತೀರ್ಮಾನಗಳಿಗೆ ಬದ್ಧವಾಗಿರುವಂತದು. ಜನಪದ ಕಲೆಗಳು ಹಳೆಯ ಜಗತ್ತನ್ನು ಆರಾಧಿಸುತ್ತವೆ. ವರ್ತಮಾನದ ನರಕವನ್ನು ರಮ್ಯವಾದ ಸಾಂಸ್ಕೃತಿಕ ವಿಶ್ವಾಸದಲ್ಲಿ ಅಭಿನಯಿಸುತ್ತಿರುತ್ತವೆ. ಆಧುನಿಕತೆಗೆ ಈ ತೆರನ ದಾರಿಯ

ಸೂಕ್ಷ್ಮತೆಯೆ ಬೇಕಿರುವುದಿಲ್ಲ. ವೇಗವನ್ನು ಸದಾ ವಿಸ್ತರಿಸಲು ತೊಡಗುವ ಆಧುನಿಕತೆಗೆ ಹೀಗಾಗಿ ಎತ್ತಿನ ಬಂಡಿಯ ಪದಗಳ ಅಗತ್ಯವಾಗಲಿ, ದೋಣಿ ಪದಗಳ ತನ್ಮಯತೆಯಾಗಲಿ, ತಿಂಗಳುಮಾಮನ ಪದಗಳ ಬೆಳದಿಂಗಳ ಸಿರಿಯ ಮೇಳವಾಗಲಿ ಆಪ್ತವಾದ ಸಂವೇದನೆ ಯಾಗುವುದಿಲ್ಲ. ಆಧುನಿಕ ನಗರ ಸಂಸ್ಕೃತಿಗಳು ಏಕಾಕಾರದಲ್ಲಿ ಮೋಜಿನ ಅಮಲಿನಲ್ಲಿ ಚೌಕಟ್ಟಿನ ಮರೆಯಲ್ಲಿ ಮೋಲುಪ್ತ ಧೋರಣೆಯಲ್ಲಿ ನೈಟ್‌ಕ್ಲಬ್‌ಗಳಲ್ಲಿ ಮಾತ್ರವೇ ವಿಹರಿಸುತ್ತವೆ. ಅವಕ್ಕೆ ಮಂಟೇಸ್ವಾಮಿ, ಮಾದೇಶ್ವರ ಮಹಾಕಾವ್ಯ ಪರಂಪರೆಯ ದಿವ್ಯ ಮೋಜು ಸಾಧ್ಯವಾಗಲಾರದು. ವ್ಯಕ್ತಿನಿಷ್ಠವಾದ ನಗರ ಸಂಸ್ಕೃತಿಗಳು ಸಮಷ್ಟಿಯಾದ ಜನಪದ ಕಲೆಗಳನ್ನು ಕೇವಲ ಮನೋರಂಜನೆಗೆ ಮಾತ್ರ ತಾತ್ಕಾಲಿಕವಾಗಿ ಬಳಸಿ ಬಿಸಾಡಬಲ್ಲಷ್ಟು ಧಾರ್ಷ್ಟ್ಯವನ್ನು ಹೊಂದಿರುತ್ತವೆ. ಇಲ್ಲಿಂದಲೆ ಯಾವುದೆ ಸಂಸ್ಕೃತಿಯ ತಾರತಮ್ಯಗಳು ಆಧುನಿಕತೆಯ ಅಧಿಕಾರದ ಮೂಲಕ ಬಲಗೊಳ್ಳುವುದು.

ಆಧುನಿಕತೆಯ ಜೊತೆಗೆ ಜನಪದ ಕಲೆಗಳು ಪೈಪೋಟಿ ಮಾಡಲಾರವು. ನಿಜವಾದ ಜನಪದ ಕಲೆ ಮತ್ತು ಸಂಸ್ಕೃತಿಗಳು ಎಂದೂ ಪೈಪೋಟಿಗೆ ಇಳಿಯುವುದಿಲ್ಲ. ಜನಪದ ಕಲೆಗಳು ಅಳಿವಿನ ಅಂಚಿಗೆ ಬಂದು ನಿಲ್ಲಲು ಆಧುನಿಕತೆ ಒಂದೇ ಕಾರಣವಾಗಿರಲಾರದು. ಆಧುನಿಕತೆಯ ಆಯ್ಕೆಗಳು ಬಹಳ ಕ್ರೂರವಾಗಿರುತ್ತವೆ. ಬಲವಿದ್ದದ್ದು ಮಾತ್ರ ಬದುಕುಳಿಯಬೇಕು ಎಂಬ ಧೋರಣೆ ಆಧುನಿಕ ಸಮಾಜಗಳದ್ದು. ಯಾವುದಕ್ಕೆ ಮಾರುಕಟ್ಟೆಯ ಆಕರ್ಷಣೆ ಇರುತ್ತದೋ ಅಂತದನ್ನು ಮುಖ್ಯವೆಂದು ಆಧುನಿಕತೆಯು ಆಯ್ಕೆ ಮಾಡಿಕೊಂಡು ಉಳಿದವನ್ನು ನಿರಾಕರಿಸುತ್ತದೆ. ಹಾಗೆ ಆಯ್ಕೆ ಮಾಡಿಕೊಂಡಾಗಲೂ ಆಧುನಿಕತೆ ತನ್ನ ಗತಕಾಲ ಸಂಸ್ಕೃತಿ ಹಾಗೂ ಅದರ ಜನಪದ ಕಲೆಗಳನ್ನೆ ಸರಕನ್ನಾಗಿ ಮಾರ್ಪಡಿಸಿ "ಬೆಂಗಳೂರು ಹಬ್ಬ"ದಂತಹ ತೋರಿಕೆಯಲ್ಲಿ ಆಚರಿಸುತ್ತದೆ. ಒಂದು ಕಲೆಯೆ ಬಂಡವಾಳ ಆಗಿ ಅದು ಯಾರದೊ ಉದ್ದಿಮೆಯ ಪ್ರಚಾರಕ್ಕೆ ಬಳಕೆಯಾಗುವುದು ಸಾಂಸ್ಕೃತಿಕ ಅಪರಾಧ. ಹೀಗೆ ಜನಪದ ಕಲೆಗಳು ಮಾತ್ರ ಬಳಕೆ ಆಗಿ ಆ ಕಲೆಗಳ ಸಮುದಾಯಗಳು, ಹಳ್ಳಿಗಳು ಮಾತ್ರ ಅದೇ ನರಕದಲ್ಲಿ ಉಳಿದಿರುತ್ತವೆ. ಇಂತಲ್ಲಿ ಜನಪದ ಕಲೆಗಳು ತಮ್ಮ ಮೂಲ ಸಾಂಸ್ಕೃತಿಕ ಆಶಯ ಮತ್ತು ಆಚರಣೆಯ ಸಂದರ್ಭಗಳನ್ನೆ ಕಳೆದುಕೊಂಡು ಕೇವಲ ಮ್ಯುಸಿಯಂ ಸಂಗತಿಗಳಾಗುತ್ತವೆ.

ಹಳ್ಳಿಗಳು ಕೂಡ ಆಧುನಿಕತೆಯ ರೂಪ ವಿರೂಪಕ್ಕೆ ಸಿಲುಕಿ ತಮ್ಮ ಪೂರ್ವ ರೂಪಗಳನ್ನು ಅನಿವಾರ್ಯವಾಗಿ ಕಳೆದುಕೊಳ್ಳಬೇಕಾದ ಇಕ್ಕಟ್ಟಿನಲ್ಲಿವೆ. ಅವರೇ ಕಟ್ಟಿಕೊಂಡು ಬೆಳೆಸಿದ ಜನಪದ ಕಲೆಗಳು ಸ್ವತಃ ಅವರೇ ಮರೆಯ ಬೇಕಾದಂತಹ ಸಾಮಾಜಿಕ, ಕೌಟುಂಬಿಕ, ರಾಜಕೀಯ ವಾತಾವರಣವು ಕ್ರೂರವಾಗಿ ಸೃಷ್ಟಿಯಾಗಿದೆ. ಜನಪದ ಕಲೆಗಳ ಕೇಂದ್ರ ಸಂವಿಧಾನದಂತಿದ್ದ ದೈವಾಚರಣೆ, ನಿಸರ್ಗಾಚರಣೆ ಕೃಷಿ ಆಚರಣೆಗಳೆ ಇವತ್ತು ಜನಪದರಿಗೆ ಹೊರೆಯಾಗಿಬಿಟ್ಟಿವೆ. ಯಾವುದನ್ನು ಅತ್ಯಂತಿಕ ಅಭಿವ್ಯಕ್ತಿ ಎಂದು ತನ್ಮಯತೆಯಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತಿತ್ತೋ ಅಂತಹ

ಸಾಂಸ್ಕೃತಿಕ ಸಂದರ್ಭವೇ ಇಲ್ಲವಾಗುತ್ತಿದೆ. ನಿಜವಾಗಿಯೂ ಅತ್ಯಂತ ಅಪಾಯಕಾರಿಯಾದ ಸಂಗತಿ ಯಾವುದೆಂದರೆ ಸಂಸ್ಕೃತಿಯ ಭಾವನಾತ್ಮಕ ಮಾನವ ಸಂಬಂಧಗಳ ಅಳಿವಿನ ಅಂಚಿನಲ್ಲಿರುವುದು. ಒಂದು ಸಂಸ್ಕೃತಿ ಹೀಗೆ ಅಳಿವಿನ ಅಂಚಿಗೆ ತಲುಪುವುದು ಎಂದರೆ ಒಂದು ಭಾಷೆಯೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ ಎಂಬುದನ್ನು ಧ್ವನಿಸುತ್ತಿದೆ. ಹಳ್ಳಿಯಲ್ಲಿ ಬೇರುಬಿಟ್ಟಿರುವ ಬಡತನದ ಕಾರಣವಾಗಿ ಹೊಸ ಪೀಳಿಗೆಯ ಜನಪದಗಳು ದಿಕ್ಕೆಟ್ಟು ನಗರಗಳಿಗೆ ವಲಸೆ ಬಂದು ಹೊಟ್ಟೆಪಾಡಿಗೆ ತಮ್ಮನ್ನು ತಾವೆ ಮಾರಿಕೊಂಡು ಕೊಳೆಗೇರಿಗಳಲ್ಲಿ ಸೇರಿದ ಮೇಲೆ ಅವರ ಪೂರ್ವಿಕರ ಜನಪದ ಕಲೆಗಳು ಗಾಢವಾಗಿ ಕಾಡಲಾರವು. ದಿನಕಳೆದಂತೆ ಅನೇಕ ಕಲೆಗಳ ವ್ಯಾಪ್ತಿಯಿಂದ ಆಚೆಗೆ ಸರಿದು ಆಧುನಿಕ ಜಗತ್ತಿನ ಕರ್ತೃ ಸಿನಿಮಾಗಳಲ್ಲಿ ಕಳೆದು ಹೋಗುತ್ತಾರೆ.

ಇಂತಲ್ಲಿ ಸಮೂಹ ಮಾಧ್ಯಮಗಳು ಜನಪದ ಕಲೆಗಳನ್ನು ಮಾರುಕಟ್ಟೆಯ ಪರಿಭಾಷೆಯಲ್ಲೆ ತೋರಿಸಿಬಿಡುತ್ತವೆ. ಆಧುನಿಕತೆಯ ಮಾಯಾಜಾಲ ಕೂಡ ಅದರ ಮಾಹಿತಿಯ ಹೆದ್ದಾರಿಗಳು ಕೂಡ ಖಾಸಗಿಯಾದ ಮನೋಧರ್ಮದಲ್ಲಿ ಇಂತಹ ಕಲೆಗಳನ್ನು ತಮ್ಮ ಆಸ್ತಿಯನ್ನಾಗಿ ಮಾಡಿಕೊಳ್ಳುತ್ತವೆ. ಜನಪದ ಕಲೆಗಳು ಕೇವಲ ಅಲಂಕಾರಿಕವಾಗಿ ಕೃತಕ ಸಂದರ್ಭಗಳಲ್ಲಿ ಯಾವುದೆ ಸಾಂಸ್ಕೃತಿಕ ಅಸ್ಮಿತೆಯಿಲ್ಲದೆ ನಗರಗಳಲ್ಲಿ ಕಾಣಿಸಿಕೊಳ್ಳುವುದು ಆ ಕಲೆಗಳನ್ನು ಉಳಿಸುವ ಧೋರಣೆಯಿಂದಲ್ಲ. ರಾಜಕೀಯ ಉತ್ಸವಗಳಲ್ಲಿ, ಸರ್ಕಾರಿ ಹಬ್ಬಗಳಲ್ಲಿ ಮತೀಯ ಪ್ರದರ್ಶನಗಳಲ್ಲಿ ಕಾಣುವ ಜನಪದ ಕಲೆಗಳು ತಮ್ಮದಲ್ಲದ ಉದ್ದೇಶಗಳಿಗಾಗಿ ಬಳಕೆಯಾಗುತ್ತಿರುತ್ತವೆ. ಮೂಲತಃ ಸಂಸ್ಕೃತಿಯ ಸಮಷ್ಠಿ ಪ್ರಜ್ಞೆಯೇ ಇಂತಹ ಕೃತಕ ರಾಜಕೀಯ ಉತ್ಸವಗಳಲ್ಲಿ ಗೈರುಹಾಜರಾಗಿರುತ್ತದೆ. ಇದು ಆ ಒಂದು ಸಮುದಾಯದ ಜನಪದ ಕಲೆಗಳನ್ನೆ ಅಪವ್ಯಾಖ್ಯಾನಕ್ಕೆ ಗುರಿಪಡಿಸಿ ಆ ಕೃತಿಗಳ ಜೊತೆಗೆ ಜನಪದರಿಗೆ ಇದ್ದ ಸಾಂಸ್ಕೃತಿಕವಾದ ಸಾವಯವ ಸಂಬಂಧವನ್ನೆ ತುಂಡುಮಾಡಿದಂತಾಗುತ್ತದೆ. ಅಲ್ಲದೆ ಎಲ್ಲ ಆಚರಣೆಗಳ ಭಾವನಾತ್ಮಕವಾದ ಸಂಬಂಧಗಳು ಸಡಿಲಗೊಂಡು ಸಾಮಾಜಿಕವಾದ ಬಂಧುತ್ವವೆ ಒಡೆದುಹೋಗುತ್ತದೆ.

ಇದಲ್ಲದೆ ಪರೋಕ್ಷವಾಗಿ ಒಂದೊಂದು ಜನಪದ ಕಲೆಗೂ ಒಂದಿಷ್ಟು ಜಾತಿಯ ಚಹರೆಯು ಸಂಸ್ಕೃತಿಯ ಹೆಸರಿನಲ್ಲೆ ಅಂಟಿಕೊಂಡಿರುತ್ತದೆ. ಎಚ್ಚರಗೊಳ್ಳುವ ಉತ್ಸಾಹ ಕೂಡ ಒಂದೇ ಬಾರಿಗೆ ತಮ್ಮ ಮೂಲದ ಕಲೆಗಳನ್ನು ನಿರಾಕರಿಸಿ ಆಧುನಿಕತೆಯ ಜೊತೆ ಪಯಣಿಸುವಂತೆ ಪ್ರೇರೇಪಿಸುತ್ತದೆ. ಜನಪದ ಕಲೆಗಳು ಇಂತಹ ಸಂದರ್ಭದಲ್ಲಿ ಯಾರೋ ಕೆಲವೇ ಆಸಕ್ತರ ವೃತ್ತಿ ತಂಡವಾಗಿ ಅಂತಹ ವೃತ್ತಿ ತಂಡವು ಆಧುನಿಕತೆಯ ಲಾಭನಷ್ಟದ ವ್ಯಾಪಾರದ ಒಪ್ಪಂದಗಳಲ್ಲಿ ತಮ್ಮ ಕಲೆಗಳನ್ನು ಬಿಕರಿಮಾಡಬೇಕಾಗುತ್ತದೆ. ಕಂಸಾಳೆ, ಡೊಳ್ಳು ಕುಣಿತ, ಭೂತಾಕೋಲ, ವೀರಗಾಸೆ ಕಲೆಗಳು ಇವತ್ತಿನ ಸಂದರ್ಭಗಳಿಗೆ ವಿಶೇಷವಾಗಿ ಬಳಕೆ ಆಗುತ್ತಿರುವುದು ಸಕಾರಾತ್ಮಕ ಕ್ರಮಗಳಿಂದಲ್ಲ.

ಜನಪದ ಕಲೆಗಳು ಅನಿವಾರ್ಯವಾದ ಸ್ಪರ್ಧೆಗಳಿದು ವೃತ್ತಿ ಸ್ವಭಾವವನ್ನು ಅನುಸರಿಸ ಬೇಕು ಎಂಬ ಒತ್ತಾಯವನ್ನು ಆಧುನಿಕತೆಯು ನಿರೀಕ್ಷಿಸುತ್ತದೆ. ಇದು ಕಲೆಗಳನ್ನು ಸಮಕಾಲೀನಗೊಳಿಸಲು ಸಹಕಾರಿಯಾದರೂ ಹಿಡಿಯಾಗಿ ಎಲ್ಲ ಜನಪದ ಕಲೆಗಳನ್ನು ಹೀಗೆ ವೃತ್ತಿ ರಂಗಭೂಮಿಗೆ ಅನುವಾಗುವಂತೆ ಮಾರ್ಪಡಿಸಬಹುದಾದರೂ ಆ ಇಡೀ ಸಮುದಾಯವನ್ನು ಕಿಳ್ಳೇಕ್ಯಾತರು ನಗರ ಪರಂಪರೆಯ ಕ್ರಮಕ್ಕೆ ಅಳವಡಿಸಲು ಅನೇಕ ಸಮಸ್ಯಗಳಿವೆ. ಸಮುದಾಯಗಳ ಸಮಷ್ಠಿ ನಂಬಿಕೆಯನ್ನು ಬದಲಿಸುವುದು ಬಹಳ ಕಠಿಣ. ಸಂಸ್ಕೃತಿಗಳು ಯಾವತ್ತೂ ವೃತ್ತಿಯನ್ನು ಅಂತಿಮ ಎಂದು ಭಾವಿಸಿಯೇ ಇಲ್ಲ. ಒಂದೊಂದು ವೃತ್ತಿ ಸಮುದಾಯಗಳು ರೂಪಿಸಿಕೊಂಡ ಕಲೆಗಳು ಅವರವರ ಚಹರೆಯನ್ನು ಧ್ವನಿಸುತ್ತವೆ ದೈವಿಕವಾದ ಆವರಣವನ್ನು ನಿರ್ಮಿಸಿಕೊಂಡಿರುತ್ತವೆ. ಸಮುದಾಯಗಳಿಗೆ ಒಂದು ವೃತ್ತಿ ಇತ್ತಾದರೂ ಆಧುನಿಕ ಜಗತ್ತು ಅಂತಹ ವೃತ್ತಿ ಸಂಬಂಧಗಳನ್ನು ಭಗ್ನಗೊಳಿಸಿರುವುದರಿಂದ ಜನಪದ ಕಲೆಗಳಿಗೆ ಅಸ್ತಿತ್ವವೇ ಇಲ್ಲದಂತಾಯಿತು. ಕರಕುಶಲ ಸಮುದಾಯಗಳ ಕಲೆ ಕೂಡ ಇದರಿಂದ ಮರೆವ ರೀತಿಗೆ ಒಳಗಾದದ್ದಿದೆ. ಕಲೆಯನ್ನು ವೃತ್ತಿಯಾಗಿಸಿ ಬೆಳೆಸುವಾಗ ತುಂಬ ಎಚ್ಚರವಿರಬೇಕು.

ಶಿವರಾಮ ಕಾರಂತರು ಯಕ್ಷಗಾನವನ್ನು ಬಹುದೊಡ್ಡ ರಂಗಸಾಧ್ಯತೆಯಾಗಿ ಪರಿಸ್ಕರಿಸಿ ಬೆಳೆಸಿದರು. ದಕ್ಷಿಣ ಕನ್ನಡದ ಸಮುದಾಯಗಳ ಒಟ್ಟು ಆಶಯಕೂಡ ಅದೇ ರೀತಿ ಸ್ಪಂದಿಸಿತ್ತು. ಹೀಗಾಗಿ ಯಕ್ಷಗಾನ ಕಲೆಯು ಅಭಿಜಾತ ಕಲೆಯ ರೀತಿಯಲ್ಲೆ ಬೆಳೆದುಬಿಟ್ಟಿತು. ಇಂತಹ ರೀತಿಗೆ ಒಂದು ಕಲೆಯನ್ನು ಅಳವಡಿಸುವಾಗಲೂ ನಮ್ಮ ದೇಶದಲ್ಲಿ ಬಹಳ ಜಾಗೃತವಾಗಿರುವ ಜಾತಿ, ಪ್ರದೇಶ, ಲಿಂಗ, ಧರ್ಮ, ಭಾಷೆಯ ಭಿನ್ನತೆಗಳೆಲ್ಲವೂ ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತವೆ. ಇದರಿಂದಲೆ ಜನಪದ ಕಲೆಗಳನ್ನು ಸ್ವೀಕರಿಸುವ, ಬೆಳೆಸುವ, ವಿಸ್ತರಿಸುವ ಅನೇಕ ಹಂತಗಳಲ್ಲಿ ಬಹುಬಗೆಯ ತಾರತಮ್ಯಗಳು ನುಸುಳುವುದು. ಬರಪೀಡಿತವಾದ ಪ್ರದೇಶಗಳ ಜಾನಪದ ಕಲೆಗಳಂತು ತಂತಾನೆ ಕರಗಿ ಹೋಗುತ್ತವೆ. ಇನ್ನು ಅಲೆಮಾರಿಗಳ ದೈನಂದಿನ ಪಾಡು ಅವರನ್ನು ಕಲೆಗಳ ಲೋಕದ ಭಾವನಾತ್ಮಕ ಸಂಬಂಧವನ್ನೆ ಕಡಿದು ಹಾಕುತ್ತದೆ. ಹಳ್ಳಿಗಳಲ್ಲಿ ಕಾಲ ಬದಲಾದಂತೆ, ನಗರಗಳ ಕಡೆಗೆ ಯುವ ಪೀಳಿಗೆ ಹತ್ತಾರು ಕಾರಣಗಳಿಂದ ವಲಸೆ ಬಂದಂತೆ ಹಳೆಯ ಹಳ್ಳಿಗಳ ರೂಪವೆ ಬದಲಾಗಿ ಹಳ್ಳಿಗಳಿಗೆ ಬೇಕಿದ್ದ ಸಾಂಸ್ಕೃತಿಕ ಅಭಿವ್ಯಕ್ತಿಯ ಅವಕಾಶವನ್ನು ತಾನೇ ಆವರಿಸಿಕೊಂಡುಬಿಡುತ್ತದೆ.

ಆಧುನಿಕತೆಯ ಬಹುರೂಪಿ ಆಯ್ಕೆಗಳನ್ನು ಸೃಷ್ಠಿಸುವುದಿಲ್ಲ. ಹೀಗಾಗಿ ಜನಪದ ಕಲೆಗಳ ಬಹುರೂಪ ಕೂಡ ಮೂಲೆಗುಂಪಾಗಿ ಅದರಲ್ಲಿ ಕೆಲವು ಮಾತ್ರವೆ ಆಧುನಿಕತೆಯಲ್ಲಿ ಅವಕಾಶವನ್ನು ಗಳಿಸುತ್ತದೆ. ಮಹಾನಗರಗಳು ತಮ್ಮ ಅಲಂಕಾರಕ್ಕಾಗಿ ಮಾತ್ರವೆ ಜನಪದ ಕಲೆಗಳನ್ನು ಒಳಸಿಕೊಂಡು ಮರೆಯುತ್ತವೆ. ಆಧುನಿಕತೆಯ ಬಹುದೊಡ್ಡ ಮಿತಿ ಎಂದರೆ ಅಗತ್ಯ ಇಲ್ಲ ಎನಿಸಿದ್ದನ್ನೆಲ್ಲ ಮರೆಯುವುದು ಮತ್ತು ಅಗತ್ಯ ಇದೆ

ಎಂಬುದನ್ನೆಲ್ಲ ಮಾರುಕಟ್ಟೆಯ ನೀತಿಗೆ ಅಳವಡಿಸುವುದು. ಈ ಸಂಕೀರ್ಣ ಸವಾಲಿನಲ್ಲಿ ಜನಪದ ಸಮಾಜಗಳು ದಾರಿತಪ್ಪುತ್ತವೆ ಮತ್ತು ಅಧಿಕಾರ ರಾಜಕರಣದ ಜೊತೆ ಶಾಮೀಲಾಗುತ್ತವೆ. ಇಂತಹ ಸಂದರ್ಭದಲ್ಲಿ ಸಂಸ್ಕೃತಿಯ ಪರಿಸರವೆ ನಾಶವಾಗುತ್ತದೆ. ಜೀವ ಜಾಲದ ಹಸಿರು ಪರಿಸರದಷ್ಟೇ ಮುಖ್ಯವಾದದ್ದು, ಸಾಂಸ್ಕೃತಿಕ ಪರಿಸರ. ನಮ್ಮ ದೇಶದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಪರಿಸರವು ಹದಗೆಟ್ಟಿರುವಷ್ಟು ಮತ್ತೆಲ್ಲೂ ಹಾಳಾಗಿಲ್ಲವೆನೋ. ಸಂಸ್ಕೃತಿಯ ಪರಿಸರಕ್ಕೂ ಜನಪದ ಕಲೆಗಳ ಪರಿಸರಕ್ಕೂ ಹಾಗೂ ಇವೆರಡರ ಅವಿನಾಭಾವ ಸಂಬಂಧದ ಕೊಂಡಿಯಂತಿರುವ ನಿಸರ್ಗದ ಪರಿಸರಕ್ಕು ಇವತ್ತು ಸಂಬಂಧಗಳು ತುಂಡಾಗುತ್ತವೆ. ಈ ಸಂಬಂಧಗಳು ಪಡೆದು ಹೋದರೆ ಆಧುನಿಕತೆಯ ಯಾವ ಮಹಾಶೋಧಗಳೂ ಕಲ್ಯಾಣ ಕಾರ್ಯಕ್ರಮಗಳು ಉಪಯೋಗಕ್ಕೆ ಬರುವುದಿಲ್ಲ. ನಿಸರ್ಗ ಮತ್ತು ಸಂಸ್ಕೃತಿಯ ಜೀವಸತ್ವವನ್ನು ಹೀರಿಕೊಂಡೇ ಬೆಳೆಯುವ ಆಧುನಿಕತೆಯು ತನ್ನ ಮೂಲದ ವಿರುದ್ಧವಾಗಿಯೇ ವರ್ತಿಸುವ ದುರಂತವಿದೆ.

ಆಧುನಿಕತೆಗೂ ಜನಪದ ಕಲೆಗಳ ಸಾಂಸ್ಕೃತಿಕ ಪರಂಪರೆಗೂ ಸೇತುವೆ ನಿರ್ಮಾಣವಾಗದ ಹೊರತು ಭವಿಷ್ಯವನ್ನು ಆಲೋಚಿಸಲಾಗದು. ಪಶ್ಚಿಮದ ಅನುಕರಣೆ ಅಖಂಡವಾಗಿ ಇಡೀ ಭಾರತದ ಹಳ್ಳಿಗಳೇ ಇವತ್ತು ದಿಕ್ಕುತಪ್ಪಿ ದೇಶದ ಒಳಗ ಹೊರಗಿನ ಎರಡೂ ಬಗೆಯ ದಾಳಿಗಳಿಂದ ತಮ್ಮ ಪೂರ್ವಿಕರ ಸಾಂಸ್ಕೃತಿಕ ಪರಿಸರದಿಂದಲೆ ದೂರ ಹೋಗಬೇಕಾದ ಸ್ಥಿತಿ ಉಂಟಾಗುತ್ತಲೆ ಇದೆ. ಆಧುನಿಕ ಭಾರತದ ರಾಜಕರಣವು ಹಳ್ಳಿಗಳ ಸಂಸ್ಕೃತಿಯನ್ನು ಬಹಳ ತಪ್ಪಾಗಿ ಭಾವಿಸಿ ದುರುಪಯೋಗ ಮಾಡಿಕೊಂಡಿದೆ. ಹಳ್ಳಿಯ ಸಾಂಸ್ಕೃತಿಕ ನೆಲೆಗಳು ಅವುಗಳ ಕಲೆಗಳು ಸಹ ಧಾರ್ಮಿಕ ವ್ಯವಸ್ಥೆಯಲ್ಲಿ ಕರಗಿ ಹೋಗುತ್ತಾ ಸಮಷ್ಠಿ ಭಾವನೆಗಳನ್ನು ಕಳೆದುಕೊಳ್ಳುತ್ತಿವೆ. ಆಧುನಿಕತೆ ನಿಜವಾಗಿಯು ಜನಪದ ಕಲೆಗಳಿಗೆ ವರವಾಗಲಿಲ್ಲ. ವಿಷಾದವೆಂದರೆ ಆಧುನಿಕತೆಯನ್ನು ಅನುಸರಿಸುವ ಸಮಾಜಗಳು ಅಂತಹ ಸಾಧ್ಯತೆಯನ್ನು ವಕ್ರಗೊಳಿಸಿವೆ. ಆಧುನಿಕತೆಯ ಕೌಶಲ್ಯ ಮತ್ತು ಜಾಣ್ಮೆಯ ಜೊತೆಗೆ ಜನಪದ ಕಲೆಗಳು ಹೊಸ ಚೈತನ್ಯವನ್ನು ಪಡೆದುಕೊಳ್ಳಲು ಬೇಕಾದ ಬಹುರೂಪಿ ಅವಕಾಶಗಳು ನಿರ್ಮಾಣವಾಗಬೇಕಾಗಿದೆ.

ಜನಪದ ಕಲೆಗಳ ಪುನರ್‌ಸೃಷ್ಠಿ ಮತ್ತು ಅನ್ವಯಿಕತೆ

ಜನಪದ ಕಲೆಗಳು ಸಮಷ್ಠಿ ಅಭಿವ್ಯಕ್ತಿಯಾದ್ದರಿಂದ ಅವು ಆಧುನಿಕ ಜಗತ್ತಿನ ಒಳಗೂ ಗುಪ್ತವಾದ ಬೇರುಗಳನ್ನು ಒಬ್ಬಟ್ಟುಕೊಂಡಿರುತ್ತವೆ. ಜನಪದ ಸಮಾಜವು ತನ್ನ ಹೊರ ರೂಪದಲ್ಲಿ ಕೃಶವಾಗಿದ್ದರು ಒಳಗೆ ಗಾಢವಾದ ಪ್ರತಿರೋಧ ಶಕ್ತಿಯನ್ನು ಇಟ್ಟುಕೊಂಡಿರುತ್ತದೆ. ಜನಪದ ಸಮಾಜಗಳು ಹೀಗಾಗಿಯೆ ಅತ್ಯಾಧುನಿಕ ವ್ಯವಸ್ಥೆಯನ್ನು ತನ್ನ ಕಲೆಯ ಒಳಗೆ ಸೇರಿಕೊಳ್ಳಬಲ್ಲವು. ಅಂದರೆ ಆಧುನಿಕತೆಯನ್ನು ಜನಪದ ಸಮಾಜಗಳು ಸಾರಾಸಗಟಾಗಿ ತಿರಸ್ಕರಿಸುತ್ತಿಲ್ಲ. ಆಧುನಿಕ ಮೋಹವೆ ಜನಪದ ಕಲೆ

ಗಳನ್ನು ಕಿರಿದಾದ ಅರ್ಥದಲ್ಲಿ ಭಾವಿಸುತ್ತಿವೆ. ಯಾವುದೇ ಆಧುನಿಕ ಅವಸ್ಥೆಯೂ ಅಷ್ಟು ಸುಲಭವಾಗಿ ತನ್ನ ಗತಕಾಲದ ಸಮಷ್ಟಿ ಭಾವನೆಗಳನ್ನು ಪೂರ್ಣವಾಗಿ ಕಳೆದು ಕೊಳ್ಳಲಾರದು. ಯಾಕೆಂದರೆ ಸ್ವತಃ ಪರಂಪರೆಯೆ ಆಧುನಿಕತೆಯನ್ನು ರೂಪಿಸಿರುತ್ತದೆ. ಹೀಗಾಗಿ ಜನಪದ ಕಲೆಗಳನ್ನು ಆಧುನಿಕ ಜಗತ್ತಿನ ಹಲಬಗೆಯ ಸಾಧ್ಯತೆಗಳಲ್ಲಿ ಪುನರ್ ಸೃಷ್ಟಿಸುವುದಕ್ಕೂ ದಾರಿಗಳಿವೆ.

ಕನ್ನಡ ಜನಪದ ಕಲೆಗಳು ತುಂಬ ವೈವಿಧ್ಯಮಯವಾಗಿದ್ದು ಕರ್ನಾಟಕದ ಸಂಸ್ಕತಿಯನ್ನು ಅವು ಹಲ ಬಗೆಯ ನೆಲೆಗಳಲ್ಲಿ ಬಿಂಬಿಸುತ್ತಿವೆ. ಯಾವುದೆ ಒಂದು ಸಮುದಾಯ ತನ್ನ ಕಲೆಗಳ ಮೂಲಕ ಆಧುನಿಕ ಜಗತ್ತಿಗೆ ತೋರಿಸಿಕೊಳ್ಳುವ ಮತ್ತು ಹಂಚಿಕೊಳ್ಳುವ ಅನೇಕ ಸಂಗತಿಗಳಿರುತ್ತವೆ. ಎಷ್ಟೋ ಬಾರಿ ಒಂದೊಂದು ಕಲೆಯೂ ಒಂದೊಂದು ಸಮುದಾಯದ ಗುರುತನ್ನು ಅಸ್ತಿತ್ವವನ್ನು ಪ್ರತಿಪಾದಿಸಲು ಬಳಕೆಯಾಗುತ್ತಿರುತ್ತವೆ. ಕಿಳ್ಳೇಕ್ಯಾತರು, ದೊಂಬರು, ಹಕ್ಕಿಪಕ್ಕಿಯರು, ಹಗಲುವೇಷದವರು, ಮುಂತಾದ ನೂರಾರು ಸಮುದಾಯಗಳು ಕಲೆಯನ್ನು ಆರಾಧಿಸುವ ಬೆಳೆಸುವ ಆ ಮೂಲಕ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುವ ಸಮುದಾಯಗಳೇ ಆಗಿವೆ. ಇಂತಹ ಸಮುದಾಯಗಳಿಗೆ ಕಲೆ ವೃತ್ತಿಯೂ ಹೌದು ಹಾಗೆಯೆ ಆ ಮೂಲಕ ಕನ್ನಡ ಸಂಸ್ಕೃತಿಯನ್ನು ವಿಸ್ತರಿಸುವ ಜವಾಬ್ದಾರಿಯೂ ಹೌದು. ಹಾವಾಡಿಗರು, ಶಕುನದವರು, ಕರಡಿ ಕುಣಿತದವರು, ಕೋಲೇಬಸವನ ಆಟದವರೆಲ್ಲ ಮೂಲತಃ ಕಲೆಗಳಿಗೆ ಸಂಬಂಧಿಸಿದ ಸಮುದಾಯಗಳು ಇಂತವರ ಅಸ್ತಿತ್ವಕ್ಕೆ ಪೂರಕವಾಗುವಂತೆ ಕಲೆ ಬೆಳೆದು ಒಂದು ಹಂತಕ್ಕೆ ಸ್ಥಗಿತವಾಗಿ ಬಿಟ್ಟಿರುತ್ತದೆ. ಕಲೆಗಳಿಗೂ ಸಮುದಾಯಗಳಿಗೂ ಪಾರಂಪರಿಕ ಸಂಬಂಧಗಳಿವೆ. ಇಂತಹ ಸಂಬಂಧಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಆಧುನಿಕತೆಯ ಸಂಬಂಧಕ್ಕೆ ಸಮುದಾಯಗಳನ್ನು ಸಜ್ಜುಗೊಳಿಸಬೇಕಾಗುತ್ತದೆ.

ಜನಪದ ಕಲೆಗಳು ಮನುಷ್ಯರ ಭಾವನಾತ್ಮಕ ಸಂಬಂಧಗಳನ್ನು ವಿಜೃಂಭಿಸುತ್ತಲೆ ದಿವ್ಯವಾದ ಆವರಣವನ್ನು ಸೃಷ್ಟಿಸುತ್ತವೆ. ಆಧುನಿಕ ಸಮಾಜಗಳು ತಮ್ಮ ವೇಗದ ಬದುಕಿನಿಂದಾಗಿಯೆ ಬಹಳ ಬೇಗ ದಣಿದು ಬರುತ್ತವೆ. ಇಂತಹ ದಣಿದ ನಗರ ನಾಗರೀಕತೆಗೆ ಜನಪದ ಕಲೆಗಳು ಔಷದವಿದ್ದಂತೆ. ನಗರ ಸಂಸ್ಕೃತಿಗಳು ಜನಪದ ಕಲೆಗಳನ್ನು ತಮ್ಮ ಪರಿಸರದ ಭಾಗವಾಗಿ ಅಳವಡಿಸಿಕೊಳ್ಳುವ ವಾತಾವರಣ ಉಂಟಾಗಬೇಕು. ಈ ಹಿನ್ನೆಲೆಯಲ್ಲಿ ಸರ್ಕಾರಗಳ ಪಾತ್ರ ಬಹಳ ಮುಖ್ಯ. ಅದೃಷ್ಟ ವಶಾತ್ ಕರ್ನಾಟಕದಲ್ಲಿ ಜನಪದ ಅಕಾಡೆಮಿ ಅಸ್ತಿತ್ವದಲ್ಲಿ ಇದೆ. ದೇಶದ ಬೇರಾವ ರಾಜ್ಯಗಳಲ್ಲು ಜಾನಪದ ಅಕಾಡೆಮಿ ಇಲ್ಲ. ಕನ್ನಡ ಸಂಸ್ಕೃತಿ ಇಲಾಖೆ ಕೂಡ ಜನಪದ ಸಂಸ್ಕೃತಿಗೆ ಸಂಬಂಧಿಸಿದ ಹಲವಾರು ಯೋಜನೆಗಳನ್ನು ರೂಪಿಸಿಕೊಂಡಿದೆ. ಹಾಗೆ ನೋಡಿದರೆ ಕರ್ನಾಟಕ ಸರ್ಕಾರ ನಿರಂತರವಾಗಿ ಕನ್ನಡ ಜನಪದ ಕಲೆಗಳ ಉಳಿವಿಗೆ ಯತ್ನಿಸುತ್ತಲೆ ಇದೆ. ಜನಪದ ಕಲಾವಿದರಿಗೂ ಅತ್ಯುನ್ನತ ಪದವಿ ಪ್ರಶಸ್ತಿಗಳನ್ನು ಕೊಡುವ ಮೂಲಕ ಕಲೆಗಳನ್ನು ಪ್ರೋತ್ಸಾಹಿಸಲಾಗುತ್ತಿದೆ. ಜಾನಪದ ಅಕಾಡೆಮಿಯು ಅಲಕ್ಷಿತ ಕಲೆಗಳ ಬಗ್ಗೆ ಹೆಚ್ಚು

ಗಮನಹರಿಸಿದೆ. ಜನಪದ ಲೋಕದ ಎಚ್ ಎಲ್ ನಾಗೇಗೌಡರು ಜನಪದ ಕಲೆಗಳ ಜೊತೆಯಲ್ಲಿ ಇಡೀ ಕರ್ನಾಟಕದ ಉದ್ದಕ್ಕೂ ಇರುವ ಕಾಲವಿದರನ್ನು ಸಂಘಟಿಸಿದ್ದಾರೆ. ಅವರನ್ನೆಲ್ಲ ಹತ್ತಾರು ನೂರಾರು ವೇದಿಕೆಗಳಿಗೆ ಕರೆತಂದು ಮರೆತೇ ಹೋಗಿದ್ದ ಎಷ್ಟೋ ಕಲೆಗಳನ್ನು ಉಳಿಸಿದ್ದಾರೆ. ಹಳೆ ಮೈಸೂರಿನ ಜಾನಪದ ತಜ್ಞರಂತು ಜನಪದ ಕಲೆ ಹಾಗೂ ಕಲಾವಿದರಿಬ್ಬರನ್ನು ಒಂದೆ ಮಟ್ಟದಲ್ಲಿ ಗುರುತಿಸಿ ಅಖಂಡ ಕರ್ನಾಟಕದ ಹೆಗ್ಗಳಿಕೆಯಲ್ಲಿ ಇಂತಹ ನಾಡಾಡಿ ಕಲಾವಿದರ ಕಲೆಗಳ ಮಹತ್ವ ಏನೆಂಬುದನ್ನು ತೋರಿದ್ದಾರೆ. ಪ್ರೊ ಜಿ ಶಂ ಪರಮಶಿವಯ್ಯ ಹಾಗೂ ದೇಜಗೌ ಅವರು ಕಂಸಾಳೆ ಕಲಾವಿದರನ್ನು ಮೈಸೂರು ವಿಶ್ವವಿದ್ಯಾಲಯದ ಜಾನಪದ ಅಧ್ಯಯನಕ್ಕೆ ಸಂದರ್ಶನ ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಂಡಿದ್ದರು.

ಇಂತಹ ಎಷ್ಟೋ ಯತ್ನಗಳು ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಈಗಲೂ ನಡೆಯುತ್ತಿದೆ. ಕನ್ನಡ ವಿಶ್ವವಿದ್ಯಾಲಯವಂತು ಮತ್ತೊಮ್ಮೆ ಹೊಸದಾಗಿ ಕರ್ನಾಟಕದ ಉದ್ದಕ್ಕೂ ಇರುವ ಜನಪದ ಕಲೆಗಳ ಪರಿಶೀಲನೆ ಮಾಡಿ ಮಹತ್ವದ ಕರ್ನಾಟಕ ಜನಪದ ಕಲೆಗಳ ಕೋಶವನ್ನೆ ಪ್ರಕಟಿಸಿದೆ. ಎಚ್ ಎಲ್ ನಾಗೇಗೌಡರ ಜಾನಪದ ಪರಿಷತ್ತು ಈಗಲೂ ಬೆಂಗಳೂರಿನಂತಹ ಸಿಲಿಕಾನ್ ವ್ಯಾಲಿಯಲ್ಲು ಜನಪದ ಕಲೆಗಳ ಉತ್ಸವವನ್ನು ಜೀವಂತ ಇಟ್ಟಿದ್ದಾರೆ. ಜಾನಪದ ಅಧ್ಯಯನಕ್ಕೂ ಕೂಡ ಎಲ್ಲಾ ಕಡೆ ಸಾಕಷ್ಟು ಸ್ಥಾನ ಮಾನವಿದೆ. ಉಡುಪಿಯ ಎಂ ಜಿ ಎಂ ಕಾಲೇಜಿನಲ್ಲಿ ಪ್ರೊ ಕು ಶಿ ಹರಿದಾಸ ಭಟ್ಟರ ನೇತೃತ್ವದಲ್ಲಿ ಜನಪದ ಕಲೆಗಳ ಅಮೂಲ್ಯ ಸಂಗ್ರಹವೆ ಸೇರ್ಪಡೆಯಾಗಿದೆ. ಭಾಗಶಃ ಏಷ್ಯಾ ಖಂಡದಲ್ಲೇ ಆಗದ ಕೆಲಸ ಜನಪದ ಕಲೆಗಳಿಗೆ ಸಂಬಂಧಿಸಿದಂತೆ ಕರ್ನಾಟಕದ ಒಂದರಲ್ಲೇ ಆಗಿದೆ. ಇದು ಹೆಮ್ಮೆ ಪಡಬೇಕಾದ ಸಂಗತಿ. ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರು, ಆದಿ ಚುಂಚನಗಿರಿಯ ಶ್ರೀ ಬಾಲಗಂಗಾಧರ ಸ್ವಾಮೀಜಿ ಮುಂತಾದವರು ಜನಪದ ಕಲೆಗಳಿಗೆ ವಿಶೇಷವಾದ ಪ್ರೋತ್ಸಾಹ ಕೊಡುತ್ತಲೆ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ಜನಪದ ಕಲೆಗಳನ್ನು ಸಮಕಾಲೀನ ಬದುಕಿನ ಭಾಗವಾಗಿ ಹೇಗೆ ಪೂರ್ವಸೃಷ್ಟಿಸಿ ಅನ್ವಯಿಕಗೊಳಿಸಬಹುದು ಎಂಬ ಅಂಶಗಳನ್ನು ಗಮನಿಸಬಹುದು.

- ವಿಶ್ವವಿದ್ಯಾಲಯಗಳು, ಅಕಾಡೆಮಿಗಳು, ವಿವಿಧ ಶಿಕ್ಷಣ ಸಂಸ್ಥೆಗಳು, ಸಾಂಸ್ಕೃತಿಕ ಕೇಂದ್ರಗಳು, ಖಾಸಗಿ ಸಂಸ್ಥೆಗಳು ಒಂದಾಗಿ ಸಮಗ್ರವಾಗಿ ಜನಪದ ಕಲೆಗಳ ಮಹತ್ವವನ್ನು ಅರಿತು ಅದನ್ನು ಸಾಮಾಜಿಕವಾಗಿ ಪುರ್ನಸೃಷ್ಟಿಸುವಂತೆ ಎಚ್ಚರ ಮಾಡಿಸಬೇಕು.
- ಜನಪದ ಕಲೆಗಳ ಶಿಕ್ಷಣ ಕೇಂದ್ರಗಳನ್ನು ತೆರೆದು ಕಲೆಗಳ ಬಗ್ಗೆ ಅಧ್ಯಯನ ಮತ್ತು ತರಬೇತಿ ಕಲ್ಪಿಸಬೇಕು.
- ಜನಪದ ಕಲಾವಿದರ ಜೀವನ ಮಟ್ಟವನ್ನು ಸುಧಾರಿಸಿ ಅವರ ಕಲೆಗೆ ಪೂರಕವಾದ ಸಂಬಂಧ ಹಾಗೂ ಪರಿಸರವನ್ನು ನಿರ್ಮಿಸಬೇಕು.

- ಜನಪದ ಕಲೆಗಳು ಸಾಂಸ್ಕೃತಿಕ ಸಂಪತ್ತು ಎಂದು ಪರಿಗಣಿಸಿ ಆ ಸಂಪತ್ತಿನ ದುರುಪಯೋಗವಾಗದಂತೆ ಎಚ್ಚರವಹಿಸಬೇಕು.
- ಜನಪದ ಕಲೆಗಳನ್ನು ಆಧುನಿಕ ಕಾಲದ ಅಗತ್ಯಕ್ಕೆ ತಕ್ಕಂತೆ ಪರಿಸ್ಕರಿಸಿ ಹೊಸ ಬಗೆಯ ಜೀವನ ಧೋರಣೆ ಮತ್ತು ತಂತ್ರಗಳನ್ನು ಅಳವಡಿಸುವ ವ್ಯವಸ್ಥೆ ಆಗಬೇಕು.
- ಜನಪದ ಕಲಾವಿದರು ತಮ್ಮ ಕಲೆಗಳ ಸಾಂಪ್ರದಾಯಿಕ ಕ್ರಮದ ಜೊತೆಯಲ್ಲೆ ಆಧುನಿಕ ಕಲೆಗಳ ಹಾಗೂ ತಂತ್ರಜ್ಞಾನದ ಶಕ್ತಿಯನ್ನು ಅಳವಡಿಸಿಕೊಂಡು ಪುನರ್ ಸೃಷ್ಟಿಯಾಗಬೇಕು. ಆ ಮೂಲಕ ಆಧುನಿಕತೆಯ ಜೊತೆಗೆ ತನ್ನ ಆಸ್ಮಿತತೆಯನ್ನು ಉಳಿಸಿಕೊಳ್ಳುವಂತಾಗಬೇಕು.
- ಜನಪದ ಕಲೆಗಳ ಲಿಂಗ ಜಾತಿ ತಾರತಮ್ಯಗಳನ್ನು ತೊಡೆದು ಹಾಕಿ ಸಮಾನತೆಯ ಮೌಲ್ಯಗಳನ್ನು ಅನುಸರಿಸುವಂತೆ ಮಾರ್ಪಡಿಸಬೇಕು. ಹಾಗೆಯೇ ವಿವಿಧ ಜನಾಂಗಗಳ ನಡುವೆ ಸಾಮರಸ್ಯವಾಗುವಂತೆ ಕಲೆಗಳನ್ನು ಬಳಸಿಕೊಳ್ಳಬೇಕು.
- ಗ್ರಾಮೀಣ ಪರಿಸರವನ್ನು ಅಭಿವೃದ್ಧಿಗೆ ಅಳವಡಿಸುವಂತೆ ಜನಪದ ಕಲೆಗಳನ್ನು ಪರಿಸ್ಕರಿಸುತ್ತ ಸ್ವತಃ ಈ ಕಲೆಗಳನ್ನೇ ಅವರ ಬದುಕನ್ನು ಹಸನು ಮಾಡುವುದಕ್ಕೆ ಬಳಕೆಯಾಗಬೇಕು. ಸರ್ಕಾರದ ಅಭಿವೃದ್ಧಿ ಕಾರ್ಯಗಳಿಗೂ ಜನಪದ ಕಲೆಗಳಿಗೂ ಸಂಬಂಧ ಉಂಟಾಗಬೇಕು.
- ಪ್ರತಿಯೊಂದು ಗ್ರಾಮ ಪಂಚಾಯಿತಿ, ಜಿಲ್ಲಾ ಪರಿಷತ್ತುಗಳಲ್ಲಿ ಜನಪದ ಕಲೆಗಳ ರಕ್ಷಣೆಗೆಂದು ಸಮಿತಿಯೊಂದನ್ನು ರಚಿಸಿ, ಅದು ತನ್ನ ವ್ಯಾಪ್ತಿಯ ಎಲ್ಲ ಜನಪದ ಕಲೆಗಳಿಗೆ ಪ್ರೋತ್ಸಾಹದ ಅವಕಾಶವನ್ನು ಸೃಷ್ಟಿಸಬೇಕು.
- ಪ್ರಾಥಮಿಕ ಶಿಕ್ಷಣದ ಭಾಗವಾಗಿ ಜಾನಪದ ಕಲೆಗಳನ್ನು ಕಲಿಕೆಯ ಅಂಗವಾಗಿಸಬೇಕು. ಅಲ್ಲದೆ ಗ್ರಾಮಾಂತರ ಶಾಲೆಗಳಲ್ಲಿ ಪ್ರತಿ ವಾರವೂ ಆಯಾ ಗ್ರಾಮದ ಜನಪದ ಕಲಾವಿದರಿಂದ ಕಾರ್ಯಕ್ರಮಗಳನ್ನು ರೂಪಿಸಬೇಕು.
- ಜನಪದ ಕಲಾವಿದರ ನಡುವೆ ತಾರತಮ್ಯ ಲಿಂಗಬೇಧ ಉಂಟಾಗದಂತೆ ನಿಯಮ ರೂಪಿಸಬೇಕು. ಅಲ್ಲದೆ ಜನಪದ ಕಲಾವಿದರ ಮೂಲಕವೇ ಪ್ರತಿ ಹಳ್ಳಿಯಲ್ಲೂ ಜನಪದ ಕಲೆಗಳ ಕೋಶವನ್ನು ಆರಂಭಿಸಿ ಸರ್ಕಾರ ಅವುಗಳ ಕಾರ್ಯವೆಚ್ಚವನ್ನು ನೋಡಿಕೊಳ್ಳಬೇಕು.
- ಖಾಸಗೀ ಉದ್ಯಮ ವಲಯವು ಕರ್ನಾಟಕದ ಪ್ರಮುಖ ಕಲೆಗಳನ್ನು ದತ್ತು ತೆಗೆದುಕೊಂಡಂತೆ ಮಾಡಿ ಆ ಕಲೆಗಳನ್ನು ಜಗತ್ತಿನ ಬೇರೆ ಬೇರೆ ಮೂಲೆಗಳಿಗೂ ಪರಿಚಯಿಸುವಂತೆ ಮಾಡಬೇಕು. ಹಾಗೆಯೆ ಜನಪದರ ಎಲ್ಲ ಕಲೆಗಳನ್ನು ಉತ್ಪಾದನೆಯ ಜೊತೆಗೆ ಅಳವಡಿಸುವ ದಾರಿಗಳನ್ನು ನಿರ್ಮಿಸಬೇಕು.
- ಎಲ್ಲ ಬಗೆಯ ಜನಪದ ಕಲೆಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಮಾಡಿ.

ಬೃಹತ್ ಆದ ಕಲಾಕೇಂದ್ರವನ್ನು ಸ್ಥಾಪಿಸುವಂತಾಗಬೇಕು. ಕಲೆಗಳಿಗೆ ಸಂಬಂಧಿಸಿದ ವಾದ್ಯ ಪರಿಕರಗಳು, ಸಾಹಿತ್ಯ, ಸಂಗೀತ ಎಲ್ಲವನ್ನೂ ಅಳವಡಿಸಿರುವ "Ethno Mucic and Ethno Performance Centre"ಗಳನ್ನು ತೆರೆಯಬೇಕು.

- ಅನ್ವಯಿಕವಾದ ಗುಣವು ಕಡ್ಡಾಯವಾಗಿ ಇಡುವಂತೆ ಕಲೆಗಳನ್ನು ಪರಿಷ್ಕರಿಸುತ್ತಲೇ ಗತಕಾಲದ ಸಂಬಂಧಗಳು ಈ ಕಾಲದ ಬದುಕಿನ ಜೊತೆ ಸಕಾರಾತ್ಮಕವಾಗಿ ಕೂಡಿಕೊಳ್ಳುವಂತೆ ಮಾಡಬೇಕು. ಹಳೆಯ ಮೌಲ್ಯಗಳನ್ನು ತೊರೆದು ಸಾಮಾಜಿಕ ನ್ಯಾಯದ ಹಿತವನ್ನು ಕಾಯುವ ನೈತಿಕ ಜವಾಬ್ದಾರಿಯನ್ನು ಅಳವಡಿಸಬೇಕು.

ಈ ಹಿನ್ನೆಲೆಗಳಲ್ಲಿ ಜನಪದ ಕಲೆಗಳನ್ನು ಗಂಭೀರವಾಗಿ ಪರಿಶೀಲಿಸಿ ನಮ್ಮ ಕಾಲದ ಪರಿಭಾಷೆಗಳಲ್ಲಿ ಹೊಸ ಕನಸುಗಳನ್ನು ಬತ್ತುವಂತೆ ಆಂಧೋಲನವೆ ಉಂಟಾಗಬೇಕಾಗಿದೆ. ಸರ್ಕಾರ ಮತ್ತು ಸಮಾಜ ಒಟ್ಟಾಗಿಯೆ ಇಂತಹ ಕೆಲಸ ಮಾಡಲುಸಾಧ್ಯ. ಇಲ್ಲಿ ಪ್ರಜ್ಞಾವಂತರ ಹೋರಾಟಗಾರರ ಲೇಖಕರ ಮತ್ತು ಮಾಧ್ಯಮಗಳ ಪಾತ್ರ ಅತ್ಯಂತ ಮುಖ್ಯ. ಮಾಧ್ಯಮಗಳು ತೀರ್ಮಾನ ಮಾಡಿಕೊಂಡು ಜನಪದ ಕಲೆಗಳನ್ನು ವಿವಿಧ ಬಣ್ಣ ಬೆಡಗು ಅರ್ಥಗಳಲ್ಲಿ ಪ್ರತಿಬಿಂಬಿಸುತ್ತಾ ಹೋದರೆ, ಜನಪದ ಕಲೆಗಳು ವರ್ತಮಾನದಲ್ಲಿ ತುಂಬ ಶಕ್ತಿಯುತವಾಗಿ ಆವರಿಸಿಕೊಳ್ಳಬಲ್ಲವು. ಆಧುನಿಕ ಯುಗದ ಮಾಧ್ಯಮಗಳು ಎಂತಹ ಕಲೆಯನ್ನು ಬೇಕಾದರೂ ಯಾವ ಸ್ಥಿತಿಗಾದರೂ ಎತ್ತರಿಸಿ ಬಿಡಬಲ್ಲವು. ಜಗತ್ತಿನ ವಿದ್ಯುನ್ಮಾನ ದಾರಿಗಳು ಕೂಡ ಜಾನಪದ ಕಲೆಗಳನ್ನು ಸಂರಕ್ಷಿಸಬಲ್ಲವು. ಜನಪದ ಕಲೆಗಳು ಹಳೆಯ ಜಗತ್ತನ್ನು ಅಭಿನಯಿಸುತ್ತಲೆ ಇರುತ್ತವೆ. ಯಾವುದೇ ಮಾಯಾ ನಗರವು ತನ್ನ ಗತಕಾಲದ ಕಲೆಗಳನ್ನು ಒಂದಿಷ್ಟು ಕ್ಷಣವಾದರೂ ನೆನಪಿಸಿಕೊಳ್ಳಬಲ್ಲದು. ದಣಿದು ಸಾವರಿಸಿಕೊಳ್ಳುವ ಹೊತ್ತಿನಲ್ಲಿ ಹಳೆಯ ಹಳ್ಳಿಯ ಜನಪದ ಕಲೆಗಳು ದಿವ್ಯವಾದ ಮಾನಸಿಕ ಸ್ಥಿತಿಯನ್ನು ಬಿತ್ತಬಲ್ಲವು. ಹೀಗಾಗಿಯೆ ಯಾವುದೆ ಜನಪದ ಕಲೆಯು ಜಗತ್ತು ಮುಳುಗಿಹೋಗುತ್ತದೆ. ಎನ್ನುವಾಗಲೂ ಯಾವುದೊ ಕಾಡಿನ ಹಳ್ಳಿಯ ಬೆಟ್ಟದ ಕೇರಿಯ ಮಳೆಯಲ್ಲು ಎಲ್ಲಾ ವಿಷಾದ ಮತ್ತು ಸಂಭ್ರಮಗಳಿಂದ ಅನಾವರಣಗೊಳ್ಳಬಲ್ಲದು. ಈ ವಿಶ್ವಾಸದಲ್ಲಿಯೆ ಜನಪದ ಕಲೆಗಳನ್ನು ಬದುಕಿನಲ್ಲಿ ಕಂಡುಕೊಳ್ಳುವ ಮತ್ತು ಉಳಿಸುವ ಎರಡೂ ಕ್ರಿಯೆಗಳನ್ನು ಜಾಗೃತವಾಗಿ ಅಳವಡಿಸಿಕೊಳ್ಳಬೇಕಾಗಿದೆ.

೫

ಕರ್ನಾಟಕ ದೇವದಾಸಿಯರ ಸಂಶೋಧನೆಯ ಸಂದರ್ಭದಲ್ಲಿ ವಿಶಿಷ್ಟ ಅನುಭವಗಳು

ಡಾ ಚನ್ನಣ್ಣ ವಾಲೀಕಾರ

[ಡಾ ಚನ್ನಣ್ಣ ವಾಲೀಕಾರರು ರಾಜ್ಯದ ಹಿರಿಯ ಜಾನಪದ ಸಂಶೋಧಕರು. ಇವರು ಕರ್ನಾಟಕ ದೇವದಾಸಿಯರನ್ನು ಕುರಿತು ಕ್ಷೇತ್ರಕಾರ್ಯ ಕೈಗೊಂಡಾಗ ಮಾಹಿತಿದಾರರಿಂದ ಎದುರಿಸುವ ಸವಾಲುಗಳನ್ನು ಮತ್ತು ಅನುಭವಗಳನ್ನು ಪ್ರಸ್ತುತ ಲೇಖನದಲ್ಲಿ ಹಂಚಿಕೊಂಡಿದ್ದಾರೆ. ಕ್ಷೇತ್ರ ದರ್ಶನ ನೀಡುವ ಪ್ರವಾಸಿಗರಿಗೆ, ಕ್ಷೇತ್ರಕಾರ್ಯಕರ್ತರಿಗೆ ಮತ್ತು ಸಂಶೋಧಕರಿಗೆ ಈ ಲೇಖನ ಮಾನಸಿಕ ಪೂರ್ವ ಸಿದ್ಧತೆಯ ಅಸ್ತ್ರವಾಗುವುದು.]

೧೯೮೯ರ ಸೆಪ್ಟೆಂಬರ್ ತಿಂಗಳು ಮೈಸೂರು ವಿಶ್ವವಿದ್ಯಾನಿಲಯದ ಒಂದು ಕಾರ್ಯಕ್ರಮಕ್ಕೆ ಹೋದಾಗ ನಮ್ಮ ಭಾಗದ ಖ್ಯಾತ ಚಿಂತಕರೂ ಸಾಮಾಜಿಕ ಸಂಶೋಧಕರೂ ಆದ ಡಾ ಜೋಗನ್ ಶಂಕರ್ ಅವರ ಪರಿಚಯವಾಯಿತು. ಊಟಕ್ಕೆ ಕುಳಿತಾಗ ಅವರು ಮಾತಾಡುತ್ತಾ ತಮ್ಮ ಥೀಸಿಸ್ The Pattern of Devadasi System; ಕುರಿತು ತಿಳಿಸಿದ್ದು ನನ್ನ ಮನಸ್ಸಿಗೆ ನಾಟಿತು. ಅಲ್ಲಿಂದ ಬಂದ ಕೂಡಲೇ ನಮ್ಮ ಗುಲಬರ್ಗಾ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಆ ಗ್ರಂಥ ಸಿಕ್ಕಿತು. ಆ ವಿಷಯದ ಕುರಿತು ಆದ ಅನುಭವದ ಆಳವನ್ನು, ನನ್ನನ್ನು ವಿಚಾರದ ಎತ್ತರಕ್ಕೂ ಕರೆದುಕೊಂಡು ಹೋಯಿತು. ಕಾರ್ಲಮಾರ್ಕ್ಸ್, ಎಂಜಿಲ್ಸ್ ಸೇರಿ ಕಮ್ಯುನಿಸ್ಟ್ ಮೆನಿಫಸ್ಟೊ ರಚಿಸಿ ಸಾಮ್ಯವಾದರ ಕ್ರಾಂತಿಗೈದರು. ನನ್ನ ಬರಹ ಮತ್ತು ಬದುಕನ್ನು ಬದಲಾವಣೆಗೈಯಲು ಒಂದು ಜೀವನ ಸೂತ್ರ ಶಬ್ದಮಣಿದರ್ಪಣದ ಕೇಶಿರಾಜನಂತೆ ರಚಿಸಿ ಆಕರ ಗ್ರಂಥಗಳನ್ನೆಲ್ಲ ಸಂಗ್ರಹಿಸಿ ಗಂಭೀರವಾದ ಅಧ್ಯಯನಕ್ಕಿಳಿದೆ.

ಹಗಲು ಗದ್ಯ ರಾತ್ರಿ ಪದ್ಯ ಎರಡು ಸಾರಿ ಜಳಕವು
ಬೈಗ ಬೆಳಗು ದೇಹದಾರ್ಢ್ಯ ಎರಡು ಸಾರಿ ಊಟವು
ಪ್ರತಿಪತ್ರಿಕೆಯಲ್ಲಿ ಬರಹ ವಿಶ್ವತುಂಬ ಪಯಣವು
ದೀನದಲಿತರೇಳ್ಗೆಗಿಹುದೇ ನಿಜಕೋಗಿಲೆ ಗಾನವು

೧೯೯೦ ರಿಂದ ೨೦೦೦ ತನಕ ಅಧ್ಯಯನಗೈಯುತ್ತ, ಬರೆಯುತ್ತ ೨೦೦೨ರ ನವೆಂಬರ್‌ನಲ್ಲಿ ಈ ಬೃಹತ್ ಗ್ರಂಥ ತಂದ ಕರ್ನಾಟಕ ದೇವದಾಸಿಯರ ಸಂಶೋಧನೆಯ ಸಂದರ್ಭದಲ್ಲಿ ಉಂಟಾದ ವಿಶಿಷ್ಟ ಅನುಭವಗಳು ಇವು.

ನನ್ನ ಕ್ಷೇತ್ರಕಾರ್ಯ ಮೊದಲು ನನ್ನ ಗುಲಬರ್ಗಾ ಜಿಲ್ಲೆಯಿಂದಲೇ ಆರಂಭಿಸಿದೆ. ಆಳಂದ ತಾಲ್ಲೂಕಿನ ಚುಂಚುರ ಮಾಪುರತಾಯಿಯ ಉತ್ಸವ ವೈಶಾಖ ಶುದ್ಧ ಆಗಿಹುಣ್ಣಿಮೆಯಿಂದ ಕಾರಹುಣ್ಣಿಮೆಯ ತನಕ ಬರುವ ನಾಲ್ಕು ಶುಕ್ರವಾರಗಳಲ್ಲಿ ಈ ದೇವಿಯ ವಿಶೇಷ ಜಾತ್ರೆ, ಉತ್ಸವ, ಪೂಜೆ, ಬತ್ತಲೆ ಸೇವೆ, ಅರ್ಪಣಾ ಕಾರ್ಯ ನಡೆಯುವುದು. ಹಗಲು ಜಾತ್ರೆ, ಉತ್ಸವ ಪೂಜೆ ಕಾರ್ಯಗಳು ನಡೆದರೆ, ರಾತ್ರಿ ಬತ್ತಲಸೇವೆ, ಅರ್ಪಣಾ ಕಾರ್ಯ ನಡೆಯುವವು. ೧೯೭೯ರ ಏಪ್ರಿಲ್ ತಿಂಗಳಲ್ಲಿ ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕ ರಾಜ್ಯ ಸಂಚಾಲಕರಾಗಿದ್ದ ಬಿ ಕೃಷ್ಣಪ್ಪನವರು ಇಲ್ಲಿಗೆ ಬಂದು ಹೋದಬಳಿಕ ರಾತ್ರಿ ನಡೆಯುವ ಸಾಮಾಜಿಕ ಅನಿಷ್ಟಗಳು ನಿಂತುಹೋಗಿವೆ. ಆದರೆ ಹೊಟ್ಟೆಪಾಡಿಗಾಗಿ ಬಡತನ ಮತ್ತು ನಿರಕ್ಷರತೆ, ಮೌಢ್ಯ, ಅಂಧಶ್ರದ್ಧೆಯ ಫಲವಾಗಿ ಇನ್ನೂ ಕೆಲಜನ ಗುಪ್ತವಾಗಿ ಬಸವಿಯರನ್ನು ಬಿಡುತ್ತಿರುವುದು ಕಂಡುಬಂತು. ಗುಡಿಯ ಮುಂದೆ ಕುಳಿತಿದ್ದ ಹಿರಿಕಿರಿಯ ಬಸವಿಯರಿಗೆ 'ಇಂಥ ಕೆಟ್ಟದ್ದೆಲ್ಲ ಬಿಟ್ಟು ಮದುವೆಯಾಗಿ ಗರತಿಯರಂತೆ ಸಂಸಾರ ಮಾಡಬಾರದೆ?' ಎಂಬ ನನ್ನ ಪ್ರಶ್ನೆಗೆ ಅವರಲ್ಲಿ ಒಬ್ಬಾಕೆ ಕೊಟ್ಟ ಉತ್ತರ ನನ್ನ ಮರ್ಮಾಪಾತಕ್ಕೆ ತಾಗಿತು. 'ನಮ್ಮ ಬಡತನ ನಿವಾರಣೆ ಮಾಡುವವರಾರು? ನಮ್ಮನ್ನು ಲಗ್ನವಾಗಲು ಮುಂದೆ ಬರುವವರಾರು?' ಎಂದು ಹಾಕಿದ ಪ್ರಶ್ನೆಗಳಿಗೆ ನನ್ನ ಬಾಯಿ ಬಂದಾಗಿ ಹೋಯಿತು.

ಜನವರಿ ೧೪ರಂದು ನಡೆಯುವ ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಬಗದುರಿ ಎಲ್ಲಮ್ಮನ ಉತ್ಸವಕ್ಕೆ ಹೋದೆ. ಮುಂಜಾನೆ ಸೂರ್ಯೋದಯದ ಜೊತೆಗೆ ಆರಂಭವಾದ ಉತ್ಸವ ಸೂರ್ಯಾಸ್ತದ ಜೊತೆಗೆ ಮುಗಿಯುವುದು. ರಾತ್ರಿ ಅಲ್ಲಿ ಒಬ್ಬರೂ ಉಳಿಯುವುದಿಲ್ಲ. ಈಗೆಲ್ಲ ಇಲ್ಲಿ ಬತ್ತಲೆಸೇವೆ, ಅರ್ಪಣಾ ಕಾರ್ಯ ನಿಂತುಹೋಗಿದೆ. ಅಲ್ಲಿಂದ ಬಸ್ ಸ್ಟಾಂಡಿನವರೆಗೆ ನನ್ನ ಜೊತೆಗೆ ನಡೆದುಬಂದ ಒಬ್ಬ ಹಿರಿಯ ಜೋಗತಿ ಹೇಳಿದ ಮಾತುಗಳು ನನ್ನೆದೆಗೆ ಹಾರಿಕಾಸಿ ಹಾಕಿ ಹೊಡೆದಂಗಾಯಿತು. ಈಕೆ ಬಗದಾಳ ಊರಿನವಳು. ಕೆಳವರ್ಗದವಳು. ಇವಳ ಮೇಲೆ ಊರ ಗೌಡನ ಕಣ್ಣು ಬಿತ್ತು. ಅಲ್ಲಿಯ ಎಲ್ಲಮ್ಮನ ಪೂಜಾರಿಗೆ ಹಣದಿಂದ ಹಿಡಿದು ದೇವರ ಹೇಳಿಕೆ ಮಾಡಿಸಿ ದೇವಿಯ ಕುದುರೆ ಮಾಡದಿದ್ದರೆ ಈ ಊರು ಸುಟ್ಟು ಹೋಗುವುದೆಂದು ತಿಳಿಸಿದಾಗ, ಊರು ಜನ ಹೆದರಿ ಒತ್ತಾಯದಿಂದ ಆ ಮನೆತನದ ಜನಕ್ಕೆ ಒಪ್ಪಿಸಿ ಬಗದಾಳ ಎಲ್ಲಮ್ಮನ ಜೋಗತಿಯನ್ನಾಗಿ ಮಾಡಿದಾಗ ರೂಪ, ಲಾವಣ್ಯ, ವಯಸ್ಸು ಇರುವತನಕ ಆ ಊರಗೌಡ ನೋಡಿಕೊಂಡು ಬಳಿಕ ಇವಳಿಗೆ ಬಿಟ್ಟು ಸಣ್ಣವಯದ ಮತ್ತೊಬ್ಬಳಿಗೆ ಜೋಗತಿಯನ್ನಾಗಿ ಮಾಡಿ ಇಟ್ಟುಕೊಂಡನು ಎಂದು ಆ ಹಿರಿಜೋಗತಿ ಅಳುತ್ತ ಹೇಳಿದ್ದು ಕೇಳಿ ನನ್ನ ಕರುಳು ಚುರ್ ಎಂದಿತು.

ಗುಲಬರ್ಗಾ, ಬೀದರ್ ಜಿಲ್ಲೆಗಳ ಕ್ಷೇತ್ರಕಾರ್ಯ ಮುಗಿಸಿಕೊಂಡು ರಾಯಚೂರು ಜಿಲ್ಲೆಯ ಕ್ಷೇತ್ರಕಾರ್ಯಕ್ಕಾಗಿ ಹೊರಟೆ. ರಾಯಚೂರು ನಗರದಲ್ಲಿ ಕೆಂಚ ಮಾರಮ್ಮನಿಗೆ ಎಸ್‌ಎಸ್‌ಎಲ್‌ಸಿ ಓದಿದ್ದ ಇಬ್ಬರು ಹುಡುಗಿಯರಿಗೆ ಬಿಟ್ಟಿದ್ದು ತಿಳಿದು ವಿಳಾಸ ಪಡೆದು ನೇರವಾಗಿ ಅವರ ಮನೆಗೆ ಹೋದೆ. ಅವರ ತಾಯಿತಂದೆಗಳಿಗೆ ಭೇಟಿಯಾಗಿ, ಓದುಬರೆದ ಹೆಣ್ಣುಮಕ್ಕಳಿಗೆ ಮದುವೆ ಮಾಡಿಕೊಡುವುದು ಬಿಟ್ಟು ಹೀಗೆ ದೇವರಿಗೆ ಬಿಟ್ಟು ಬಸವಿಯರನ್ನಾಗಿ ಮಾಡುವುದು ಸರಿಯೆ? ಎಂದು ಕೇಳಿದಾಗ ನಮಗೆ ಗಂಡುಮಕ್ಕಳಿಲ್ಲ. ಇರಲಿಕ್ಕೊಬ್ಬಳು ಹೆಣ್ಣುಮಗಳು. ಅವಳಿಗೆ ಮಾಡಿಕೊಟ್ಟರೆ ನಮಗೆ ನೋಡಿಕೊಳ್ಳುವವರ್‍ಯಾರು ದೇವರಿಗೆ ಬಿಟ್ಟರೆ ಈಕೆ ನಮ್ಮಲ್ಲಿಯೇ ಇರುವಳು. ನಮಗೆ ನೋಡಿಕೊಳ್ಳುವಳು ಎಂದು ಹೇಳಿದ್ದು ಕೇಳಿ ನನಗೆ ಮಾತೇ ಬರಲಿಲ್ಲ. ಅವರ ಮೌಢ್ಯದ ಬಗ್ಗೆ ಪರಿಸ್ಥಿತಿಯ ಬಗ್ಗೆ ಚಿಂತೆಯಾಯಿತು.

ಬಳಿಕ ಬಳ್ಳಾರಿ ಜಿಲ್ಲೆಯ ಕ್ಷೇತ್ರಕಾರ್ಯಕ್ಕೆ ಹೊರಟೆ. ಬಳ್ಳಾರಿಯ ರೈಲ್ವೆ ನಿಲ್ದಾಣದ ಸಮೀಪ ಇರುವ ವೇಶ್ಯೆಯರ ಗುಡಿಸಿಲಿನ ಕಡೆಗೆ ಬಂದು ಒಂದು ಗುಡಿಸಿಲ ಎದುರಿಗೆ ನಿಂತು ಹಣಕಿ ಹಾಕಿ ನೋಡಿದಾಗ ಒಳಗಿದ್ದ ಒಬ್ಬ ಬಸವಿ 'ನನಗೆ ಹುಣ್ಣ ಆಗ್ಯಾವ್ರಿ ಸಾಬರೆ ನನ್ನ ಬಳಿ ಬರಬ್ಯಾಡ್ರಿ ನಿಮಗೆ ಹತ್ತೊಂದ್ರ ನಾಳೆ ನಿಮ್ಮ ಹೆಂಡ್ರ ಮಕ್ಳ ಹಾಳಾಗ್ತಾರಿ' ಎಂದಾಗ 'ನಾನು ಆ ಕೆಲ್ಸಕ್ಕೆ ಬಂದಿಲ್ಲಮ್ಮ, ನಿಮ್ಮ ಜನ್ರಮ್ಯಾಲ್ಯ ಒಂದು ಪುಸ್ತಕ ಬರೀಲಿಕತ್ತಿನಿ. ನೀ ಹಿಂಗ್ಯಾಂಗ್ ಆದಿ ಅಂಬೋದು ತಿಳಕೊಳ್ಳಕ ಬಂದೀನಿ' ಎಂದಾಗ ಆಕೆ ಒಳಗ ಕರದು ಚಾಪಿ ಹಾಸಿ ಕೂಡಿಸಿ ನಾನು ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರಿಸಿದಳು. ಬಳಿಕ ಈಗ ದಾವಣಗೆರೆ ಜಿಲ್ಲೆಯಲ್ಲಿ ಬರುವ ಹರಪನಹಳ್ಳಿ ತಾಲೂಕಿನ ಉಚ್ಚಂಗಿ ದುರ್ಗಕ್ಕೆ ಹೋದೆ. ಆ ಊರಿನಲ್ಲಿ ಈ ಹಿಂದೆ ಜೋಗತಿಯಾದವಳು ಈಗ ಅದನ್ನು ಬಿಟ್ಟು ಸಂಸಾರಸ್ಥಳಾಗಿರುವಳೆಂಬ ಸುದ್ದಿ ತಿಳಿದು ಅವರ ಮನೆಗೆ ಹೋದೆ. ನಾನಲ್ಲಿಗೆ ಹೋಗುವುದರೊಳಗಾಗಿ ಆ ಗಂಡಹೆಂಡತಿ ಇಬ್ಬರೂ ಪಡಸಾಲಿಯಲ್ಲಿ ಕುಳಿತಿದ್ದರು. ನಾನು ಒಮ್ಮಿಂದೊಮ್ಮೆಲೆ ಬಂದದ್ದು ನೋಡಿ 'ಏನ್ರಿ ಏನ್ರಿ' ಎಂದು ಎದ್ದು ನಿಂತರು. ನಾನು ಕೂಡುತ್ತಾ ಅವರಿಗೆ ಕೂಡಲು ಹೇಳಿ 'ನೀವು ದೇವದಾಸಿ ಆಗಿ ಆ ಮೇಲೆಬಿಟ್ಟು ಸಂಸಾರಸ್ಥರಾದದ್ದು ತಿಳಿದುಕೊಳ್ಳಲಾಕ ಬಂದೀನ್ರಿ' ಎಂದಾಗ ಆಕೆ ನಗುತ್ತಾ 'ಕಲ್ಪನಾ ಮಾಡಿದ ಗೆಜ್ಜೆಪೂಜೆ ಸಿನಿಮಾ ನೋಡಿದ ಮ್ಯಾಲೆ ಛೀ ಅನ್ಸತು ಅಂಥ ಬಾಳು ಬಾಳೋದು ಅದೇ ಹೊತ್ತಿಗೆ ಇವ್ರು ಸಿಕ್ಕರು ನನಗೆ ಲಗ್ನ ಆಗ್ಲಾಕ ಮುಂದು ಬಂದ್ರು. ಹಾಗಾಗಿ ನಾನು ಅದು ಬಿಟ್ಟು ಬಿಟ್ಟೆ' ಎಂದದ್ದು ಕೇಳಿ ಹಾಲುಬಾನ ಉಂಡಂಗಾಯಿತು ನನಗೆ.

ಬಳಿಕ ಬಿಜಾಪುರಕ್ಕೆ ನಡೆದೆ ಗೆಳೆಯ ಸಲಬಣ್ಣವರ ಜೊತೆಗೂಡಿ ಅವರಿರುವ ಕೇರಿಗೆ ಹೋದಾಗ ಒಬ್ಬ ಜೋಗತಿಗೆ ಬೇನೆ ಎದ್ದಿದ್ದಾವ. ಉಳಿದ ಜೋಗತಿಯರು ಸೇರಿದ್ದರು. ಅವಳ ಸುತ್ತಮುತ್ತ ಹೆರಿಗೆ ಆದಮೇಲೆ ಅವರೆಲ್ಲರೂ ಸೇರಿ ಬಾಣಂತನ ಮಾಡಿದ್ದು ಕೇಳಿ ಅವರ ಉದಾತ್ತ ಗುಣದ ಬಗ್ಗೆ ಹೆಮ್ಮೆ ಮೂಡಿತು. ಇಂಥ ಬಾಂಧವ್ಯ, ಸೌಹಾರ್ದತೆ ಎಲ್ಲಿ

ಸಿಗುವುದೆನಿಸಿತು. ಅಲ್ಲಿಂದ ಹುಬ್ಬಳ್ಳಿಗೆ ಹೊರಟೆ. ಹುಬ್ಬಳ್ಳಿ ಮುಟ್ಟಿದಾಗ ಸಂಜೆ ಆಗುತ್ತಿತ್ತು. ಮುಖ ತೊಳೆದುಕೊಂಡು ಬಸ್‌ಸ್ಟ್ಯಾಂಡಿನ ಫಲಹಾರ ಮಂದಿರದಲ್ಲಿ ಫಲಾಹಾರ ಮುಗಿಸಿಕೊಂಡು ಮುಂದೆಲ್ಲಿಗೆ ಹೋಗಬೇಕೆಂದು ವಿಚಾರ ಮಾಡುತ್ತ ಕುಳಿತಾಗ ಅಲ್ಲಿಗೊಬ್ಬ ಜೋಗತಿ ಬಂದಳು. ಬಂದವಳು ಬಸ್‌ಸ್ಟ್ಯಾಂಡಿನ ಒಂದು ಜಾಗದಲ್ಲಿ ಕುಳಿತು ತನಗೆ ಹಾಕಿದ್ದ ರೊಕ್ಕ ಎಣಿಸತೊಡಗಿದ್ದಳು. ಆ ಹೊತ್ತಿಗೆ ಒಬ್ಬ ಕಳ್ಳ ಬಂದವನೆ ಒಂದು ಏಟಿಗೆ ಅವಳ ರೊಕ್ಕದ ಚೀಲ ಎತ್ತಿಕೊಂಡು ಓಡಿಹೋದದ್ದನ್ನು ನೋಡುತ್ತ ಆ ಜೋಗತಿ ಅಳದೆ, ದುಃಖದ ಹಾಡು ಹಾಡತೊಡಗಿದಳು.

ಕೊಟ್ಟವಳು ನೀನೇ ರೇಣುಕಾ ತೊಗೊಳುವವಳು ನೀನೇ ರೇಣುಕಾ |
ಬಿಟ್ಟವಳು ನೀನೇ ರೇಣುಕಾ ಸುಮ್ಮನಿದ್ದವಳು ನೀನೇ ರೇಣುಕಾ |
ನಾನ್ಯಾಕಳಲಿ ನೀನೇ ರೇಣುಕಾ ನಾನ್ಯಾಕೆಗೋಳಡಲಿ ನೀನೇ ರೇಣುಕಾ |
ಕೊಟ್ಟವಳ ಕಿತ್ತುಕೊಂಡು ಹೋದಾಗ ನಾನ್ಯಾಕ ಮರಗಲಿ ರೇಣುಕಾ |
ಈ ಲೋಕದವಳು ನೀನೇ ರೇಣುಕಾ ಆಲೋಕದವಳಾ ನೀನೇ ರೇಣುಕಾ ||

ನನಗೆ ಈ ಪ್ರಸಂಗ ಕಡಕೋಳ ಮಡಿವಾಳಪ್ಪ, ಕೂಡಲಾರ ಬಸವಲಿಂಗ, ರಾಮಪುರದ ಬಕ್ಕಪ್ಪಯ್ಯ, ಶಿಶುನಾಳ ಶರೀಫ ಸಾಹೇಬರ ಅನುಭವ ಹಾಡಾಗಿ ಕಂಡುತು.

ಅಲ್ಲಿಂದ ನೇರವಾಗಿ ಸವದತ್ತಿಗೆ ಹೊರಟೆ. ಸವದತ್ತಿಯಲ್ಲಿರುವ ಎಲ್ಲಮ್ಮ ಛಾಯಾಚಿತ್ರಗಳನ್ನು ಭಕ್ತರ, ಉತ್ಸವದ ಫೋಟೋಗಳನ್ನಿಲ್ಲಿ ತೆಗೆದುಕೊಂಡು ಬಂದು ಹೋಟೆಲದಲ್ಲಿ ಊಟ ಮುಗಿಸಿ ಕುಳಿತೆ. ಅಲ್ಲಿಗೆ ಬಂದುಹೋಗುವವರ ಸಂದರ್ಶನಗಳನ್ನೆಲ್ಲ ತೆಗೆದುಕೊಳ್ಳುತ್ತ ಕುಳಿತಾಗ ಒಬ್ಬ ತಾಯಿ ತನ್ನೊಬ್ಬ ಮಗಳೊಂದಿಗೆ ಬಂದು ನನ್ನ ಕೆಳಗಡೆ ಕುಳಿತಳು. ಅದೇ ಆಗ ಜೋಗತಿಗೆ ಮಾಡಿದ ಹಾಗೆ ಕಾಣುತ್ತಿತ್ತು. ಇನ್ನೂ ಈ ಭೂತ ಇಲ್ಲಿ ಜೀವಂತವಾಗಿರುವುದು ತಿಳಿದಾಗ ಮನಸ್ಸಿಗೆ ತುಂಬ ನೋವಾಯಿತು. ಈ ಭೂತದಿಂದ ಇವಳನ್ನಾದರೂ ಉಳಿಸೋಣವೆಂದು ನಿರ್ಧರಿಸಿದೆ. ಮುಂದೇನೇನು ಮಾಡಬೇಕೆಂಬುದನ್ನಲ್ಲಿ ಲೆಕ್ಕ ಹಾಕಿ ತಾಯಿಯವರ ದೇವರ ಹೆಸರಿನಲ್ಲಿ ಇಂಥ ಕೆಟ್ಟ ಕೆಲಸ ಬೇಡ. ನೀವು ನನ್ನ ಜೊತೆಗೆ ರಾಯಚೂರಿಗೆ ಬಂದರೆ ಇವತ್ತು ರಾತ್ರಿ ಬಸ್ಸಿಗೆ ನಿಮಗೊಂದು ಒಳ್ಳೆ ದುಡಿಮೆ ಹಚ್ಚುವೆನು ಎಂದಾಗ ಮೊದಮೊದಲು ಅವರು ಒಪ್ಪಲಿಲ್ಲ. ನನ್ನ ಪೂರ್ಣ ವಿಷಯ ತಿಳಿದಾಗ ಅವರೊಪ್ಪಿಕೊಂಡು ನನ್ನ ಜೊತೆಗೆ ರಾಯಚೂರಿಗೆ ಹೊರಟರು. ಮಧ್ಯರಾತ್ರಿ ರೇಣುಕಾ ಎಲ್ಲಮ್ಮನ ಜಗವನ್ನು ಹೋಗುವ ಬಸ್ಸಿನೊಳಗಿಂದ ಹೊರಗೆ ಎಸೆದುಬಿಟ್ಟೆನು. ಮುಂಜಾನೆ ಎಂಟರ ಸುಮಾರಿಗೆ ರಾಯಚೂರಿಗೆ ಬಂದು ಮುಟ್ಟಿದೆವು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರೂ, ನಗರ ಸಭಾಧ್ಯಕ್ಷರು ಆದ ಆರ್ ಆಂಜಿನೇಯುಲು ಅವರಲ್ಲಿಗೆ ಕರೆದುಕೊಂಡು ಬಂದು ನಗರ ಸಭೆಯಲ್ಲಿ ಕಸಗೂಡಿಸುವ ಕೆಲಸ ಇವರಿಬ್ಬರಿಗೂ ನೀಡಬೇಕೆಂದು ಕೇಳಿಕೊಂಡಾಗ ನನ್ನ ಅನಪೇಕ್ಷ ಸೇವಾ ಕಾರ್ಯ

ಬಲ್ಲವರಾದ ಅವರು ನಾಳೆಯಿಂದ ಕೆಲಸಕ್ಕೆ ಬರಲು ತಿಳಿಸಿ ತಮ್ಮ ಕೇರಿಯ ಕೊನೆಯಲ್ಲಿರುವ ಒಂದು ಜಾಗ ತೋರಿಸಿ ಒಂದೇ ಸಾವಿರ ರೂಪಾಯಿ ಕೊಟ್ಟು ಸಂಜೆಯೊಳಗಾಗಿ ಒಂದು ಗುಡಿಸಲು ಹಾಕಿಕೊಳ್ಳಲು ಹೇಳಿ ನಗರಸಭೆ ಕಾರ್ಯಾಲಯಕ್ಕೆ ಕಾರಿನಲ್ಲಿ ಹೋದರು. ಅವರಂದಂತೆ ಅಂದು ಸಂಜೆಯೊಳಗಾಗಿ ಅವರು ಹೇಳಿದ ಸ್ಥಳದಲ್ಲಿ ಒಂದು ಗುಡಿಸಿ ಹಾಕಿಸಿಕೊಟ್ಟೆ, ಮರುದಿನದಿಂದ ತಾಯಿ ಮಗಳಿಬ್ಬರೂ ನಗರಸಭೆಯ ವತಿಯಿಂದ ಕಸಗೂಡಿಸಲು ಹೊರಟರು. ಒಂದು ತಿಂಗಳ ಸಂಬಳ ಬಂದನಂತರ ಅಥೋಣಿಯಲ್ಲಿರುವ ತಮ್ಮ ತಂದೇನ ಮಗಳು ಕರೆಸಿಕೊಂಡಳು. ಮುಂದೆ ತನ್ನ ಜೊತೆಗೆ ಕಸಗೂಡಿಸುವವನಿಗೆ ಮನೆಯಿಂದ ಲಗ್ನ ಮಾಡಿಕೊಂಡಳು.

ಬಳಿಕ ಚಿತ್ರದುರ್ಗ ಜಿಲ್ಲಾ ಕ್ಷೇತ್ರಕಾರ್ಯಕ್ಕೆ ಹೊರಟೆ. ಚಿತ್ರದುರ್ಗ ಬಸ್‌ಸ್ಟ್ಯಾಂಡಿನಲ್ಲಿ ಇಳಿದು ಜೋಗತಿ, ಬಸವಿಯರ ಮನೆಗಳು ಎಲ್ಲಿರುವವು ಎಂದು ಕೇಳಿದಾಗ ಒಬ್ಬ ಜೋಗತಿ ಮಗ ದುರ್ಗಪ್ಪ ಇಲ್ಲಿ ಹೋಟೆಲಿಟ್ಟಿರುವನು ಎಂದು ತಿಳಿಸಿ ಅವನಲ್ಲಿಗೆ ಕರೆದುಕೊಂಡ ಹೋಗಲು ನಾನು 'ದುರುಗಪ್ಪ ನಿನ್ನ ತಾಯಿಗೆ ನೋಡಬೇಕಾಗಿದೆ ತೋರಸಿತೇನಪ್ಪ' ಎಂದು ಕೇಳಿದಾಗ ಅವನು ವೀರಭದ್ರಾವತಾರ ತಾಳಿ 'ಎಲ್ಲಾ ಸೂಳೆಮಕ್ಕಳೂ ಒಂದೆ ಯಾ ಸೂಳೆಮಗನಿಗೂ ನನ್ ತಾಯಿಗೂ ತೋರಸಲ್ಲಾ, ನಡಿಲೆ ನೀನು, ನಡಿ ಇಲ್ಲಿಂದ' ಎಂದಾಗ ನನ್ನ ಮನಸ್ಸಿಗೆ ಇವರಿಂದ ಬಹಳಷ್ಟು ನೋವಾದರೂ ಇದು, ಸಹಜ ಎಂದು ಅಲ್ಲಿಂದ ಚಂದ್ರಗುತ್ತಿಗೆ ಹೋಗುವ ಬಸ್ಸು ಹಿಡಿದು ಹೊರಟೆ ಅಂದು ಸಂಜೆ ಶಿವಮೊಗ್ಗ ಮುಟ್ಟಿ ಆ ರಾತ್ರಿ ಅಲ್ಲುಳಿದು ಮರುದಿನ ಮುಂಜಾನೆ ಚಂದ್ರಗುತ್ತಿಗೆ ಹೊರಟೆ. ಸಂಜೆಯೊಳಗಾಗಿ ಸೊರಬದ ಮೂಲಕ ಚಂದ್ರಗುತ್ತಿಗೆ ಬಂದಾಗ ಭಾರೀ ಮಳೆ ಹತ್ತಿತು. ಮಳೆ ನಿಂತಾಗ ಸಂಜೆ ಆ ರಾತ್ರಿ ಹೋಗಿ ದೇವಾಲಯವನ್ನು ನೋಡಿಕೊಂಡು ಬಸ್ಸು ಹತ್ತಿ ಸೊರಬಕ್ಕೆ ಬಂದಾಗ ಒಬ್ಬ ಜೋಗತಿ ಸಿಕ್ಕಳು. ನಾನು ನನ್ನ ಪರಿಚಯ ನೀಡಿ ವಿವರ ಕೇಳಲು ಬಯಸಿದಾಗ ಆಕೆ ಸಿಟ್ಟಿಗೆ ಬಂದು 'ಎಲ್ಲರೂ ಲಘುಸರ, ಪುಸ್ತಕ ಬರಿತೀವಿ ಅದು, ಮಾಡ್ತೀವಿ ಇದು ಮಾಡ್ತಿವಿ ಅಂತ ಹೇಳಿ ತಮ್ಮ ಹೊಟ್ಟೆ ತುಂಬಿಸ್ಕೊಳ್ಳೋರೆ ಕಳ್ಳರು, ಬದ್ಮಾಶರೆ' ಎಂದಾಗ ನಾನು ಸಿಟ್ಟಿಗೆ ಬರಲಿಲ್ಲ. ಇದು, ತುಂಬ ನೊಂದ ಜೀವದ ನುಡಿ ಎಂದು ಅಲ್ಲಿಂದ ಶಿವಮೊಗ್ಗಕ್ಕೆ ಹೊರಟೆ.

೬

ಕರ್ನಾಟಕದಲ್ಲಿ ಸೋಲಿಗರು ಮತ್ತು ಅವರ ಸಮಸ್ಯೆಗಳು

ಬಿ ಟಿ ರಾಮಪ್ಪ, ಎಂ ಶ್ರೀರಾಮ

[ಮೈಸೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗದ ಸಂಶೋಧನ ವಿದ್ಯಾರ್ಥಿ ಬಿ ಟಿ ರಾಮಪ್ಪ ಮತ್ತು ಬೆಂಗಳೂರು ಜಿಲ್ಲಾ ಸೋಲಿಗರ ಸಂಘದ ಅಧ್ಯಕ್ಷರಾದ ಎಂ ಶ್ರೀರಾಮ ಅವರ ಸಮಾಲೋಚನೆಯ ಫಲಶ್ರುತಿಯೇ ಈ ಲೇಖನ. ಇಲ್ಲಿ ಕರ್ನಾಟಕ ಸೋಲಿಗರ ಪ್ರಸ್ತುತ ಸ್ಥಿತಿ ಮತ್ತು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲಾಗಿದೆ.]

ಪೀಠಿಕೆ

ಪಾರ್ವತಿ ಪರಮೇಶ್ವರರಿಂದ ನೀಲಯ್ಯ ಮತ್ತು ನಿಜಗೆಂಪೆಯರ ಜನನವಾಗಿ ಮಹದೇಶ್ವರರ ದಯೆಯಿಂದ ಕಾರಯ್ಯ ಮತ್ತು ಬಿಲ್ಲಯ್ಯರು ಹುಟ್ಟಿದರು. ಇವರ ಕಾಲಾನಂತರ ಅವರಿಂದ ವಂಶಾಭಿವೃದ್ಧಿಯಾದಮೇಲೆ ಈ ಗುಂಪಿನ ಜನರಿಗೆಲ್ಲಾ ಒಬ್ಬ ರಾಜನಿದ್ದ. ಒಮ್ಮೆ ಶತ್ರು ರಾಜನ ವಿರುದ್ಧ ಯುದ್ಧ ಮಾಡಬೇಕಾಗಿ ಬಂದು, ಪರಾಜಿತನಾಗಿ ಜೀವರಕ್ಷಣೆಗಾಗಿ ಸೋತಿದ್ದರಿಂದ ಸೋಲು ರಾಜನೆಂದು ಅವನಿಗೆ ಹೆಸರಾಯಿತು. ಅವನ ವಂಶಸ್ಥರಿಗೆ ಸೋಲಿಗರೆಂದು ಹೆಸರಾಯಿತು ಎಂದು The Mysore Tribes and Castes Vol-IV ದಲ್ಲಿ ಎಲ್ ಕೆ ಅನಂತಕೃಷ್ಣ ಐಯ್ಯರ್ ಅವರು ದಾಖಲಿಸಿದ್ದಾರೆ. ಸೋಲಿಗರು ಸೋತವರು, ಇವರು ಕಾಡುವಾಸಿಗಳು, ಮೈಸೂರಿನ ದಕ್ಷಿಣದ ಬಿಳಿಗಿರಿ ರಂಗನ ಬೆಟ್ಟದ ಇಳಿಜಾರಿನಲ್ಲಿ ವಾಸವಾಗಿದ್ದಾರೆ. ಬುಕನನ್‌ರವರ ಪ್ರಕಾರ ಕೆಟ್ಟದಾಗಿ ಮಾತನಾಡುವುದು, ಬೆಂಕಿ ಪಕ್ಕದಲ್ಲಿ ಮಲಗುವುದು, ಉಡುಪುಗಳು ತೊಡುವುದು ಕಡಿಮೆ ಆದರೆ, ನಂತರದ ದಿನಗಳಲ್ಲಿ ಅವರ ಅಭ್ಯಾಸಗಳೆಲ್ಲವನ್ನು ಬದಲು ಮಾಡಿಕೊಂಡರು. ರಾಮಗಿರಿ ಎಂಬ ಬೆಟ್ಟದಲ್ಲಿ ವಾಸಿಸುತ್ತಿದ್ದವರಿಗೆ ಕಾಡು ಇರಳಿಗರು ಎಂತಲೂ, ಅವರು ತಮಿಳಿನಲ್ಲಿ ಮತ್ತು ಇನ್ನು ಕೆಲವರು ತೆಲುಗಿನಲ್ಲಿ ಮಾತನಾಡುತ್ತಿದ್ದರು. ೧೯೬೧ನೇ ಇಸವಿಯ ಜನಗಣತಿ ಪ್ರಕಾರ ಸೋಲಿಗರು ಹೆಚ್ಚಾಗಿ, ಮೈಸೂರು ಜಿಲ್ಲೆಯ ಕೊಳ್ಳೇಗಾಲ, ಚಾಮರಾಜನಗರ, ಬಿಳಿಗಿರಿ ರಂಗನಬೆಟ್ಟ, ಮಹದೇಶ್ವರ ಬೆಟ್ಟ, ಯಳಂದೂರು, ಹೆಗ್ಗಡ ದೇವನಕೋಟೆ, ಹುಣಸೂರು, ಬೆಂಗಳೂರು, ಮಂಡ್ಯ, ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೋಲಾರ

ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕಂಡುಬರುತ್ತಾರೆಂದು ವರದಿ ಮಾಡಲಾಗಿದೆ. ೧೯೭೬ರ ಒಂದುಳಿದ ಬುಡಕಟ್ಟಿನ ಅಜ್ಞಾವಿಧಿಯ ಪ್ರಕಾರ ಸೋಲಿಗರು ಬೆಂಗಳೂರು, ತುಮಕೂರು, ಚಿತ್ರದುರ್ಗ, ಕೋಲಾರ, ಮೈಸೂರು, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ ಎಂದು ವರದಿ ಮಾಡಿದೆ. ೧೯೩೧ರ ಜನಗಣತಿಯ ಪ್ರಕಾರ ಸೋಲಿಗರನ್ನು ಆದಿವಾಸಿ ಬುಡಕಟ್ಟು ಎಂತಲೂ ಮತ್ತು ಶೋಷಣೆಗೆ ಒಳಗಾದ ಜನರೆಂತಲೂ ಇವರು ಮೇಲೆ ತಿಳಿಸಿದ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ ಎಂದು ತಿಳಿಸಿರುತ್ತಾರೆ.

ಇತ್ತೀಚಿನ ಅಧ್ಯಯನದ ಪ್ರಕಾರ ಸೋಲಿಗರು ಬಿಳಿಗಿರಿರಂಗನ ಬೆಟ್ಟ, ಮಲೆಯ ಮಹದೇಶ್ವರ ಬೆಟ್ಟ, ರಾಮಗಿರಿ ದಾರಿಯಲ್ಲಿ ವಾಸಿಸುತ್ತಿದ್ದಾರೆ. ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಪಲ್ಲೆರಾಯನಹಳ್ಳಿ, ಮಂಡ್ಯ ಜಿಲ್ಲೆಯ ಶಿವಾರ ಕಾಲೋನಿ, ಮಾವಿನಕೆರೆ (ಸೋಲಿಗರ ಕೊಪ್ಪಲು), ಹಾಸನ ಜಿಲ್ಲೆಯ ಶಾರದಾದೇವಿ ನಗರ, ಹೊಳೆನರಸೀಪುರ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಮೈಸೂರು ಜಿಲ್ಲೆಯ ಹುಣಸೂರು, ನಂಜನಗೂಡು, ಹೆಗ್ಗಡದೇವನ ಕೋಟೆ,ಕೆ ಆರ್ ಪೇಟೆ, ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ, ಗುಂಡ್ಲುಪೇಟೆ, ಚಾಮರಾಜನಗರ, ಕೊಡಗು ಜಿಲ್ಲೆಯ ಮಡಿಕೇರಿ, ಕೋಲಾರ ಜಿಲ್ಲೆಯ ರಾಮಸಂದ್ರ, ಬಂಗಾರುಪೇಟೆ ತಾಲ್ಲೂಕಿನ ಗುವಾಲಹಳ್ಳಿ, ತಟ್ಟನಹಳ್ಳಿ, ಮಾಲೂರು ತಾಲ್ಲೂಕಿನ ಪೆಳವನಹಳ್ಳಿ, ಓಬಟ್ಟಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಶಿವಮೊಗ್ಗ ಇತ್ಯಾದಿ ಕಡೆ ವಾಸವಾಗಿದ್ದಾರೆ. ಮೂಲತಃ ಮೈಸೂರಿನಿಂದ ಬೇರೆ ಕಡೆ ಹೋದ ಸೋಲಿಗರು ಕೋಲಾರ, ಬೆಂಗಳೂರು ಇತರೆ ಕಡೆ ನೆಲೆಸಿದರು. ಅಲ್ಲಿಯ ಜನರು ಸೋಲಿಗರನ್ನು ಅಲ್ಲಿ ಅವರು ಮಾಡುವ ಕಸುಬಿನ ಆಧಾರದ ಮೇಲೆ ಅಲ್ಲಿಯ ಹಿರಿಯರು ಜಾತಿಯ ಹೆಸರನ್ನು ಇವರಿಗೆ ಕೊಟ್ಟರು. ಬೀಗದ ಕೆಲಸ ಮಾಡುವವರಿಗೆ ಬೀಗದವರು, ಮಣಿ ಮಾರುವವರಿಗೆ ಮಣಿಯವರು, ಊರಿನಲ್ಲಿ ಭಿಕ್ಷೆ ಹೋಗುವವರಿಗೆ ದಾಸಯ್ಯ ಎಂತಲೂ ಇನ್ನು ಅನೇಕ ರೀತಿಯಲ್ಲಿ ಕರೆದರು. ಸೋಲಿಗರು ಅವಿದ್ಯಾವಂತರಾದ್ದರಿಂದ ಊರಿನ ಹಿರಿಯರು ಇಟ್ಟ ಜಾತಿಯನ್ನು ಸ್ವೀಕರಿಸುತ್ತಿದ್ದರು. ಆದರೂ ಇವರೆಲ್ಲರೂ ಮೂಲತಃ ಸೋಲಿಗರೆ.

ಸೋಲಿಗರ ಸಾಮಾಜಿಕ ಜೀವನ

ಸೋಲಿಗರ ವಿವಾಹ ತುಂಬ ಸರಳ, ಇತ್ತೀಚಿನ ದಿನಗಳಲ್ಲಿ ಬದಲಾಗಿದೆ. ಕಲ್ಯಾಣ ಮಂಟಪ ಅಥವಾ ಮನೆಯ ಮುಂದೆ ಗುಡಿಗ(ಕುಲಸ್ಥ)ನಿಗೆ ಕಾಣಿಕೆ ಕೊಟ್ಟು ಮದುವೆ ಮಾಡಿಕೊಡುತ್ತಾರೆ. ಹಿಂದೆ ಅಪಹರಣ ಮದುವೆ ಪದ್ಧತಿ ಇತ್ತು. ಇತ್ತೀಚೆಗೆ ನಾಗರೀಕತೆ ಬದಲಾದಂತೆ ಎಲ್ಲವೂ ಬದಲಾಗಿದೆ. ಹೆಣ್ಣಿಗೆ ಸೋದರಮಾವ ಕಾಲುಂಗರ ತೊಡಿಸಿ ಮಂಟಪಕ್ಕೆ ಕರೆದುಕೊಂಡು ಬರುತ್ತಾರೆ. ಗಂಡ ಸತ್ತ ನಂತರ ಅಥವಾ ಗಂಡ ಬಿಟ್ಟ ನಂತರ ಕುಲಸ್ಥರನ್ನು ಕರೆಯಿಸಿ ಎಲ್ಲರ ಸಮ್ಮುಖದಲ್ಲಿ ರೂಪಾಯಿ ೧.೨೫ ಕಾಣಿಕೆ ಕೊಟ್ಟು ಇಲೆವಳಿ (ಕಟ್ಟುಬಿಡಿ) ಮದುವೆ ಮಾಡಿಕೊಡುತ್ತಾರೆ. ನಂತರ ಎಲ್ಲರೂ ಸೇರಿ ಔತಣಕೂಟದೊಂದಿಗೆ

ಸಂತೋಷ ಪಡುತ್ತಾರೆ. ಸೋಲಿಗರ ಕುಲದಲ್ಲಿ ಹೆಣ್ಣು ಮೈನೆರೆದರೆ ಸೋದರಮಾವ ನೇರಳೆ ಅಥವಾ ಹೊಂಗೆಯ ಕಡ್ಡಿಗಳನ್ನು ತೆಗೆದುಕೊಂಡು ಹೋಗಿ ಚಪ್ಪರ ಹಾಕಿ ೧೩ ದಿವಸಗಳು ಹೊರಗಡೆ ಬರದ ಹಾಗೆ ಅವರಿಗೆ ಪ್ರತ್ಯೇಕ ತಟ್ಟೆ ಇತ್ಯಾದಿ (ಗುಡಿಸಲಿನ ಒಳಗಡೆಯೇ) ನಂತರ ಆಕೆಯನ್ನು ಕುಲದ ಮುತ್ತೈದೆಯವರು ಸ್ನಾನ ಮಾಡಿಸುವಾಗ ಕಾಡಿನಲ್ಲಿ ಸಿಗುವ ಎಲೆಗಳು ಅರಿಸಿಣ ಇತ್ಯಾದಿಗಳ ಮೂಲಕ ಮಂಗಳ ಸ್ನಾನ ಮಾಡಿಸಿ ಮನೆ ಒಳಗಡೆ ಶಾಸ್ತ್ರೋಕ್ತವಾಗಿ ಸೇರಿಸಿಕೊಳ್ಳುತ್ತಾರೆ. ಆಗ ಊರಿನ ನಾಯಕರು, ಕುಲದ ನಾಯಕರು ಸಂತೋಷದಿಂದ ಭೋಜನ ಸೇವಿಸುತ್ತಾರೆ. ಈಗಾಗಲೇ ಹಾಕಿದ ಚಪ್ಪರವನ್ನು ಸೋದರಮಾವ ಕಿತ್ತು ಹೊರಹಾಕಿ ಬೆಂಕಿ ಇಡುತ್ತಾರೆ. ಹಿಂದೆ ಕಾಡಿನ ಸಂಪ್ರದಾಯದಂತೆ ಮದುವೆ ನಡೆಯುತ್ತಿತ್ತು. ಇತ್ತೀಚಿನ ದಿನಗಳಲ್ಲಿ ನಾಗರಿಕತೆಯಿಂದ ಬದಲಾದರೂ ಸಂಪ್ರದಾಯಿಕ ವಾಗಿಯೇ ಮದುವೆ ನಡೆಯುತ್ತದೆ. ಈಗಲೂ ಸೋಲಿಗರು ಕುಲದ ಕಟ್ಟುಪಾಡುಗಳಿಗೆ ಗೌರವಿತವಾಗಿ ಕಟ್ಟುನಿಟ್ಟಾಗಿ ನಡೆದುಕೊಳ್ಳುತ್ತಾರೆ. ಸೋಲಿಗರು ಪೋಲಿಸ್ ಸ್ಟೇಷನ್, ಆಸ್ಪತ್ರೆ, ಚಪ್ಪಲಿಯಿಂದ ಹೊಡೆದರೆ, ಅವಾಚ್ಯ ಶಬ್ದಗಳಿಂದ ಬೈದರೆ, ಸಂಪ್ರದಾಯದ ಕಟ್ಟುಪಾಡುಗಳಲ್ಲಿಯೆ ತೀರ್ಮಾನಿಸಿ ಒಳ ಸೇರಿಸುತ್ತಾರೆ. ಯಾವುದೇ ಒಂದು ಮನೆಯಲ್ಲಿ ಇಬ್ಬರು ಅಣ್ಣ ತಂಗಿಯರಿದ್ದರೆ ಅವರವರು ತಂಗಿಯರನ್ನು ಪರಸ್ಪರ ಬೇರೆ ಕಡೆ ವಿನಿಮಯ ಮಾಡಿಕೊಂಡು ಖರ್ಚಿಲ್ಲದಂತೆ ಮದುವೆಯಾಗುತ್ತಿದ್ದರು. ಸೋಲಿಗರ ವಿವಾಹದ ಬಗೆಗಳಲ್ಲಿ ಏಕಪತ್ನಿತ್ವ, ಬಹುಪತ್ನಿತ್ವ, ವಿವಾಹಪೂರ್ವ ಲೈಂಗಿಕ ಸಂಪರ್ಕ, ಕನ್ಯಾಶುಲ್ಕ, ವಿವಾಹ ವಿಚ್ಛೇದನ, ವಿಧವಾ ವಿವಾಹ, ವಿವಾಹಾಚರಣೆ, ವಿಧವೆಯ ಮಕ್ಕಳು, ಕುಲಪಂಚಾಯಿತಿ, ಶಿಕ್ಷೆಗಳು ಇತ್ಯಾದಿ ಎಲ್ಲಾ ಅಂಶಗಳನ್ನು ಗಮನಿಸಬಹುದಾಗಿದೆ. ಇತ್ತೀಚಿನ ಪ್ರಾಥಮಿಕ ೨೦೦ ಜನರ ಸಮೀಕ್ಷೆಯ ಪ್ರಕಾರ ಮೇಲಿನ ಕೆಲವೊಂದು ಸಂಪ್ರದಾಯಗಳು ಈಗಲೂ ಮುಂದುವರಿದಿದ್ದು ಹೆಚ್ಚಿನ ಸಂಪ್ರದಾಯಗಳನ್ನು ಬಿಟ್ಟು ನಾಗರಿಕತೆ ಬದಲಾದಂತೆ ಬದಲಾಗಿದ್ದಾರೆ ಎಂಬುದು ಪ್ರಾಥಮಿಕ ವರದಿಯಿಂದ ಕಂಡುಬಂದಿದೆ.

ಧಾರ್ಮಿಕ ಜೀವನ

ಸೋಲಿಗರು ಮರದಡಿಯಲ್ಲಿ ಕಲ್ಲನ್ನಿಟ್ಟು ಪ್ರಕೃತಿ ಪೂಜೆಯನ್ನು ನೆರವೇರಿಸುತ್ತಿದ್ದರೂ ಬಯಲಿನಲ್ಲಿಯೂ ಈ ರೀತಿ ಪೂಜೆ ಮಾಡುತ್ತಿದ್ದರು. ಇವರು ಮಾರಮ್ಮ, ಗಂಗಮ್ಮ, ಚೌಡಿ ಈ ರೀತಿ ಶಕ್ತಿ ದೈವಗಳನ್ನು ಪೂಜೆ ಮಾಡುತ್ತಿದ್ದರು. ಪ್ರಾಣಿಗಳ ಬಲಿಗಳನ್ನು ಕೊಟ್ಟು, ಗುಂಪಿನ ನಾಯಕ ಬಂದು ಪೂಜಿಸಿ ಎಲ್ಲರಿಗೂ ತೀರ್ಥಪ್ರಸಾದ ಕೊಡುತ್ತಾರೆ. ಪ್ರಾಥಮಿಕ ವರದಿಯಿಂದ ಈ ಮೇಲ್ಕಂಡ ಸಂಪ್ರದಾಯಗಳು ಇನ್ನು ಮುಂದುವರಿದಿವೆ ಹಾಗೂ ಇತ್ತೀಚಿನ ದಿನಗಳಲ್ಲಿ ಕೆಲವರು ಬಿಳಿಗಿರಿರಂಗ ಕೆಲವರು ಮಹದೇಶ್ವರ ಸ್ವಾಮಿ, ತಿರುಪತಿ ತಿಮ್ಮಪ್ಪ, ಮುನೀಶ್ವರ ಹಾಗೂ ಶಕ್ತಿ ದೇವತೆಗಳನ್ನು ಪೂಜಿಸುತ್ತಿದ್ದಾರೆ. ಧಾರ್ಮಿಕ ಕಟ್ಟುಪಾಡುಗಳಿಗೆ ಬದ್ಧರಾಗಿರುತ್ತಿದ್ದರು ಹಾಗೂ ಈಗಲೂ ಬದ್ಧರಾಗಿರುತ್ತಾರೆ. ಸೋಲಿಗರ ಸಾಮಾಜಿಕ

ಆಚರಣೆಗಳು ಈಗಲೂ ಪಾಲಿಸುತ್ತಿದ್ದಾರೆ ಮತ್ತೆ ಕೆಲವು ಸಂಪ್ರದಾಯಗಳನ್ನು ಬದಲಾವಣೆ ಮಾಡಿಕೊಂಡಿರುತ್ತಾರೆ. ಇವರ ಸಾಮಾಜಿಕ ಸಂಪ್ರದಾಯಗಳನ್ನು ತಿಳಿಯುವುದಾದರೆ,

೧. ಹುಟ್ಟಿನಿಂದ ಸಾಯುವ ತನಕ ಆಚರಣೆ, ೨. ಧರ್ಮ ಮತ್ತು ಮಂತ್ರವಿದ್ಯೆ, ೩. ಹಬ್ಬಗಳು, ಜಾತ್ರೆಗಳು, ಜನಪದ ವೈದ್ಯ ಇತ್ಯಾದಿ ಆಚರಣೆಗಳಿಗೆ ಇವರು ಮಲೆಯ ಮಹದೇಶ್ವರ ಸ್ವಾಮಿಯ ಜಾತ್ರೆಗಳು, ಬಿಳಿಗಿರಿರಂಗಸ್ವಾಮಿ ಜಾತ್ರೆ, ಕೀಳುನಾಡಿನ ದನಗಳ ಜಾತ್ರೆ ಇವತ್ತಿಗೂ ಆಚರಣೆಯಲ್ಲಿವೆ.

ಸೋಲಿಗರ ಆರ್ಥಿಕ ಜೀವನ

ಹಿಂದೆ ಕಾಡಿನಲ್ಲಿ ವಾಸಿಸುವಾಗ ಆನೆ, ಕರಡಿ, ಹುಲಿ, ಕಾಡೆಮ್ಮೆ ಇತ್ಯಾದಿಗಳದ್ದು ಒಂದು ಕಡೆ ಭಯವಿದ್ದರೆ ಇನ್ನೊಂದು ಕಡೆ ಮಳೆಯನ್ನೆ ಆಶ್ರಯಿಸಿ ಬೇಸಾಯ ಮಾಡುತ್ತಿದ್ದರು. ಅವರ ವ್ಯವಸಾಯ ಅವರು ನಂಬಿರುವ ನಂಬಿಕೆ ಹಾಗೂ ಧರ್ಮಗಳಿಗೆ ಬದ್ಧವಾಗಿ ನಡೆಯುತ್ತಿತ್ತು. ಇವರ ಮುಖ್ಯ ಆಹಾರ ರಾಗಿ, ಕಾಡಿನಲ್ಲಿ ಗೆಡ್ಡೆಗೆಣಸು ಅಗೆಯುವುದು, ಕಾಡುಪ್ರಾಣಿಗಳನ್ನು, ಮೀನುಗಳನ್ನು, ಜೇನನ್ನು ಬೇಟೆಯಾಡುವುದು. ಹಾಗೆಯೇ ಕಾಡಿನಲ್ಲಿರುವ ೨೦ ರಿಂದ ೨೫ ಗಿಡಮೂಲಿಕೆಗಳನ್ನು ಸಂಗ್ರಹಿಸಿ ಪಟ್ಟಣದಲ್ಲಿ ಮಾರಿ ಜೀವನ ನಡೆಸುತ್ತಿದ್ದರು. ಆಹಾರವನ್ನು ಎಲ್ಲ ಕಾಲಕ್ಕೂ ಬರುವ ಹಾಗೆ ಸಂಗ್ರಹಣೆ ಹಾಗೂ ಸಂರಕ್ಷಣೆ ಮಾಡುತ್ತಿದ್ದರು. ಇವರು ಬುಟ್ಟಿ, ರೇಷ್ಮೆಯ ತಟ್ಟೆ, ಚಂದ್ರಿಕೆ ಮುಂತಾದ ಸಾಮಾನುಗಳನ್ನು ಪೂರಕವಾಗಿ ತಯಾರಿಸುತ್ತಿದ್ದರು. ಇವರಲ್ಲಿ ಜೀತಗಾರಿಕೆಯಿತ್ತು. ಆದರೆ ನಾಗರಿಕತೆ ಬದಲಾದಂತೆ ಜೀವನ ವಿಧಾನ, ವೃತ್ತಿ, ವ್ಯವಸಾಯದಲ್ಲಿ ಇನ್ನು ಅನೇಕ ರೀತಿಯಲ್ಲಿ ಬದಲಾಗುವುದರ ಜೊತೆಗೆ ಸರ್ಕಾರಿ ಉದ್ಯೋಗಕ್ಕೂ ಕಾಲಿಟ್ಟಿದ್ದಾರೆ. ಹಾಗೆಯೇ ವ್ಯವಸಾಯವು ಆಧುನಿಕ ಪದ್ಧತಿಯ ಪ್ರಕಾರ ನಡೆಯುತ್ತಿದ್ದು, ಹಸುಗಳು, ಆಡು, ಕುರಿ ಇತ್ಯಾದಿ ಪ್ರಾಣಿಗಳನ್ನು ಸಾಕುತ್ತಿದ್ದಾರೆ.

ಅಧ್ಯಯನ

ಪ್ರಸ್ತುತ ಅಧ್ಯಯನಕ್ಕೆ ಮೈಸೂರು, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಮಂಡ್ಯ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳನ್ನು ಆಯ್ದುಕೊಂಡು ೨೦೦ ಸೋಲಿಗರನ್ನು ನೇರ ಸಂಪರ್ಕಿಸಿ ಪ್ರಾಥಮಿಕ ಮಾಹಿತಿಯನ್ನು ಪಡೆಯಲಾಗಿದೆ. ಮತ್ತು ದ್ವಿತೀಯ ಮಾಹಿತಿಯನ್ನು ೧೯೬೧, ೧೯೭೧, ೨೦೦೧ ಜನಗಣತಿ, ಮ್ಯಾಗಜಿನ್, ದಿನಪತ್ರಿಕೆ ಮತ್ತು ಇಂಟರ್‌ನೆಟ್‌ನಿಂದ ಪಡೆಯಲಾಗಿ ಪ್ರಸ್ತುತ ಸೋಲಿಗರ ಸಂಕ್ಷಿಪ್ತವಾದ ಇತಿಹಾಸ ಹಾಗೂ ಅವರ ಪ್ರಸ್ತುತ ಸಮಸ್ಯೆಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಪ್ರಸ್ತುತ ಸೌಲಭ್ಯಗಳು ಮತ್ತು ಸಮಸ್ಯೆಗಳು

ಕಾಡಿನಿಂದ ಊರಿನ ಕಡೆಗೆ ಪ್ರಯಾಣ ಬೆಳೆಸಿದ ನಂತರ ಸೋಲಿಗರ ಜೀವನದಾರಿ ಬದಲಾಯಿತು. ಕಾಡಿನಲ್ಲಿ ಭದ್ರತೆ ಅಂದರೆ ಕಾಡಿನ ಸಂಪನ್ಮೂಲ ಚೆನ್ನಾಗಿ ದೊರೆಯುತ್ತಿದ್ದ

ರಿಂದ ಸುಖಕರವಾಗಿದ್ದರು. ಆದರೆ ಬದಲಾದ ಸನ್ನಿವೇಶದಲ್ಲಿ ಕಾಡಿನಲ್ಲಿ ವಾಸಮಾಡುವುದು ಅರಣ್ಯಾಧಿಕಾರಿಗಳ ನಿರ್ಬಂಧ ಇನ್ನು ಅನೇಕ ಸನ್ನಿವೇಶಗಳಿಂದ ಅವರ ಬದುಕು ಹೀಗೆ ಕಷ್ಟವೇ ಸರಿ. ಕೇಂದ್ರ ಸರ್ಕಾರ ೧೯೫೦ರಿಂದಲೇ ಸೋಲಿಗರನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಿದೆ.

ರಾಜ್ಯ ಸರ್ಕಾರವು ಸಹ ಕೆಲವು ಸೌಲಭ್ಯಗಳನ್ನು ಒದಗಿಸಿದೆ. ಈ ಎಲ್ಲಾ ಸೌಲಭ್ಯಗಳನ್ನು ಪಡೆಯುವುದರಲ್ಲಿ ಸೋಲಿಗರಿಗೆ ಕಷ್ಟ. ಕಾರಣ ಹೆಚ್ಚಿನವರು ಅವಿದ್ಯಾವಂತರು. ಸರ್ಕಾರಿ ಸೌಲಭ್ಯಗಳೇ ಗೊತ್ತಾಗುವುದಿಲ್ಲ. ಪಟ್ಟಣದ ಹತ್ತಿರ ಇರುವವರಿಗೂ ಸೌಲಭ್ಯದ ಕೊರತೆ ಇದೆ. ಕೆಲವರು ಮಾತ್ರ ಸರ್ಕಾರಿ ಸೌಲಭ್ಯ ಪಡೆದಿರುತ್ತಾರೆ. ಇತ್ತೀಚಿನ ಸಮೀಕ್ಷೆಯಿಂದ ತಿಳಿದುಬಂದಿರುವ ಅಂಶವೇನೆಂದರೆ ಬಡತನ, ದಿನೇ ದಿನೇ ಹೆಚ್ಚಾಗುತ್ತಿದೆ. ಅವರಿಗೆ ಶಿಕ್ಷಣದ ಸೌಲಭ್ಯದ ಕೊರತೆ, ಸರ್ಕಾರದ ಕಾನೂನುಗಳ ಬಗ್ಗೆ ಅಜ್ಞಾನ, ಭೂಮಿ ಇಲ್ಲದಿರುವಿಕೆ, ಸರ್ಕಾರಿಯಂತ್ರ ಮತ್ತು ರಾಜಕೀಯದಲ್ಲಿ ಅವಕಾಶಗಳು ಕಡಿಮೆ ಇರುವಿಕೆ, ಸಾಮಾಜಿಕ ಉಪಚಾರ ಕಡಿಮೆ, ವೈದ್ಯಕೀಯ ಸೌಲಭ್ಯಗಳ ಕೊರತೆ, ಹಣಕಾಸು ಸಂಸ್ಥೆಗಳ ಕೊರತೆ ಹಾಗೂ ಇವರಲ್ಲಿಯೂ ಕೆಲವರು ಸಂಪ್ರದಾಯವಾದಿಗಳು ಮತ್ತು ಕೆಟ್ಟ ಚಟಗಳಿಗೆ ಬಲಿಯಾಗಿರುವುದನ್ನು ಕಾಣಬಹುದು. ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿದಾಗ ಇವರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ತರಲು ಸಾಧ್ಯ. ಇತ್ತೀಚೆಗೆ ಇವರಿಗೆ ಮುಖ್ಯ ಸಮಸ್ಯೆ ತಮ್ಮ ಐಡೆಂಟಿಟಿಯದಾಗುತ್ತಿದೆ. ಇವರಲ್ಲಿ ಮೈಸೂರಿನಿಂದ ಕೋಲಾರ, ಬೆಂಗಳೂರು ಇತರೆ ಕಡೆ ವಲಸೆ ಹೋದವರಿಗೆ ಸ್ಥಳೀಯರು ಸೂಚಿಸಿದ ಪೂಸಲು ಜಾತಿಯಲ್ಲಿಯೇ ಮುಂದುವರಿದರು. ಹೀಗಾಗಿ ಕೋಲಾರ ಜಿಲ್ಲೆಯ ಅಧಿಕಾರಿಗಳು ಇವರಿಗೆ ಸೋಲಿಗ ಪರಿಶಿಷ್ಟ ಪಂಗಡದ ಪ್ರಮಾಣಪತ್ರವನ್ನು ನೀಡಲು ತಿರಸ್ಕರಿಸುತ್ತಾರೆ. ಕಾರಣ ಸೋಲಿಗರು ಮೈಸೂರಿಗೆ ಸಂಬಂಧಪಟ್ಟಿದ್ದು ಇಲ್ಲಿಯವರಿಗೆ ಆ ಪ್ರಮಾಣಪತ್ರ ನೀಡಲಾಗುವುದಿಲ್ಲ ಎಂದು ತಿಳಿಸುತ್ತಾರೆ. ಬೆಂಗಳೂರು ಜಿಲ್ಲಾ ಸೋಲಿಗರ ಸಂಘದ ಪ್ರಸ್ತುತ ಅಧ್ಯಕ್ಷ ಎಂ ಶ್ರೀರಾಮ ಅವರು ಸೋಲಿಗರು ಇರುವ ಸ್ಥಳಗಳಲ್ಲಿ ತಾಲ್ಲೂಕು ಅಧ್ಯಕ್ಷರುಗಳನ್ನು ನೇಮಿಸಿದ್ದಾರೆ. ಸಂಘವು ಸೋಲಿಗರ ಅಭಿವೃದ್ಧಿಗೆ ಬಹಳಷ್ಟು ಶ್ರಮವಹಿಸುತ್ತಿದೆ. ಸೋಲಿಗರ ಸಮೀಕ್ಷೆಯನ್ನು ಸಹ ನಡೆಸುತ್ತಿದೆ. ಸಮಾಜ ಕಲ್ಯಾಣ ಸಚಿವರಾಗಿದ್ದ ಶ್ರೀ ಕಾಗೋಡು ತಿಮ್ಮಪ್ಪನವರಿಗೆ ಕೋಲಾರ ಜಿಲ್ಲೆಯ ಸೋಲಿಗರ ಸಮಸ್ಯೆಯನ್ನು ಎಲ್ಲಾ ದಾಖಲಾತಿಗಳೊಂದಿಗೆ ಮನವಿಯನ್ನು ಸಲ್ಲಿಸಲಾಗಿದೆ. ಅವರು ಸೂಕ್ತ ಪರಿಹಾರ ಒದಗಿಸುವುದಾಗಿ ಈ ಹಿಂದೆಯೆ ತಿಳಿಸಿರುತ್ತಾರೆ.

ಪರಿಶಿಷ್ಟ ಬುಡಕಟ್ಟು ಎಂದು ಪರಿಗಣಿಸಲ್ಪಟ್ಟಿರುವ ಈ ಶೋಷಿತ ಜನಾಂಗವನ್ನು ಆರ್ಥಿಕವಾಗಿ ಸದೃಢಗೊಳಿಸಲು ಮತ್ತು ಸಮಾಜದ ಮುಖ್ಯವಾಹಿನಿಗೆ ತರಲು ದೃಢಸಂಕಲ್ಪ, ಸರ್ಕಾರದ ಸಮಾಜ ಸಂಸ್ಥೆಗಳ ವತಿಯಿಂದ ಅತ್ಯಂತ ಅಪೇಕ್ಷಣೀಯ. ಸರ್ಕಾರ ಈ ವರ್ಗಕ್ಕೆ ಕೊಡಲ್ಪಟ್ಟಿರುವ ಎಲ್ಲಾ ಸೌಲಭ್ಯ, ಸವಲತ್ತು ಈ ವರ್ಗದ ಫಲಾನುಭವಿಗಳಿಗೆ ತೊಂದರೆಯಿಲ್ಲದೆ ದೊರಕುವಂತೆ ಮಾಡಬೇಕಾಗಿರುವುದು ಅಗತ್ಯ.

೭

ಅರಳಲಿ ವನಸುಮ, ಹರಡಲಿ ಸರ್ವಸತ್‌ಗುಣದ ಘಮ

ರೇವಣ್ಣ

[ಗ್ರಾಮೀಣ ಬುಡಕಟ್ಟಿನ ಶ್ರೀ ರೇವಣ್ಣ ಅವರು ಗಿರಿಜನ ಆಶ್ರಮ ಶಾಲೆಯಲ್ಲಿ ಗೌರವಧನ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತ ತಮ್ಮ ಅನುಭವಗಳನ್ನು ಆದಿಮ ಬುಡಕಟ್ಟಿನ ಶ್ರೀ ಮಾರ ಅವರ ಸಹಕಾರದೊಂದಿಗೆ ಸಾಕಾರಗೊಳಿಸಲು ಪ್ರಯತ್ನಿಸಿದ್ದಾರೆ. ಗಿರಿಜನರೊಂದಿಗಿನ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತ ಬುಡಕಟ್ಟಿನ ಸಾಂಸ್ಕೃತಿಕ ಲೋಕವನ್ನು ಇಲ್ಲಿ ಅನಾವರಣಗೊಳಿಸಿದ್ದಾರೆ.]

ಕೋಮಲ ಹೃದಯದ ವೈಶಾಲ್ಯತೆ, ಸರಳ ದೃಷ್ಟಿಕೋನ, ಮುಗ್ಧ ಮನಸ್ಸು, ನೆನ್ನೆ ನಾಳೆಗಳ ಚಿಂತೆಯಿಲ್ಲ, ಭರವಸೆಯ ಬದುಕಿನ ಭಯವಿಲ್ಲ. ಮತ್ತೊಬ್ಬರಿಗೆ ಕೇಡನ್ನು ಬಯಸುವ ಕ್ರೂರತೆಯಿಲ್ಲ. ಇದ್ದುದ್ದರಲ್ಲೇ ಸಂತೃಪ್ತಿಗೊಳ್ಳುವ ಮತ್ತು ಹಂಚಿ ತಿನ್ನುವ ಸಹಕಾರ ಮನೋಭಾವನೆ, ಇವುಗಳಲ್ಲಿ ಕೇವಲ ಒಂದೊಂದು ಗುಣಗಳನ್ನು ಮಾತ್ರ ನಾಗರೀಕರು ಎನಿಸಿಕೊಂಡಿರುವ ನಮ್ಮ ಸಮಾಜದಲ್ಲಿ ನಾವುಗಳು ಅಲ್ಲಲ್ಲಿ ಕಾಣುತ್ತೇವೆ.

ಆದರೆ ಶಿಕ್ಷಣ, ನಾಗರೀಕ ಸಮಾಜದ ಅರಿವು, ಇನ್ನಿತರ ಅಂತೆಕಂತೆಗಳ ಗುರುತು, ಪರಿಚಯ ಹಾಗೂ ತಿಳುವಳಿಕೆಯೇ ಇಲ್ಲದ ಅರಣ್ಯದ ನಡುವೆ ಹುಲ್ಲುಗುಡಿಸಲುಗಳಲ್ಲಿ ವಾಸಿಸುವ ಮುಗ್ಧ ಗಿರಿಜನರ ಬದುಕಿನಲ್ಲಿ ಇಷ್ಟೆಲ್ಲಾ ಸರ್ವಸತ್‌ಚಾರಿತ್ರ್ಯಗಳು ಕಣ್ಣಾರೆ ಕಂಡು, ಮನದಲ್ಲೇ ಅನುಭವಿಸಿದ ಆನಂದ ಹಾಗೂ ಅವರೊಂದಿಗಿನ ಒಡನಾಟ, ಗೌರವಾದರತೆ ಮತ್ತು ಕೃತಜ್ಞತೆಯ ಸವಿಯನ್ನು ಕೇವಲ ಆರು ತಿಂಗಳಲ್ಲಿ ಅನುಭವಿಸಿದ ಅನುಭವಾಮೃತವನ್ನು ಪದಗಳ ಚಿತ್ತಾರದಲ್ಲಿ ತೆರೆದಿಡುತ್ತಿದ್ದೇನೆ.

ಅಂದು ಸಂಜೆ ನನ್ನ ತಂದೆಯೊಡನೆ ರಾತ್ರಿ ಎಂಟು ಗಂಟೆಯ ಬಸ್ಸಿನಲ್ಲಿ ಕೋಟೆಯಿಂದ ಸುಮಾರು ನಲವತ್ತು ಕಿಮೀ ದೂರದಲ್ಲಿ ಕೇರಳ ಮುಖ್ಯರಸ್ತೆಯ ಅಂಚಿನಲ್ಲಿರುವ ಬಳ್ಳೆ ಹಾಡಿಗೆ ರಾತ್ರಿ ಸುಮಾರು ಹತ್ತು ಗಂಟೆಯ ಸಮಯದಲ್ಲಿ ಬಸ್ ನಿಲ್ದಾಣದಲ್ಲಿ ಇಳಿದೆವು. ಅರಣ್ಯ ಇಲಾಖೆಯ ಕಛೇರಿಯಲ್ಲಿ ಮಿಣುಗುಡುತ್ತಿದ್ದ ಒಂದೆರಡು ಬಲ್ಬಿನ ಲೈಟ್‌ಬೆಳಕನ್ನು ಬಿಟ್ಟರೆ ಎತ್ತನೋಡಿದರೂ ಕಗ್ಗತ್ತಲ ನಡುವೆ ಹಕ್ಕಿ ಪಕ್ಷಿಗಳ ಕೂಗು ಪ್ರಾಣಿಗಳ ಆರ್ತನಾದ. ನಮ್ಮ ತಂದೆಗೆ ಹಾಡಿಯ ಪರಿಚಯವಿದ್ದುದರಿಂದ ಅಲ್ಲಿಂದ ನಡೆದು ಶಾಲೆಗೆ ಹೋದೆವು.

ಶಾಲೆಗೆ ಮಣ್ಣಿನ ಗೋಡೆಯಿರಲಿಲ್ಲ, ಹೊರತಾಗಿ ಬಿದಿರಿನ ತಿಡಿಕೆಯಿಂದ ಸುತ್ತಲೂ ಹೆಣೆಯಲಾಗಿತ್ತು. ಬಾಗಿಲು ಸಹ ಬಿದಿರಿನ ತಡಿಕೆಯದೆ, ಹೋಗಿ ನೋಡಿದರೆ ಬೀಗ ಹಾಕಲಾಗಿತ್ತು. ನಂತರ ಪಕ್ಕದ ಗುಡಿಸಲಿನಲ್ಲಿ ಮಲಗಿದ್ದವರನ್ನು ಎಬ್ಬಿಸಿ ಶಾಲೆಯ ಶಿಕ್ಷಕರನ್ನು ಕೇಳಿದಾಗ ಅದಕ್ಕವರು "ನಂಗ ಹಾಡಿ ಸಾಲೇಲೂ ಮೇಟ್ರು ಮಲಗದು ಕಾಣಿ, ಸಾಲೆಲೂ ಅಡಿಗೆ ಮಾಡೋ ಕೃಷ್ಣನ ಮನೆ ಅಲ್ಲದ್ಹಿಗೆ ತೋರಿಸ್ತೀನಿ ಬಾ" ಎಂದು ಹೇಳಿ ನಮ್ಮನ್ನು ಅಲ್ಲೇ ಕೂರಿಸಿ ಅಡಿಗೆಯವರನ್ನು ಕರೆತಂದ. ಆತ ಬಂದು "ಓ ನೀವೇನಾ! ನಮ್ಮ ಶಾಲೆಗೆ ಬಂದಿರೋ ಹೊಸ ಮೇಷ್ಟ್ರು, ನನಗೆ ನಿನ್ನೆ ದಿವಸಾನೆ ನಂಜುಂಡಯ್ಯನವರು ನಿಮ್ಮ ಹಾಡಿ ಶಾಲೆಗೆ ಒಬ್ಬ ಹೊಸ ಮೇಷ್ಟ್ರನ್ನು ಕಳಿಸ್ತಾ ಇದ್ದೀವಿ. ಅವರ ಎಲ್ಲಾ ವ್ಯವಸ್ಥೆ ಮಾಡಿಕೊಡು ಅಂತ ಹೇಳಿದ್ರು ಎನ್ನುತ್ತಾ ನಮ್ಮ ಪರಿಚಯ ಮಾಡಿಕೊಂಡ." ಆ ರಾತ್ರಿಯಲ್ಲಿ ದಟ್ಟ ಕಾಡಿನ ನಡುವೆ ಇರುವ ತಡಿಕೆ ಶಾಲೆ ಮನೆಯಲ್ಲಿ ಕೊರೆವ ಚಳಿಯಲ್ಲಿ ಮಲಗಿದಾಗ ಏನೋ ಒಂದು ತರಹದ ಅನುಭವ, ಭಯ, ಆತಂಕ ನನ್ನಲ್ಲಿ ಕಾಡ ಹತ್ತಿತ್ತು. ಆದರೂ ಹೇಗಾದರೂ ಸರಿ ಇದ್ದೇ ಬಿಡೋಣ. ಜೊತೆಗೆ ನನ್ನ ಜನಾಂಗದ ಮಕ್ಕಳಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಬಂದಿದ್ದೀನಿ. ಏನೇ ತೊಂದರೆ ಬಂದರೂ ನಾನು ಇಲ್ಲಿ ಕೆಲಸ ಮಾಡಲೇಬೇಕು ಎಂದು ಮನಸ್ಸನ್ನು ಗಟ್ಟಿಮಾಡಿಕೊಂಡು ಉಳಿಯಲು ಇಚ್ಚಿಸಿದೆ.

ಬೆಳಗಿನಿಂದಲೇ ನನ್ನ ಶಾಲೆಯ ದಿನಚರಿ ಶುರುವಾಯಿತು. ಮೊದಮೊದಲು ಹಾಡಿಯ ಜನರಾಗಲೀ, ಮಕ್ಕಳಾಗಲೀ ನನ್ನ ಜೊತೆ ಮಾತನಾಡಲು. ನನ್ನ ಜೊತೆ ಬೆರೆಯಲು ಹಿಂಜರಿಯುತ್ತಿದ್ದರು. ಆದರೂ ಸಹ ನಾನೇ ಎಲ್ಲರನ್ನು ಪ್ರೀತಿಯಿಂದ ಸುಮ್ನೆಯಾದ್ರೂ ಮಾತಾಡಿಸೋದು, ಬೇಕು ಅಂತಲೇ ಅಕ್ಕ ಪಕ್ಕದ ಗುಡಿಸಲಿಗೆ ಹೋಗಿ ಕೂತ್ಕೊಳ್ಳೋದು, ಈ ತರಹದ ನನ್ನ ವರ್ತನೆಯಿಂದಾಗಿ ಬಹುಬೇಗ ಎಲ್ಲರೂ ಸಹ ನನಗೆ ಆತ್ಮೀಯರಾದರು.

ಆ ಹಾಡಿಯ ಯಜಮಾನರಿಗೆ ಅದೆಷ್ಟು ಗೌರವಾದರದ ಗುಣಗಳಿದ್ದವೆಂದರೆ ನಾನು ಕೇವಲ ೩೦ರ ಯುವಕನಾದರೂ ನಂಗ ಹಾಡಿ ಸಾಲೆ ಮೇಷ್ಟ್ರು ನನ್ನ ಮಕ್ಕಳಿಗೆ ಅಕ್ಷರ ಕಲಿಸಲು ಬಂದಿರೋ ಶಿಕ್ಷಕರು ಎನ್ನುವ ಮನೋಭಾವದಿಂದ ಆತ್ಮೀಯವಾಗಿ ಮಾತನಾಡಿಸೋದು, ಬೆಳಿಗ್ಗೆ, ಮದ್ಯಾಹ್ನ ಮತ್ತು ರಾತ್ರಿಯ ಪ್ರತಿನಿತ್ಯದ ಊಟೋಪಚಾರವೆಲ್ಲ ಅವರದೇ, ಮೊದಲು ನನಗೆ ಶಾಲೆಗೆ ಊಟ ತಿಂಡಿಯನ್ನು ತಂದುಕೊಟ್ಟು ನಾನು ತಿಂದು ಕೈ ತೊಳೆದ ಮೇಲೆಯೇ ಅವರು ಮನೆಗೆ ಹೋಗಿ ಊಟ ತಿಂಡಿ ಮಾಡುತ್ತಿದ್ದುದು. ತಿಂದು ತೇಗುವಷ್ಟು ಊಟ ತಿಂಡಿ, ಗೆಡ್ಡೆ ಗೆಣಸು, ಬೇಡವೆಂದರೂ ಬಿಡುತ್ತಿರಲಿಲ್ಲ. ಈ ಕಾಡಲ್ಲಿ ಅಕ್ಕಿ ಬೇಳೆ ಕೊಂಡುಕೊಳ್ಳಲು ದುಡ್ಡು ನಿಮಗೆಲ್ಲಿ ಸಿಗುತ್ತೆ, ತೊಂದರೆ ತಗೋಬೇಡಿ ಅಂತ ಹೇಳಿದ್ರೂ, ಕೇಳ್ತಾ ಇರಲಿಲ್ಲ. ನಮಗೋಸ್ಕರ ನಮ್ಮ ಮಕ್ಕಳಿಗೋಸ್ಕರ ನೀವೂ ಈ ಕಾಡಲ್ಲಿ ಬಂದು ಕಷ್ಟ ಪಡ್ತಾ ಇದ್ದೀರಾ, ನಾವು ಇಷ್ಟು ಮಾಡುವುದಕ್ಕೆ ಆಗೊಲ್ಲ ಅಂದ್ರೆ ಹೇಗೆ ಅಂತ ಹೇಳಿ ನನ್ನ ಬಾಯಿ ಮುಚ್ಚಿಸಿ ಬಿಡುತ್ತಿದ್ದರು. ನಿರಂತರವಾಗಿ ಆರು ತಿಂಗಳು ನನಗೆ ಆತಿಥ್ಯವನ್ನು ನೀಡಿದರು. ನಿಜವಾಗಲೂ ಎಂಥಾ ಆತ್ಮೀಯತೆ, ಆದರತೆ ಅವರು ಆರು

ತಿಂಗಳು ಮಾಡಿದ ಆತಿಥ್ಯವನ್ನು ನಾನು ಆರು ವರ್ಷಗಳಾದ್ರೂ ತೀರಿಸಲು ಆಗುವುದಿಲ್ಲ ವೇನೋ. ಇನ್ನು ಮಕ್ಕಳಲ್ಲಿ ಅದೆಂಥಹ ಗುರುಭಕ್ತಿ. ನಾನು ನಾಲ್ಕು ವರ್ಷಗಳ ಶಿಕ್ಷಕ ವೃತ್ತಿಯ ಅನುಭವದಲ್ಲಿ ಅಥವಾ ನನ್ನ ವಿದ್ಯಾರ್ಥಿ ಜೀವನದ ಸಮಯ ದಲ್ಲಾಗಿರಬಹುದು. ಆ ತರಹದ ಶಿಷ್ಯ ಮಿತ್ರರನ್ನು ನಾನೆಂದೂ ನೋಡಿರಲಿಲ್ಲ. ಮಕ್ಕಳಲ್ಲಿ ಎಷ್ಟೊಂದು ಆತ್ಮೀಯತೆ, ಗುರುಗಳನ್ನು ಈ ತರಹ ಮಾತನಾಡಿಸಬೇಕು. ಯಾವ ರೀತಿ ನೋಡಿಕೊಳ್ಳಬೇಕು. ಯಾವ ಬಗೆಯಲ್ಲಿ ಗೌರವಿಸಬೇಕು ಅಂತ ಆ ಕಾಡ ಕಂದಮ್ಮಗಳಿಗೆ ಹೇಳಿಕೊಟ್ಟವರಿಲ್ಲ ಆದರೂ ಸಹ ಎಲ್ಲ ಪ್ರಕೃತಿದತ್ತವಾಗಿ ಅದ್ಭುತವಾದ ವಾತಾವರಣದಲ್ಲೇ ಮೈಗೂಡಿ ಮೌನವಾಗಿಯೇ ಉಳಿದಿದೆ. ಆ ಮಕ್ಕಳ ಮನಸ್ಸು ಅರಳಿ ಸುಪ್ತ ಚಾರಿತ್ರ್ಯವನ್ನು ನನಗೆ ಘಮವಾಗಿ ಸೂಸಿದ ಆ ಕ್ಷಣಗಳು ಅದ್ಭುತ!

ನಾನು ಮಕ್ಕಳೊಂದಿಗೆ ಮಕ್ಕಳಂತೆಯೇ ಇದ್ದುದರಿಂದ ಆ ಮಕ್ಕಳು ಸಹ ನಾನಾಗಿ ಹೋಗಿದ್ದರು ಪ್ರತಿನಿತ್ಯ ತಪ್ಪದೇ ಶಾಲೆಗೆ ಬರೋರು. ಶಾಲೆ ಮುಗಿದ ನಂತರ ಕಾಡಿನೊಳಕ್ಕೆ ತಿರುಗಾಡಿಕೊಂಡು ಮೇಷ್ಟ್ರಿಗೆ ಗೆಣಸು ತಿನಿಸಿಕೊಂಡು ಬರೋಣವೆಂದು, ಬೇಡವೆಂದರೂ ನನ್ನನ್ನು ಬಿಡದೇ ಕರೆದೊಯ್ಯುತ್ತಿದ್ದರು. ಮಕ್ಕಳಂತೂ, ಕಾಡಿನ ದಾರಿಯಲ್ಲಿ ಹೋಗುವಾಗ ತುಂಬಾ ಸೂಕ್ಷ್ಮತೆಯಿಂದ ಒಂದು ಮುಳ್ಳುಕಡ್ಡಿಯು ನನಗೆ ಸೋಕದ ಹಾಗೆ ಕರೆದೊಯ್ಯುತ್ತಿದ್ದರು. ಏಯ್ ಮೇಷ್ಟ್ರಿಗೆ ಹುಣ್ಣೆ ತುಂಬ್ಕೊಳ್ಳ್ತವೆ ಅಂತ ಹೇಳಿ ದೊಡ್ಡ ರೋಜಾ ಗಿಡದ ಹೊದೆಯ ಮೇಲೆ ಮರದ ಸೊಪ್ಪು ಮತ್ತು ಹುಲ್ಲನ್ನು ಹಾಸಿ ಮೆತ್ತಗೆ ಮಾಡಿ ಮೇಲಕ್ಕೆ ಹತ್ತಿಸಿ ಕೂರಿಸುತ್ತಿದ್ದರು. ನನಗೆ ಭಯವಾಗದಂತೆ ನೋಡಿಕೊಳ್ಳಲು ಒಬ್ಬ ವಿದ್ಯಾರ್ಥಿಯನ್ನು ನನ್ನ ಜೊತೆಯಲ್ಲಿ ಇರಿಸಿ, ಗೆಡ್ಡೆ ಗೆಣಸು ಅಗೆದು ತಂದು ಸುಟ್ಟು ಮೊದಲು ನನಗೆ ಸಾಕಾಗುವಷ್ಟು ತಿನ್ನಿಸಿ ತಾವು ತಿನ್ನುತ್ತಿದ್ದರು. ನಂತರ ಪ್ರತಿ ಭಾನುವಾರ ಮತ್ತು ರಜಾದಿನಗಳಲ್ಲಿ ಪಕ್ಕದಲ್ಲೇ ಹರಿಯುತ್ತಿದ್ದ ಕಬಿನಿ ನದಿಯ ದಂಡೆಯಲ್ಲಿ ಸ್ನಾನ ಮಾಡಲು ಹೋಗುತ್ತಿದ್ದೆವು. ಬೇಡವೆಂದರೂ ಕಿತ್ತುಕೊಂಡು ಬಟ್ಟೆಹೊಗೆಯುತ್ತಿದ್ದರು. ಈಜು ಹೊಡೆಯಲು ಬರುವುದಿಲ್ಲವೆಂದರೂ ನಾವು ಕಲಿಸಿ ಕೊಡ್ತೀವಿ ಬನ್ನಿ ಸಾರ್ ಅಂತೇಳಿ ನೀರಿನೊಳಕ್ಕೆ ಎಳೆದುಕೊಂಡು ಹೋಗಿ ಎಲ್ಲರೂ ಹಿಡಿದುಕೊಂಡು ಈಜು ಕಲಿಸುವುದು. ಬೆನ್ನನ್ನು ತಿಕ್ಕಿಕೊಡುವುದು, ನಾನೇನೇ ಸಣ್ಣಪುಟ್ಟ ಕೆಲಸ ಹೇಳಿದರೂ ಬೇಸರವಿಲ್ಲದೇ ಕ್ಷಣದಲ್ಲೇ ಮುಗಿಸುತ್ತಿದ್ದರು. ಒಂದು ದಿನವೂ ಸಹ ಸಣ್ಣಮಾತನ್ನಾದರೂ ತಿರುಗಿ ನನ್ನ ಜೊತೆ ಮಾತನಾಡಿರಲಿಲ್ಲ. ರಾತ್ರಿ ಶಾಲೆಯಲ್ಲಿ ಮಲಗುವಾಗಲಂತೂ ನನ್ನನ್ನು ಮಧ್ಯದಲ್ಲಿ ಮಲಗಿಸಿ ಎಲ್ಲ ಮಕ್ಕಳು ನನ್ನ ಸುತ್ತ ಮಲಗಿಕೊಳ್ಳುತ್ತಿದ್ದರು. ಮಲಗುವಾಗ ಪ್ರತಿರಾತ್ರಿ ಒಂದು ಕಥೆ ಹೇಳಿಸಿಕೊಂಡೆ ಮಲಗುತ್ತಿದ್ದರು. ನಂತರ ಚಳಿಗಾಲದ ಸಮಯದಲ್ಲಿ ಬೆಳಿಗ್ಗೆ ೫ ಗಂಟೆಗೆ ಎದ್ದು ಬೆಂಕಿ ಹಚ್ಚಿ ನನ್ನನ್ನು ಎಬ್ಬಿಸಿ ಬೆಂಕಿ ಕಾಯಿಸುವುದು, ಹೀಗೆ ಆ ಮಕ್ಕಳು ಬುದ್ಧಿವಂತಿಕೆಯಲ್ಲಿ ಆಟೋಟಗಳಲ್ಲಿ ಓದವುದರಲ್ಲೂ ಸಹ ಮುಂದಿದ್ದರು. ಆ ಮಕ್ಕಳು

ಸ್ನೇಹಿತರಾಗಿ, ಒಡನಾಡಿಗಳಾಗಿ, ನನ್ನೊಡನಿದ್ದು ಸಹಕರಿಸಿದ ಆ ವಿದ್ಯಾರ್ಥಿಮಿತ್ರರಲ್ಲಿ ನಯ ವಿನಯ ತುಂಬಿ ತುಳುಕುತ್ತಿತ್ತು.

ಆ ಮುಗ್ಧ ವನವಾಸಿಗಳಲ್ಲಿ ನಾ ಕಂಡ ಮತ್ತೊಂದು ಅದ್ಭುತ ಗುಣವೆಂದರೆ ಹಂಚಿ ತಿನ್ನುವ ಮನೋಭಾವ. "ಕಾಗೆಯೊಂದಗುಳು ಕಂಡರೆ, ಕೂಗಿ ಕರೆವುದಯ್ಯ ತನ್ನ ಬಳಗವನ್ನು" ಎನ್ನುವ ಬಸವಣ್ಣನವರ ವಚನಾಮೃತದ ನುಡಿಯಂತೆ ನನ್ನ ಜನ ಕಾಗೆ ಬಳಗವೇ ಸರಿ. ಯಾಕೆಂದರೆ ತನ್ನಲ್ಲಿರುವ ಯಾವುದೇ ತರಹದ ವಸ್ತುವಾಗಲೀ, ಕಾಡಿನಿಂದ ತಂದ ಗೆಡ್ಡೆ ಗೆಣಸು, ಜೇನು, ಮಾಂಸ ಮತ್ತು ಯಾವುದೇ ರೀತಿಯ ಆಹಾರ ಪದಾರ್ಥ ಅಥವಾ ಮನೆಯಲ್ಲಿ ಏನಾದರೂ ವಿಶೇಷವಾದ ಊಟ ತಿಂಡಿಯಾಗಿರಬಹುದು ತನ್ನ ಹಾಡಿಯ ಸಮುದಾಯ ದವರಿಗೆಲ್ಲ ಹಂಚಬೇಕು. ನಮ್ಮ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಹಮ್ಮಿಕೊಂಡಿದ್ದ ದಿನ ಮಕ್ಕಳ ಪೋಷಕರಿಗೆಲ್ಲ ಉಪಹಾರದ ವ್ಯವಸ್ಥೆ ಮಾಡಿಸಲಾಗಿತ್ತು. ಬಂದಿದ್ದ ಪೋಷಕರಿಗೆಲ್ಲಾ ತಿಂಡಿಯನ್ನು ಬಡಿಸಲಾಯಿತು. ಎಲ್ಲರೂ ಸಹ ಮೊದಲು ಬಡಿಸಿದ ತಿಂಡಿಯನ್ನು ತಿಂದು, ಎರನಡೇ ಸಲ ಬಡಿಸಿದ ತಿಂಡಿಯನ್ನು ಎಲೆಯಲ್ಲಿ ಮುದುರಿಸಿಕೊಂಡು ಒಂದೊಂದು ತಿಂಡಿಯ ಪೊಟ್ಟಣವನ್ನು ಬಟ್ಟೆಯಲ್ಲಿ ಕಟ್ಟಿಕೊಂಡಿದ್ದರು. ಅದನ್ನು ನೋಡಿದ ನಮ್ಮ ಶಾಲೆಯ ಶಿಕ್ಷಕ ಮಿತ್ರರೊಬ್ಬರು ಇಲ್ಲೇ ತಿನ್ನಿ ಅಂದ್ರೆ ಮನೆಗೆಲ್ಲಾ ತೆಗೆದುಕೊಂಡು ಹೋಗ್ತಾ ಇದ್ದೀರಲ್ಲ ಅಂದಿದ್ದಕ್ಕೆ, ಕೆಲವು ತಾಯಂದಿರು ಮನೇಲಿ ನನ್ನ ಮಕ್ಕಳಿದ್ದಾರೆ, ನನ್ನ ಗಂಡ ಇದ್ದಾನೆ, ನನ್ನ ತಮ್ಮ ಇದ್ದಾನೆ, ಪಾಪ ಅವರೆಲ್ಲಾ ಹಸಿದು ಕೊಂಡಿದ್ದಾರೆ. ನಾನೊಬ್ಬಳು ಹೊಟ್ಟೆ ತುಂಬಾ ತಿಂದುಬಿಟ್ಟು ಹೋದ್ರೆ ಸಾಕ? ಅದಕ್ಕೋಸ್ಕರ ಅವರಿಗೂ ಸ್ವಲ್ಪ ಸ್ವಲ್ಪ ತೆಗೆದುಕೊಂಡಿದ್ದೀವಿ ಎಂದರು.

ನಿಜವಾಗ್ಲೂ ನಾಗರೀಕರಾದ ನಾವುಗಳು ಯೋಚನೆ ಮಾಡಬೇಕಾದ ವಿಚಾರ ಇದು. ನಾವುಗಳು ಯಾವುದೇ ಸಮಾರಂಭ, ಭೋಜನಕೂಟಕ್ಕೆ ಹೋಗಲಿ ಹೊಟ್ಟೆ ಬಿರಿಯುವಷ್ಟು ತಿಂದರೂ ನಮ್ಮವರ ಬಗ್ಗೆ ಯೋಚಿಸುವುದೇ ಇಲ್ಲ. ಸಂತೃಪ್ತಿಯಾಗುವಷ್ಟು ತಿಂದು ತೇಗಿ ಹೊರಗೆದ್ದು ಬರುತ್ತೇವೆ. ನಮ್ಮವರಿಗಾಗಿ ತೆಗೆದುಕೊಂಡು ಹೋಗುವುದು ಬೇಡ. ಊಟ, ತಿಂಡಿ ಮಾಡುವಾಗಲಾದರೂ "ಓ ದೇವರೇ ನಾನು ಈ ಸಮಯದಲ್ಲಿ ಆಹಾರ ಸೇವಿಸುತ್ತಿದ್ದೇನೆ. ಅದೇ ರೀತಿ ಇಡೀ ಜಗತ್ತಿನಲ್ಲಿರುವ ಸರ್ವಜೀವರಾಶಿಗಳಿಗೂ, ಆಹಾರ ಸಿಗುವಂತೆ ಮಾಡು ತಂದೆ; ಅಂತನಾದ್ರೂ ಬೇಡಿಕೊಳ್ಳುತ್ತೇವಾ? ಇಲ್ಲ. ಆದರೆ ವನಸಿರಿಯ ಮಡಿಲಲ್ಲಿ ಬೆಳೆದ ಮುಗ್ಧ ಜನರಲ್ಲಿ ಬೇಡಿಕೊಳ್ಳುವುದೇನು? ಯಾವುದೇ ಹಬ್ಬ, ಜಾತ್ರೆ, ಭೋಜನಕೂಟ ಅಥವಾ ಮದುವೆ ಸಮಾರಂಭಗಳಿಗೆ ಹೋಗಲಿ ತಾನು ತಿಂದು ತನ್ನವರಿಗಾಗಿ ಒಂದು ಪಾಲು ತೆಗೆದುಕೊಂಡು ಹೋಗಿ ಹಂಚಿ ತಿನ್ನುವ ಪರಿಪಾಠ ಹಾಸುಹೊಕ್ಕಾಗಿದೆ.

ನಾನು ಆ ಶಾಲೆಯನ್ನು ಬಿಟ್ಟು ಇಲ್ಲಿಗೆ ನಾಲ್ಕು ವರ್ಷಗಳಾಯಿತು. ಆ ಹಾಡಿಯ ಜನ ನನ್ನನ್ನು ಎಲ್ಲೇ ಕಾಣಲಿ ಗೌರವದಿಂದ ಮಾತನಾಡಿಸಿ ಮತ್ತೇ ಯಾವಾಗ ನಮ್ಮ ಹಾಡಿ

ಶಾಲೆಗೆ ಬರ್ತೀರ ಅಂತ ಕೇಳ್ತಾನೇ ಇರ್ತಾರೆ. ಯಾಕಂದ್ರೆ ನಂಬಿಕೆ ನನ್ನ ಜನರ ಅಪೂರ್ವ ಸಂಪತ್ತು. ನಂಬಿದವರನ್ನು ಮರೆಯದೇ ನೆನೆಯುವ, ಕೈಬಿಡದೇ ಕಾಪಾಡುವ ಗುಣವುಳ್ಳವರು.

ನಾನೂ ಸಹ ಒಬ್ಬ ಆದಿವಾಸಿ ವಿದ್ಯಾರ್ಥಿಯಾದರೂ ನಾನು ಹುಟ್ಟಿದ್ದು, ಬೆಳೆದದ್ದೆಲ್ಲಾ ಗ್ರಾಮೀಣ ಪ್ರದೇಶದಲ್ಲೇ. ಹಾಗಾಗಿ ನಮ್ಮ ಹಬ್ಬ ಹರಿದಿನ ಮದುವೆ ಮುಂಜಿ ಉಡುಗೆ ತೊಡುಗೆ ರೀತಿ ನೀತಿಗಳೆಲ್ಲಾ ಗ್ರಾಮೀಣ ಜನರ ಪದ್ಧತಿಗಳಂತೆಯೇ ರೂಢಿಯಲ್ಲಿವೆ. ಹಾಗಾಗಿ ನನ್ನ ಜನಾಂಗದವರಲ್ಲಿ ಇಷ್ಟೆಲ್ಲಾ ಚಾರಿತ್ರ್ಯಗಳಿದೆ ಎಂದು ತಿಳಿದದ್ದು ಅವರೊಡನೆ ಬೆರೆತಾಗಲೇ ಹಾಗಾಗಿ ಆ ಮುಗ್ಧ ವನಕುಸುಮಗಳು ಅರಳಿ ಎಲ್ಲರನ್ನೂ ಸರ್ವಚಾರಿತ್ರ್ಯಗಳು ಮೊಳೆಯುವಂತೆ ಮಾಡಲಿ ಹಾಗೂ ವನಸಿರಿಯ ಗಂಧವನ್ನು ಎಲ್ಲೆಡೆ ಹರಡಲಿ ಎಂದು ಪ್ರಕೃತಿ ಮಾತೆಯಲ್ಲಿ ಬೇಡಿಕೊಳ್ಳುತ್ತೇವೆ.

ಸಹಕಾರ : ಶ್ರೀ ಮಾರ, ಗೌರವಧನ ಶಿಕ್ಷಕರು, ಜಕ್ಕಹಳ್ಳಿ ಕಾಲೋನಿ, ಬೀರಂಬಳ್ಳಿ ಅಂಚೆ, ಹೆಗ್ಗಡದೇವನಕೋಟೆ ತಾಲೂಕು, ಮೈಸೂರು ಜಿಲ್ಲೆ

೮

ಕೃಷ್ಣಗೊಲ್ಲರ ಕಥನ ಕಾವ್ಯಗಳು: ಛಂದಸ್ಸು ಮತ್ತು ಶೈಲಿ

ಡಾ ಎಸ್ ಎಸ್ ಅಂಗಡಿ

[ಡಾ ಎಸ್ ಎಸ್ ಅಂಗಡಿ ಅವರು ಕನ್ನಡ ವಿಶ್ವವಿದ್ಯಾಲಯದ ಯುವ ಭಾಷಾ ತಜ್ಞರು. ಅವರು ಡಾ ಕೆ ಎಂ ಮೇತ್ರಿ ಅವರು ಸಂಪಾದಿಸಿದ ಕೃಷ್ಣಗೊಲ್ಲರ ಕಥನ ಕಾವ್ಯಗಳು ಎಂಬೀ ಕೃತಿಯಲ್ಲಿಯ ಛಂದಸ್ಸು ಮತ್ತು ಶೈಲಿಯನ್ನು ವೈಜ್ಞಾನಿಕವಾಗಿ ಮತ್ತು ಸೊಗಸಾಗಿ ಇಲ್ಲಿ ಪರಿಚಯಿಸಿದ್ದಾರೆ.]

ಸಾಹಿತ್ಯ, ಸಂಸ್ಕೃತಿಯ ಅಭಿವ್ಯಕ್ತಿ. ಸಾಹಿತ್ಯಕ್ಕೆ ಧ್ವನ್ಯಾತ್ಮಕವಾದ ಭಾಷೆ ಮಾಧ್ಯಮವಾಗಿರುವುದರಿಂದ ಅದು ಮೂಲತಃ ವಾಚಿಕ/ಶಾಬ್ದಿಕ ಕಲೆ. ಮೂಲತಃ ವಾಚಿಕ/ಕಲೆಯಾಗಿರುವ ಜನಪದ ಸಾಹಿತ್ಯವನ್ನು ಬರಹಕ್ಕೂ ಇಳಿಸಬಹುದು. ಆದರೆ ಅದು ಜನಪದ ಸಾಹಿತ್ಯವಾಗಬೇಕಾದರೆ ಸಮಗ್ರ ಜನಪದದ ಅಭಿವ್ಯಕ್ತಿಯಾಗಬೇಕು. ಜನಪದ ಸಾಹಿತ್ಯವೆಂಬುದು ವ್ಯಕ್ತಿ ನಿಷ್ಠವಲ್ಲ; ಅದು ಜನಪದ ಜನಜೀವನದ ವಾಚಿಕರೂಪದ ಸಮಷ್ಟಿ ಅಭಿವ್ಯಕ್ತಿ. ಅದರ ಉಗಮ ಸ್ಥಾನ ವ್ಯಕ್ತಿಯಲ್ಲ, ಜನಪದ. ಆದುದರಿಂದ ಜನಪದ ಸಾಹಿತ್ಯವೆಂಬುದು ಒಂದು ವಿಶಿಷ್ಟ ಜನಪದದ ಸಮಷ್ಟಿ ಕ್ರಿಯೆಯಾಗಿದೆ.

ಜನಪದರ ವಾಚಿಕ ಕಲೆಯಲ್ಲಿ ಇರುವ ಪದ ವಿನ್ಯಾಸ ಕ್ರಮವೇ ಜನಪದ ಸಾಹಿತ್ಯ ಶೈಲಿ. ಅದು ಭಾಷಿಕ ಸಂದರ್ಭ ಹಾಗೂ ಸಾಹಿತ್ಯದ ಪಾಠಕ್ಕೆ ತಕ್ಕಂತೆ ಜನಪದರ ದೈನಂದಿನ ವ್ಯಾವಹಾರಿಕ ಭಾಷೆಯಲ್ಲಿಯ ಪದವಿನ್ಯಾಸ ಕ್ರಮವನ್ನು ಬದಲಾಯಿಸುವುದರ ಮೂಲಕ ಜನಪದ ಶೈಲಿ ಉಂಟಾಗುತ್ತದೆ. ಜನಪದ ಸಾಹಿತ್ಯದ ಸ್ವರೂಪವನ್ನು ಅವಲಂಬಿಸಿ ಜನಪದ ಭಾಷೆ ಭಿನ್ನವಾಗಿರುತ್ತದೆ. ಈ ಭಿನ್ನತೆಯಿಂದಾಗಿ ಜನಪದ ಸಾಹಿತ್ಯ ಶೈಲಿಯೂ ಭಿನ್ನಗೊಳ್ಳುತ್ತದೆ.

ಜನಪದ ಸಾಹಿತ್ಯದ ಶೈಲಿಯನ್ನು ರೂಪಿಸುವಲ್ಲಿ ಪ್ರಮುಖವಾಗಿ ಪ್ರಾಸ, ಅನುಪ್ರಾಸ, ಧ್ವನ್ಯನುಕರಣೆ, ಛಂದೋಗತಿ, ಲಯ ಮತ್ತು ಪದರಚನೆ ಮೊದಲಾದ ಅಂಶಗಳು ಕಾರಣವಾಗುತ್ತವೆ. ಕನ್ನಡ ಜನಪದ ಮತ್ತು ಬುಡಕಟ್ಟು ಸಾಹಿತ್ಯದಲ್ಲಿ ಈ ಅಂಶಗಳು ಶೈಲಿಯನ್ನು ನಿರೂಪಿಸುವಲ್ಲಿ ಹೇಗೆ ಕ್ರಿಯಾತ್ಮಕವಾಗಿವೆ ಎಂಬುದನ್ನು ಕೃಷ್ಣಗೊಲ್ಲರ ಕಥನ ಕಾವ್ಯಗಳನ್ನು ಕೇಂದ್ರವಾಗಿಟ್ಟುಕೊಂಡು ಸೋದಾಹರಣವಾಗಿ ವಿವೇಚಿಸುವ ಪ್ರಯತ್ನ

ಮಾಡಲಾಗಿದೆ.* ಕೃಷ್ಣಗೊಲ್ಲರು ಮೂಲತಃ ಕಾಡುಗೊಲ್ಲರು. ಕಾಡಿನ ಮೂಲದ ಸಂಸ್ಕೃತಿಯನ್ನು ತನ್ನೊಡಲದಲ್ಲಿ ಪೋಷಿಸಿಕೊಂಡು ನಿಸರ್ಗಮಯವಾಗಿ ಬದುಕುತ್ತಿದ್ದಾರೆ. ಸಾಹಿತ್ಯ, ಸಂಸ್ಕೃತಿಯ ದೃಷ್ಟಿಯಿಂದ ಅವರ ಕಥನ ಕಾವ್ಯಗಳು ಮಹತ್ವ ಪೂರ್ಣವಾಗಿವೆ. ಅವರ ಕಥನ ಕಾವ್ಯಗಳು ಅವರ ಸಾಂಸ್ಕೃತಿಕ ನಾಯಕರಿಗೆ ಸಂಬಂಧಿಸಿವೆ.

ಕೃಷ್ಣಗೊಲ್ಲರ ಕಥನಗಳಲ್ಲಿ ಅನುಪ್ರಾಸಕ್ಕೆ ಹೆಚ್ಚು ಮಹತ್ವವಿದ್ದರೂ ಅಂತ್ಯಪ್ರಾಸ ಕಾವ್ಯದ ಸೊಗಸನ್ನು ಹೆಚ್ಚಿಸಿದೆ. ಮೂರು, ನಾಲ್ಕು ಮಾತ್ರೆಯ ಭಾಮಿನಿಯ ಲಯ, ಕಾವ್ಯದ ಭಾವ ಸೌಂದರ್ಯಕ್ಕೆ ಕಾರಣವಾಗಿದೆ.

ಎತ್ತೆ ಸತ್ತರು ನಾವೇನೆ	೩+೪+೪ ಮು
ಎತ್ತು ತಿರುಗ ಲಾಳೇವು	೩+೪+೪ ಮು
ಅವು ಸತ್ತರು ನಾವು	೩+೪+೩
ಅವು ತಿರುಗುಲಾಳೇವು	೩+೩+೪ ಮು
ಹೋರಿ ಸತ್ತರು ನಾವು	೩+೪+೩
	(-ಎತ್ತಯ್ಯನ ಕಾವ್ಯ)

ಕಾವ್ಯದಲ್ಲಿ ಪ್ರಾಸಗಳು ಸಹಜವಾಗಿ ಬಂದಿವೆಯೇ ಹೊರತು ಪ್ರಾಸಕ್ಕಾಗಿ ಪ್ರಾಸವಲ್ಲ. ಚಿತ್ತಯ್ಯನ ಕಾವ್ಯ ತ್ರಿಪದಿಯ ಲಯದಲ್ಲಿ ಸಾಗಿದೆ. 'ಕಗ್ಗವ ನಿಮ್ಮದಯ್ಯ ಕಾಳಗದ ಸಿಬ್ಬಂದಿಗೆದ್ದು ಬಂದ' ಎಂಬ ಪಲ್ಲವಿ ಪ್ರತಿ ಚರಣದ ನಂತರ ಆವರ್ತವಾಗುತ್ತದೆ. ತ್ರಿಪದಿ ಕಥನಗೀತಕ್ಕೆ ಅದು ಹೊಂದಿಕೆಯಾಗುತ್ತದೆ.

ಎದ್ದೆನೆ ನೆನೆದೇವು ಮುದ್ದು ಮೂಡಲಗಿರಿಯ ನಾವು	ವಿ ವಿ ಬ್ರ ವಿ ಬ್ರ ಬ್ರ
ಮುದ್ರೆ ನಾಮದ ಒಡಿಯಾನ | ತಿಮ್ಮಯ್ಯನ	ಬ್ರ ವಿ ವಿ ವಿ+ಮು
ಮೊಗ್ಗರಳೊತ್ತಿಲಿ ನೆನೆದೇವೋ || ಕಗ್ಗವ ||	ವಿ ಬ್ರ ವಿ+ಮು
	(-ಚಿತ್ತಯ್ಯನ ಕಾವ್ಯ)

ತ್ರಿಪದಿಯ ಲಯದಲ್ಲಿ ಮತ್ತು ಗಣ ಸಂಯೋಜನೆಯಲ್ಲಿ ಶಿಥಿಲತೆಯಿದೆ. ಈ ರೀತಿಯ ರಚನೆಯಿಂದ ತ್ರಿಪದಿಗೆ ಹೆಚ್ಚಿನ ಓಟ ಉಂಟಾಗುತ್ತದೆ. ತ್ರಿಪದಿಯ ಮೊದಲಿನ ಎರಡು ಚರಣಗಳ ವಿ ವಿ ಬ್ರ ವಿ ಬ್ರ ಬ್ರ | ವಿ ಬ್ರ ವಿ ಮು ಈ ಲಯದ ಕೆಲವು ಚರಣಗಳನ್ನು ಪ್ರಾಸದ ಬಳಿವಿಡಿದು ಪವಣಿಸಿ ಮಾಡಿಕೊಂಡ ರಚನೆ:

---

*(ಡಾ ಕೆ ಎಂ ಮೈತ್ರಿ ಅವರು ಕೃಷ್ಣಗೊಲ್ಲರ ಕಥನ ಕಾವ್ಯಗಳನ್ನು ಸಂಪಾದಿಸಿದ್ದಾರೆ. ೨೦೦೦, ಕನ್ನಡ ವಿಶ್ವವಿದ್ಯಾಲಯ, ಹಂಪಿ)

ಹೋರಿ ಮಾರಿದಾವು ಆರ್ನೊನ್ನುಐದಾವೆ	ವಿ ವಿ ಬ್ರ ವಿ ಬ್ರ ವಿ
ತಾಯಮ್ಮ ತಾರೇ ಕೈಸಂಚಿ | ಏಳಾಜಂಬಿ	ವಿ ಬ್ರ ವಿ ವಿ ಮು
ಈರಣ್ಣ ಗಲುಗು ತರಬೇಕು ||	ವಿ ಬ್ರ ವಿ
ಅತ್ತಲಿದ್ದಲು ಬಂದು ಇತ್ತಲ ಕೆಬ್ಬುಣ ಬಂದು	ವಿ ವಿ ಬ್ರ ವಿ ವಿ ಬ್ರ
ಚಿಕ್ಕನೇ ಮರಿಯಣ್ಣ ತಿದಿವೂದಿ | ಶೆಮ್ಮಿಟಗ್ಗಿಡದು	ವಿ ವಿ ವಿ ಬ್ರ ವಿ

ಒಮ್ಮೊಮ್ಮೆ ಕೊನೆಯ ಚರಣದಲ್ಲಿ ದೃಷ್ಟಾಂತ ಮಾರ್ಮಿಕವಾಗಿ ಮೂಡಬಹುದು ಹೀಗೆ:

ಎತ್ತುಗಳು ಸೆರೆವಯ್ದ ಎಮ್ಮಿಗಳು ಸೆರೆವಯ್ದು
ಹೆತ್ತ ಬಾಲಾರುನ ಸೇರೆವಯ್ದ | ತುರುಕಾರ
ಉಪ್ಪರಿಗೆ ಇಂದು ಉರಿಯಾಲೆ || ತಂದಾನ್ನ ತಾನ ||

(-ನಿಂಗಣ್ಣನ ಕಾವ್ಯ)

ಲಯ ಮತ್ತು ಪ್ರಾಸಗಳಿಗೆ ಅನುಗುಣವಾಗಿ ಹೆಣೆದುಕೊಂಡ ಭಾವವನ್ನು ಬೆಳಗುವ ಸುಂದರವಾದ ಹಾಡುಗಳು ಇಲ್ಲಿವೆ.

ಹೆತ್ತು ವಮ್ಮುನ ಸೀರೆ ಗಕ್ಕಾವೆ ಹರುದಾನೆ
ಕುಕ್ಕೂಸಿ ಪುಳ್ಳೆ ಮುರುದಾನೆ || ಡಿಮಿಡಿಮಿ ||
ಕುಕ್ಕೂಡಿ ಪುಳ್ಳೆ ಮುರುದು ಅಂಬು ಮಾಡಿ
ಹೋಳಾ ಬೀಳಾ ಅವರ ಹೊಡೆದಾನೆ || ಡಿಮಿಡಿಮಿ ||

(-ಅಭಿಮನ್ಯುವಿನ ಕಾಳಗ)

ವಿಷ್ಣುಗಣ ರಚನೆಗೂ ಕನ್ನಡ ಭಾಷೆಗೂ ಒಂದು ಸಹಜ ಸಂಬಂಧವಿದೆ. ಕನ್ನಡ ಪದ ರಚನೆ ವಿಷ್ಣುಬಂಧಕ್ಕೆ ಒಗ್ಗುತ್ತದೆ. ಇಂತಹ ಕಥನ ಕಾವ್ಯಗಳಲ್ಲಿ ಅಕ್ಷರಗಳ ಪುನರಾವೃತ್ತಿ ಹೆಚ್ಚು. ಭಾವಘಟ್ಟಗಳನ್ನು ಪರಿಣಾಮಕಾರಿಯಾಗಿ ಹೇಳಲು ಅವು ತುಂಬ ನೆರವಾಗುತ್ತವೆ. ಈ ಕಾವ್ಯದಲ್ಲಿ ಬರುವ ಆಕೃತಿಮಾಗಳು ಹಾಗೂ ಅವುಗಳ ಸಂಯೋಜನೆಯ ರೀತಿ ವಿನ್ಯಾಸದಿಂದಲೂ ಸಾಹಿತ್ಯ ಶೈಲಿ ರೂಪುಗೊಂಡಿದೆ. ಇದು ಶೈಲಿಯ ಇನ್ನೊಂದು ಮುಖ. ಜೀವನದ ಅತ್ಯಂತ ಸೂಕ್ಷ್ಮಸಂವೇದನೆಗಳನ್ನು ಅತ್ಯಂತ ಸರಳವಾದ ಬಿಡಿ ಬಿಡಿ ಪದಗಳ ಮೂಲಕ ಅಭಿವ್ಯಕ್ತಗೊಳ್ಳುತ್ತದೆ.

- ಬಾಯಿ ಮಾತು ಹೇಳಿದುರೆ ನಮ್ಮಿಗೆ ನಂಬಿಗಿಲ್ಲ
ಬಲಗೈಯ ಭಾಷೆ ಕೊಡ್ಬೇಕಂದಾವೋ

-ಎತ್ತಯ್ಯನ ಕಾವ್ಯ

- ಬೆಟ್ಟವ ಇಳಿವಾಗ ಬಿಟ್ಟವು ಪಾದದ ಗೆಜ್ಜೆ
ಉಪ್ಪಾಂಗದ ಉಡಿಗೆ ಸೊಡಲ್ಯಾವೆ | ಚಿತ್ತಯ್ಯ
ಬೆಟ್ಟಾವ ಇಳಿಯ ರವಸಿಗಿ || ಹಾರೋದು ||
-ಚಿತ್ತಯ್ಯನ ಕಾವ್ಯ

- ವಣಕೆ ವಣಕೆ ಬಂಟ ಮಣಕಾಲಲಿ ಸಮರಂತ
ವಣಿಕೇಯಿ ಬಂಟ ಈರಣ್ಣ | ಏಳಾಜಂಬಿ
ಮಣಕಾಲೆ ಊರಿ ಮಡುದಾವೆ
-ಈರಣ್ಣನ ಕಾವ್ಯ

- ಗಾಡಿಯ ಹೂಡಣ್ಣ ಮ್ಯಾಲೆತ್ತು ಬಿಗಿರಣ್ಣ
ಗಾಡೀಗೆ ಭಂಡಾರ ಇಡಿರಣ್ಣ | ಗೌರಸಂದ್ರ
ಗಾಡಿ ಹೋಗುತಾವೆ ವನಗಳಿಗೆ || ಅಕ್ಕಕ್ಕ ||
-ಗೌರಿಸಂದ್ರ ಮಾರಮ್ಮನ ಕಾವ್ಯ

ಇಂತಹ ಕಥನ ಸಾಹಿತ್ಯಕ್ಕೆ ಮೂಲ ಮಾಧ್ಯಮ ಅವರ ಆಡುನುಡಿಯೇ ಆದರೂ ಅದನ್ನು ಕಾವ್ಯೋಚಿತವಾಗಿ, ಧ್ವನಿಪೂರ್ಣವಾಗಿ ಜನಪದರು ಬಳಸಿದುದನ್ನು ಗಮನಿಸಬೇಕು.

ಬಂದು ಬಂದವನೆಲ್ಲ ಮುಂದೆ ಬೋಳು ಮಾಡಿ
ಬಂದ ಗಂಟುಗಳ ಸೆಳಕೊಂಡ | ತಿಮ್ಮಯ್ಯ
ಗದ್ದೂಲ ಬಹಳಂದ ಇಳಿಯಂತ || ಆಲಗಿರಿ ||

ಹೋದ ಹೋದರನೆಲ್ಲ ಮಾರಿ ಬೋಳು ಮಾಡಿ
ಹೋದ ಗಂಟುಗಳ ಸೆಳಕಂಡ | ತಿಮ್ಮಯ್ಯ
ಹಾವೂಳಿ ಬಹಳಂದ ಇಳಿಯಂದ || ಆಲಗಿರಿ ||
-ತಿರುಪತಿ ತಿಮ್ಮಪ್ಪನ ಕಾವ್ಯ

ಕೆಲವೊಂದು ಆಕೃತಿಮಾಗಳು ವಿಶಿಷ್ಟ ರೀತಿಯಲ್ಲಿ ಸೇರಿಕೊಂಡು ಪಡೆನುಡಿಗಳು ನಿರ್ಮಾಣವಾಗುತ್ತವೆ. ಅವು ವಿಶಿಷ್ಟ ಅರ್ಥಗಳನ್ನು ಪಡೆದುಕೊಳ್ಳುತ್ತವೆ. ಇಂತಹ ಪಡೆನುಡಿಗಳು ಜಾನಪದ ಕಥನ ಸಾಹಿತ್ಯದಲ್ಲಿ ಧಾರಾಳವಾಗಿ ಸಿಗುತ್ತವೆ. ನೆಲ, ಉರಿ, ಕಾಲುಹಾರು, ಸಾಲಿಗಿ, ಬಿಗಿಹಿಡಿ, ಗಂಟುಕಟ್ಟು, ಬಾಯಿಗ, ಹಲ್ಲುಹಿಡಿ, ಕಣ್ಣುಮುಚ್ಚು ಮುಂತಾದವು. ಸಾಮುದಾಯಿಕ ಸಾಹಿತ್ಯದಲ್ಲಿ ಭಾವಕ್ಕೆ ತಕ್ಕ ಪದಗಳು ಸಹಜವಾಗಿ ಕೂಡಿಕೊಳ್ಳುವುದರಿಂದ ಭಾವಭಾಷೆಗಳ ಹೊಂದಾಣಿಕೆಯನ್ನು ಇಲ್ಲಿ ಕಾಣುತ್ತೇವೆ. ಮಾರಮ್ಮನ ಹುಟ್ಟು, ಹುತ್ತಿನಲ್ಲಿ, ಬೇವಿನ ಮರದಲ್ಲಿ ಚಿತ್ರಿತವಾಗುವುದು.

ಹುತ್ತದ ಕ್ವಾಮ್ಯಾಗ ಹುಟ್ಯಾಳಕ ಮಾರಿ
ಹಾವಿನ ಕ್ವಾಮ್ಯಾಗ ಮೂಡ್ಯಾಳ ತಾಯಿ ಮಾರಿ
ಮಟ್ಟ ಮದ್ಯಾನ್ನದಾಗ ಹುಟ್ಟಿತ್ತು ಬೇವಿನಮರ
ಹುಟ್ಟುತಲೆ ಕಾಯಿ ಜಗವು ತಲೆ | ಮಾರಕ್ಕ
ಹುಟ್ಯಾಳ ಬೇವಿನ ಮರದಾಗ

-ಗೌರಸಂದ್ರ ಮಾರಮ್ಮನ ಕಾವ್ಯ

ಭಾಷಾ ಸರಳತೆ, ಬಿಡಿ ಬಿಡಿ ಪದಗಳ ಬಳಕೆ ಇವುಗಳಿಂದಾಗಿ ಈ ಕಥನ ಕಾವ್ಯ ಲಲಿತವಾಗಿ, ಕೇಳುಗನ ಹೃದಯವನ್ನು ಸ್ಪರ್ಶಿಸುತ್ತದೆ. ಭೀಮರೆಡ್ಡಿ ಪಟ್ಟಣದ ಗೌಡರ ಸೊಸೆ, ಮಗಳು ನೀರಿಗಾಗಿ ಬಾವಿಗೆ ಬಂದಾಗ ಕಟ್ಟೆಯ ಮೇಲೆ ಮಲಗಿರುವ ಬೊಮ್ಮಣ್ಣನನ್ನು ಕಂಡು ಅವರ ಊರು, ಕುಲ ಕೇಳುವರು. ಅದಕ್ಕೆ ಬೊಮ್ಮೈಲಿಂಗ :

ಊರುನೆ ಹೇಳಾಕೆ ದಿಕ್ಕತಪ್ಪಿ ನಾ ಬಂದೆ
ನಾನು ನಿಮ್ಮನೆಯ ಆವುಗಳು | ಕಾದೇನು
ನಿತ್ತೆ ಪಡಿಜ್ವಾಳ ಕೊಡಿರಮ್ಮ
ಕುಲವೇನೆಂದ್ಹೇಳಲಮ್ಮ
ಕುಲಗೆಟ್ಟು ಬಂದಿದ್ದೀನಿ
ದಿನಾ ಪಡಿಜ್ವಾಳಾ ಕೊಟ್ಟರೆ
ಆವು ಕಾಯಾಕ ಇರ್ತೀನಿ

-ಬೊಮ್ಮೈಲಿಂಗನ ಕಾವ್ಯ

ಕಥನಕಾರರು ಕೆಲವು ಮಾತುಗಳ ಮೂಲಕ ಹೇಳಬೇಕಾದ ವಿಷಯವನ್ನು ಸ್ವಭಾವೋಕ್ತಿ ಮೂಲಕ ಕಣ್ಣುಮುಂದೆ ಕಟ್ಟುವಂತೆ ಹೇಳುತ್ತಾರೆ. ಸುಭದ್ರೆಗೆ ಒಂಬತ್ತು ತಿಂಗಳು ಬಯಕೆಗಳು ಕಾಡುತ್ತವೆ. ಬಯಸಿದ್ದೆಲ್ಲವನ್ನು ಪತಿ ಅರ್ಜುನ ತಂದುಕೊಡುತ್ತಾನೆ. ಆದರೆ ಎಂಟನೇ ತಿಂಗಳಲ್ಲಿ ಬಯಸಿರುವುದು ಇದು

ಎಂಟನೇ ತಿಂಗಳಿಗೆ ಕಾಂತೇ ತಾ ಭ್ರಮಿಸ್ಯಾಳೆ
ಕಂಟಾಣ ದ್ಯಾಲಕ್ಕಿ ಕಲಸಾಬುತ್ತಿ | ವಳುಗಾಳ
ನೆಂಟರುನ ನಾಲರುವ ಭ್ರಮಿಸ್ಯಾಳೆ

-ಅಭಿಮನ್ಯುವಿನ ಕಾವ್ಯ

ಅದು ತವರು ಮನೆಗೆ ಹೋಗುವ ಬಯಕೆ. ಅಲ್ಲಿ ಸಹಜವಾಗಿ ಸಿಗುವ ಪ್ರೀತಿ ವಿಶ್ವಾಸ. ಎತ್ತಯ್ಯನ ಕಾವ್ಯದ ಕೆಲವು ಭಾಗಗಳಲ್ಲಿ ಶಿಶು ಪ್ರಾಸಗಳ ಲಯವಿದೆ.

ಬಾರೋ ಬಾರೋ ಎತ್ತಯ್ಯ
ರಾಜ್ಯೇವುಕೆ ಬಂದ್ಯೆತೊ
ನಿನ್ನೊಬ್ಬನಿಗೆ ಬಂದ್ಯೆತೋ
ಲೋಕಂಬ ಲೋಕ
ತಲ್ಲಣಿಸಿ ಬಂದ್ಯೆತೋ
ಅಳಬ್ಯಾಡ ಎತ್ತಯ್ಯ ಅಳಬ್ಯಾಡಣ್ಣಾನೋ

-ಎತ್ತಯ್ಯನ ಕಾವ್ಯ

ಇಂತಹ ಪ್ರಾಸಗಳ ಭಾಷೆ, ಸರಳ ಮತ್ತು ನೇರ. ಪ್ರಾಸ, ಪದ್ಯದ ಕಟ್ಟನ್ನು ನಿರ್ಣಯಿಸುತ್ತದೆ. ಹಾಡುಗಾರರು ಲಹರಿಯ ಝುರಿಯಲ್ಲಿ ತನ್ಮಯರಾಗಿ ಹಾಡುತ್ತಾರೆ. ಅದು ಅಂಶಗಣಗಳನ್ನೊಳಗೊಂಡಿರುವುದರಿಂದ ಏರಿಳಿತಗಳ ಕೋಚನೆತ್ತಿದಾಗ ರಾಗ ಮಾಡಿ ಹಾಡಲು ಬರುತ್ತದೆ. 'ಬಾರೋ ಬಾರೋ ಎತ್ತಯ್ಯ' ಭಾವದ ಕ್ರಿಯಾಸ್ವರೂಪ ಹಾಗೂ ಆಡುನುಡಿಯ ಸೊಗಸು ಅಲ್ಲಿ ಮುಖ್ಯವಾಗಿದೆ.

ಕೃಷ್ಣಗೊಲ್ಲರ ಕಥನ ಕಾವ್ಯಗಳ ಭಾಷಾಪ್ರಯೋಗ, ಪದರಚನೆಯ ವಿನ್ಯಾಸ, ಛಂದೋಲಯಗಳು ಆ ಕಾವ್ಯ ಶೈಲಿಗೆ ಶಕ್ತಿಯನ್ನು ಒದಗಿಸಿವೆ. ಇಂತಹ ಶೈಲಿ ಕನ್ನಡ ಪರಿಸರದಿಂದ ಹುಟ್ಟಿ ಅದು ಭಾಷೆ ಪ್ರಭೇದಗಳನ್ನಾಧರಿಸಿ ಅಭಿವ್ಯಕ್ತವಾಗುತ್ತದೆ. ಜನಪದ ಭಾಷೆ, ಜನಪದ ಶೈಲಿಯನ್ನು ಹೇಗೆ ರೂಪಿಸಿಕೊಳ್ಳುತ್ತದೆಂಬುದನ್ನು ಪ್ರಸ್ತುತ ಸಂಪ್ರಬಂಧದಲ್ಲಿ ರೂಪರೇಖಾತ್ಮಕವಾಗಿ ತೋರಿಸಿಕೊಡಲಾಗಿದೆ.

೯

ಪುಸ್ತಕ ಪರಿಚಯ

ಡಾ ಕೇಶವನ್ ಪ್ರಸಾದ ಕೆ ಮರಟ್ಟಿ

ಕೃತಿ	:	ಮುದ್ದೆಕಂಬಾರರು
ಕೃತಿಕಾರ	:	ಡಾ ಆರ್ ಬಿ ಕುಮಾರ್
ಪ್ರಕಾಶನ	:	ಸಾರಾ ಎಂಟರ್ ಪ್ರೈಸಸ್, ಮೈಸೂರು
ವರ್ಷ	:	೨೦೦೪
ಪುಟ	:	xii + ೨೩೨
ಬೆಲೆ	:	ರೂ.೧೮೫

"ಮುದ್ದೆಕಂಬಾರರು" ಎಂಬ ಶೀರ್ಷಿಕೆಯ ಈ ಕೃತಿಯು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್ ಡಿ ಪದವಿಗಾಗಿ ಸಲ್ಲಿಸಿದ ಸಂಶೋಧನ ಮಹಾ ಪ್ರಬಂಧವಾಗಿದೆ. ಪ್ರಸ್ತುತ ಕೃತಿಯಲ್ಲಿ ಪ್ರಸ್ತಾವನೆ ಹಾಗೂ ಸಮಾರೋಪ ಅಧ್ಯಾಯಗಳು ಒಳಗೊಂಡಂತೆ ಒಂಬತ್ತು ಅಧ್ಯಾಯ ಗಳಿವೆ. ಅಧ್ಯಯನದ ಉದ್ದೇಶ ವ್ಯಾಪ್ತಿ, ವಿಧಾನ ಹಾಗೂ ರೂಪುರೇಷೆಗಳ ಜೊತೆ ಒಟ್ಟಾರೆ ಕುಶಲಕರ್ಮಿ ಸಮುದಾಯಗಳ ಕುರಿತು ನಡೆದಿರುವ ಅಧ್ಯಯನ ಮತ್ತು ಪಂಚಾಲರ ಕುರಿತ ಅಧ್ಯಯನ ಸಮೀಕ್ಷೆಯನ್ನು ಪ್ರಸ್ತಾವನೆಯಲ್ಲಿ ಚರ್ಚಿಸಿದ್ದಾರೆ. ಆಧುನಿಕ ಸಂದರ್ಭದಲ್ಲಿ ಪ್ರತಿಯೊಂದು ಜನಸಮುದಾಯದ ಮೇಲೆ ಅನ್ಯ ಸಂಸ್ಕೃತಿಯ ಪ್ರಭಾವದಿಂದ ಮೂಲ ಸಂಸ್ಕೃತಿಗಳು ಕಣ್ಮರೆಯಾಗುತ್ತಿವೆ. ಆದರೆ ಮುದ್ದೆ ಕಂಬಾರ ಎಂಬ ಬುಡಕಟ್ಟು ಸಮುದಾಯವು ಇಂದಿಗೂ ತನ್ನ ಮೂಲ ಸಂಸ್ಕೃತಿಯ ಬೇರನ್ನು ತನ್ನಲ್ಲಿ ಉಳಿಸಿಕೊಂಡಿರುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಆದರೆ ಕಬ್ಬಿಣದ ಉತ್ಪಾದನೆಯು ಬೃಹತ್ ಕೈಗಾರಿಕೆಗಳ ಕೈವಶವಾದ ಅನಂತರ ಸಾಂಪ್ರದಾಯಿಕ ದೇಶೀ ಮಾದರಿಯಲ್ಲಿ ಕಬ್ಬಿಣ ತಯಾರಿಸುತ್ತಿದ್ದ ಮುದ್ದೆಕಂಬಾರರ ಬದುಕು ಅತಂತ್ರವಾಗಿದೆ. ಅನಿವಾರ್ಯವಾಗಿ ಜೀವನ ಮಾರ್ಗಕ್ಕಾಗಿ ಅನ್ಯಕಸುಬುಗಳಿಗೆ ಅವಲಂಬಿತರಾಗಿದ್ದಾರೆ. ಇಂತಹ ಒಂದು ಸಮುದಾಯದ ಇರುವಿಕೆಯೇ ಮರೆತು ಹೋಗಿರುವುದು, ಆ ಕುರಿತು ಸಾಮಾನ್ಯ ತಿಳಿವಳಿಕೆಯು ಇಲ್ಲದಿರುವುದು, ಸರ್ಕಾರದ ದಾಖಲೆಗಳಲ್ಲಿಯೂ ಕಾಣೆಯಾಗಿರುವುದು ಆತಂಕದ ಸಂಗತಿ. ಇದಲ್ಲದೆ ಪಂಚಾಳರಲ್ಲಿನ ಒಂದು ಒಳ ಪಂಗಡ ಎಂದು ಹೇಳಿಕೊಂಡರೂ ಇತರೆ ಪಂಗಡಗಳು ಇವರನ್ನು ತಮ್ಮ

ಸಮುದಾಯವೆಂದು ಪರಿಗಣಿಸದೇ ಇರುವುದು ಮುದ್ದೆಕಂಬಾರ ಸಮುದಾಯಕ್ಕೆ ಆಗಿರುವ ಹಿನ್ನಡೆ. ಇಂತಹ ಒಂದು ನಿರ್ಲಕ್ಷಿತ ಸಮುದಾಯವನ್ನು ಕುರಿತು ಸಮಗ್ರ ಅಧ್ಯಯನ ಇದುವರೆಗೆ ನಡೆಯದಿರುವುದರಿಂದ, ಪ್ರಸ್ತುತ ಅಧ್ಯಯನದ ಅಗತ್ಯವನ್ನು ಅರಿತು ಸಂಶೋಧನೆಗೆ ಮುದ್ದೆಕಂಬಾರ ಸಮುದಾಯವನ್ನು ಆಯ್ಕೆಮಾಡಿಕೊಂಡ ಔಚಿತ್ಯವನ್ನು ಕೃತಿಕಾರರು ಹೇಳಿಕೊಂಡಿದ್ದಾರೆ.

ಒಟ್ಟಾರೆ ಕುಶಲ ಕರ್ಮಿಗಳನ್ನು ಕುರಿತು ಇದುವರೆಗೆ ನಡೆದಿರುವ ಅಧ್ಯಯನಗಳನ್ನು ಅವಲೋಕಿಸಿದಾಗ, ಕೇವಲ ನೇಕಾರರು ಹಾಗೂ ಕೆಲವೇ ಕುಶಲಕರ್ಮಿಗಳನ್ನು ಕುರಿತದ್ದಾಗಿದೆ. ಅವುಗಳು ಕೇವಲ ಕಸುಬು ಆರ್ಥಿಕ ಸ್ಥಿತಿ ಹಾಗೂ ತಾಂತ್ರಿಕ ಅಂಶಗಳ ಮೇಲೆ ಮಾತ್ರ ಬೆಳಕು ಚೆಲ್ಲುತ್ತವೆ ಎಂಬುದನ್ನು ಗುರುತಿಸಿದ್ದಾರೆ. ಹಾಗೆಯೇ ಐತಿಹಾಸಿಕ ಅಧ್ಯಯನಗಳಲ್ಲಿ ಬ್ರಾಹ್ಮಣ ಮತ್ತು ಒಕ್ಕಲಿಗ ಸಮುದಾಯಗಳು ಪಡೆದಷ್ಟು ಮಹತ್ವ ಪಡೆದಿಲ್ಲವಾದರೂ ಕುಶಲಕರ್ಮಿಗಳ ಬಗೆಗೆ ಹೆಚ್ಚಿನ ಅಧ್ಯಯನ ಹಾಗೂ ಚರ್ಚೆ ಆಗುತ್ತಿರುವುದು ಅದರ ಅವಶ್ಯಕತೆಯನ್ನು ಹೇಳುತ್ತದೆ. ಕಲೆ ಮತ್ತು ಇಂಡಾಲಜಿಕಲ್ ಅಧ್ಯಯನಗಳು ಉತ್ಪನ್ನಗಳ ಸೊಬಗು, ರಮ್ಯತೆ ಹಾಗೂ ಕಸುಬುದಾರರ ನಾಜೂಕುತನ, ಕಲಾಕೌಶಲ್ಯ, ವಾಸ್ತುಶಿಲ್ಪಿಗಳ ಸಂಕೇತಾರ್ಥಗಳ ಕಡೆಗೆ ಗಮನ ಸೆಳೆಯುತ್ತವೆ. ಕಸುಬನ್ನು ಕುರಿತು ಕೆಲವು ಅಧ್ಯಯನಗಳಲ್ಲಿ ಈಶ್ವರನ್ ಅವರು ಅಕ್ಕಸಾಲಿಗರ ಕುರಿತ ಅಧ್ಯಯನ ನಡೆಸಿರುವುದಾದರೂ ಲೋಹದ ಕೆಲಸಗಾರರ ಬಗ್ಗೆ ಅಧ್ಯಯನ ನಡೆಯದೇ ಇರುವುದು ಏಕೆ ಎಂದು ಪ್ರಶ್ನಿಸುತ್ತಾರೆ.

ಪಂಚಾಳರ ಕುರಿತ ಅಧ್ಯಯನವನ್ನು ಪ್ರಸ್ತಾಪಿಸುತ್ತಾ ನಾಕ್ಸ್(Knoxs)ರವರ "ಹಿಸ್ಟಾರಿಕಲ್ ರಿಲೇಶನ್ ಆಫ್ ದ ಐಲ್ಯಾಂಡ್ ಸಿಲೋನ್" ಎಂಬ ಕೃತಿಯಲ್ಲಿ ಸಿಲೋನಿನ ಕಮ್ಮಾರ, ಬಡಿಗ ಮತ್ತು ಅಕ್ಕಸಾಲಿಗರ ಆರ್ಥಿಕ, ಸಾಮಾಜಿಕ ಅಂಶಗಳನ್ನು ಕುರಿತ ವಿವರಣಾತ್ಮಕ ಮಾಹಿತಿ ಲಭ್ಯವಿರುವುದನ್ನು ಉಲ್ಲೇಖಿಸುತ್ತಾರೆ. ಅಬ್ಬೆದುಬೆ, ಬುಕನಾನ್, ಸ್ಕಾಟೀಸ್, ಇವರು ಕೈಗೊಂಡಿರುವ ಸಮುದಾಯಗಳ ಅಧ್ಯಯನದಲ್ಲಿ ಪಂಚಾಳರ ಬಗೆಗೆ ಮಹತ್ವದ ವಿಚಾರಗಳನ್ನು ಉಲ್ಲೇಖಿಸಿರುವುದನ್ನು ದಾಖಲಿಸಿದ್ದಾರೆ. ಹಾಗೆಯೇ ಸಾಹಿತ್ಯ ಕೃತಿಗಳಲ್ಲಿಯೂ ಕಮ್ಮಾರನ, ಕುಲುಮೆ, ತಿದಿ, ಒಲೆ ಬಗೆಗೆ ಉಲ್ಲೇಖಗಳಿರುವುದನ್ನು ಉದಾಹರಿಸಿರುತ್ತಾರೆ. ಹದಿನಾರನೇ ಶತಮಾನದಲ್ಲಿದ್ದ ತಿಂತಿಣಿ ಮೋನಪ್ಪ ತನ್ನ ವಚನಗಳಲ್ಲಿ ಕಮ್ಮಾರಿಕೆ, ಮತ್ತು ಅದರ ಉಪಕರಣಗಳನ್ನು ಆಧ್ಯಾತ್ಮಿಕ ಚಿಂತನೆಗೆ ಹೋಲಿಕೆ ಮಾಡಿ ವಚನ ಬರೆದಿರುವ ಬಗೆಗೆ ಲೇಖಕರು ಉಲ್ಲೇಖಿಸುತ್ತಾರೆ.

ಲಿಖಿತ ಸಾಹಿತ್ಯ ಮಾತ್ರವಲ್ಲದೆ ಮೌಖಿಕ ಸಾಹಿತ್ಯ ರೂಪವಾದ ಜನಪದ ಮತ್ತು ಬುಡಕಟ್ಟು ಸಾಹಿತ್ಯದಲ್ಲಿ ಕಮ್ಮಾರ ಕಬ್ಬಿಣ ತಯಾರಿಕೆ ಕಬ್ಬಿಣದ ಪ್ರಸ್ತಾಪವಿರುವ ಮಂಟೇಸ್ವಾಮಿ ಕಾವ್ಯದ ಸಿದ್ಧಪ್ಪಾಜಿ ಮೂಲತಃ ಕಮ್ಮಾರ ಎಂಬುದನ್ನು ಉದಾಹರಿಸುತ್ತಾರೆ ಒಟ್ಟಾರೆ ಕಮ್ಮಾರರ ಬಗೆಗೆ ಲಭ್ಯವಿರುವ ಎಲ್ಲಾ ಮಾಹಿತಿಯನ್ನು ಈ ಅಧ್ಯಯನದಲ್ಲಿ ದಾಖಲಿಸಿಕೊಟ್ಟಿದ್ದಾರೆ.

ಸಾಮಾಜಿಕ ಜೀವನ ಎಂಬ ಶೀರ್ಷಿಕೆಯ ಮೂರನೆಯ ಅಧ್ಯಾಯವು ಮುದ್ದೆಕಂಬಾರರ ಸಾಮಾಜಿಕ ಮತ್ತು ಕೌಟುಂಬಿಕ ಜೀವನವನ್ನು ಹನ್ನೊಂದು ಉಪಶೀರ್ಷಿಕೆ ಅಡಿಯಲ್ಲಿ ವಿವರವಾಗಿ ಚರ್ಚಿಸಿದ್ದಾರೆ. ಮೊದಲಿಗೆ ಸಾಮಾಜಿಕ ಶ್ರೇಣಿಯನ್ನು ಕುರಿತು ಹೇಳುತ್ತಾ ಮುದ್ದೆಕಂಬಾರರಲ್ಲಿ ಕಂಡುಬರುವ ಕಟ್ಟೆ ಯಜಮಾನ, ಗೌಡ, ಪೂಜಾರಿ ಅಥವಾ ದಾಸಯ್ಯ, ಓಜ ಮತ್ತು ಸಾಮಾನ್ಯರು ಎಂಬ ಸಾಮಾಜಿಕ ರಚನೆಯನ್ನು ಗುರ್ತಿಸಿ ಅವರು ಹೊಂದಿರುವ ಸ್ಥಾನಮಾನಗಳನ್ನು ದಾಖಲಿಸಿದ್ದಾರೆ. ಈ ಶ್ರೇಣೀಕರಣ ವ್ಯವಸ್ಥೆಯಲ್ಲಿ ವಂಶಪಾರಂಪರ್ಯವಾಗಿ ಅಧಿಕಾರ ಪಡೆಯುವ ಬದಲು ಪ್ರಜಾಪ್ರಭುತ್ವ ಮಾದರಿ ವ್ಯವಸ್ಥೆಯಿರುವುದನ್ನು ಗುರ್ತಿಸಿದ್ದಾರೆ. ಸಮುದಾಯದ ಬಹುಮುಖ್ಯವಾದ ಕುಲುಮೆ ಮತ್ತು ಮನೆಗಳ ರಚನೆ ಕುರಿತು ಎರಡನೆಯ ಉಪಶೀರ್ಷಿಕೆಯಲ್ಲಿ ವಿವರ ನೀಡುತ್ತಾ ಪ್ರಾಚೀನ ಕುಲುಮೆಗಳು ಹಾಗೂ ಇಂದಿನ ಕುಲುಮೆಗಳಲ್ಲಿ ಆಗಿರುವ ಬದಲಾವಣೆಯನ್ನು ತಿಳಿಸಿದ್ದಾರೆ. ಆದರೆ ಕುಲುಮೆಗಳ ನಿರ್ಮಾಣದಲ್ಲಿ ತಮ್ಮ ಹಿರಿಯರ ಕಟ್ಟುಪಾಡುಗಳನ್ನೇ ಪಾಲಿಸುತ್ತಿರುವುದನ್ನು ದಾಖಲಿಸಿ, ಚಿಕ್ಕಮನೆ ಕಮ್ಮಾರ, ಆರ್ಯಕಮ್ಮಾರ, ಘಿಸಾಡಿ, ಮುದ್ದೆಕಂಬಾರ ಮತ್ತು ಬಯಲು ಕಂಬಾರರು ಬಳಸುವುದೇ ಬೇರೆ ಬೇರೆ ವಿಧಾನ ಹಾಗೂ ಆಚಾರದ ತಿದಿ (ಭೋವರ್)ಗಳ ಬಗೆಗೆ ಮಾಹಿತಿ ನೀಡಿದ್ದಾರೆ.

ಮುದ್ದೆಕಂಬಾರರು ತಮ್ಮ ಮನೆ ಮತ್ತು ಕುಲುಮೆಗಳನ್ನು ರಚಿಸುವ ಕ್ರಮವನ್ನು ವಿವರವಾಗಿ ತಿಳಿಸುವುದರ ಜೊತೆಗೆ ಕುಲುಮೆಯೂ ಮನೆಯಿಂದ ಪ್ರತ್ಯೇಕವಾಗಿರುತ್ತದೆ. ಮನೆಯಲ್ಲಿ ಉಪಕರಣಗಳನ್ನು ಇಡುವ ಜಾಗಕ್ಕೆ ಮಹಿಳೆಯರು ಹೋಗುವುದು ನಿಷಿದ್ಧ, ಅಷ್ಟೇ ಅಲ್ಲ ಕುಟುಂಬದ ಹೊರಗಿನ ಯಾರಿಗೂ ಪ್ರವೇಶವಿರುವುದಿಲ್ಲ. ಈ ಜಾಗವು ಮುದ್ದೆಕಂಬಾರರಿಗೆ ದೇವರ ಕೋಣೆಯಷ್ಟೇ ಪವಿತ್ರವೆಂಬ ಭಾವನೆಯಿರುವುದನ್ನು ವಿಶೇಷವಾಗಿ ಗುರ್ತಿಸಿದ್ದಾರೆ. ಆಧುನಿಕ ಸಮಾಜದ ಯಾವುದೇ ಒತ್ತಡಗಳು ಮುದ್ದೆ ಕಂಬಾರರಿಗೆ ಪ್ರಭಾವ ಬೀರಿದ್ದರೂ, ಮನೆ ನಿರ್ಮಾಣಕ್ಕೆ ಬಳಸುವ ಪೂರಕ ವಸ್ತುಗಳ ಬದಲಾವಣೆ ಮಾತ್ರ ಆಗಿದೆ. ಆದರೆ ರಚನಾ ಕ್ರಮ ಮತ್ತು ನಿಯಮಗಳನ್ನು ಉಳಿಸಿ ಕೊಂಡಿರುವುದನ್ನು ದಾಖಲಿಸುತ್ತಾರೆ.

ನ್ಯಾಯಪದ್ಧತಿ ಬಗ್ಗೆ ಪ್ರಸ್ತಾಪಿಸುತ್ತಾ ಸಮುದಾಯಕ್ಕೆ ಸಂಬಂಧಿಸಿದ ಪ್ರತಿಯೊಂದು ನ್ಯಾಯ ತೀರ್ಮಾನಗಳು, ಜಾತಿಯಿಂದ ಬಹಿಷ್ಕಾರ, ಮರಳಿ ಜಾತಿಗೆ ಸೇರಿಸಿಕೊಳ್ಳುವುದು ಇವೆಲ್ಲವೂ ತಾವೇ ಮಾಡಿಕೊಂಡಿರುವ ಕಟ್ಟೆಮನೆ ಯಜಮಾನ, ಹತ್ತುಜನ ಹಿರಿಯರು, ಮನೆಗೊಬ್ಬರಂತೆ ಒಟ್ಟು ದೈವದವರ ಸಮ್ಮುಖದಲ್ಲಿ ನಡೆಯುತ್ತವೆ ಎಂಬ ಅಂಶವನ್ನು ತಿಳಿಸಿ ಕೆಲವು ಸಂದರ್ಭದಲ್ಲಿ ಸಮುದಾಯದ ದೈವವಾದ ಕಾಳಿಯನ್ನು ಹೂವು ಕೇಳುವ ಮೂಲಕ ತೀರ್ಮಾನ ತೆಗೆದುಕೊಳ್ಳುವ ಕ್ರಮವನ್ನು ದಾಖಲಿಸಿದ್ದಾರೆ.

ಮುದ್ದೆಕಂಬಾರರು ಬುಡಕಟ್ಟು ಮೂಲದವರೇ ಆಗಿರುವುದರಿಂದ ಅವರು ಮಾಂಸಹಾರಿ ಗಳಾಗಿದ್ದರು, ಆದರೆ ಸಾಮಾಜಿಕ ಸ್ಥಾನಮಾನದ ಕಾರಣಕ್ಕಾಗಿ ಕೆಲವರು ಮಾಂಸಹಾರವನ್ನು

ಬಹಿರಂಗವಾಗಿ ತಿನ್ನುವುದಿಲ್ಲ ಅಥವಾ ತಿಂದರೂ ಹೇಳಿಕೊಳ್ಳುವುದಿಲ್ಲ. ಆದಾಗ್ಯೂ ಇವರ ಪ್ರಿಯವಾದ ಊಟ ಕೋಳಿ ಮಾಂಸದೂಟ ಎಂಬುದನ್ನು ದಾಖಲಿಸುತ್ತ ಮನೆಗೆ ಬಂಧುಗಳು ಬಂದಾಗ ಮಾಂಸದೂಟ ಕಡ್ಡಾಯ, ದನ ಮತ್ತು ಹಂದಿ ಮಾಂಸ ಸೇವನೆ ನಿಷಿದ್ಧವಿರುವುದು ಆ ಸಮುದಾಯದ ಸಾಮಾಜಿಕ ಶ್ರೇಣಿಯನ್ನು ಗುರ್ತಿಸಲು ಬರುತ್ತದೆ. ಹಾಗೆಯೇ ಮುದ್ದೆಕಂಬಾರರ ಉಡುಗೆ ತೊಡುಗೆ ಕುರಿತು ದಾಖಲಿಸುತ್ತಾ ಪ್ರಾದೇಶಿಕ ಹಿನ್ನೆಲೆಯಲ್ಲಿ ಉಡುಗೆ ತೊಡುಗೆ ಬದಲಾಗುವುದು. ಕುಲುಮೆ ಕೆಲಸ ಮಾಡುವಾಗ ಅಂಗಿ ಕಳಚಿಡುವರು. ಮೊಣಕಾಲಿನ ಕೆಳಭಾಗದವರೆಗೂ ಕಂಬಳಿಯನ್ನು ಸುತ್ತಿಕೊಂಡು ಕುಲುಮೆ ಬೆಂಕಿಯಿಂದ ರಕ್ಷಣೆ ಪಡೆಯುವುದು ಸಹಜವಾಗಿಯೇ ಇದೆ.

ಪ್ರತಿಯೊಂದು ಕಸುಬುದಾರರಲ್ಲಿ ಇರುವಂತೆ ಮುದ್ದೆಕಂಬಾರರಲ್ಲಿಯೂ ಲೇಖಕರು ಪ್ರಕೃತಿಯಲ್ಲಿ ಲಭ್ಯವಿರುವ ಗಿಡ ಮೂಲಿಕೆಯನ್ನು ಬಳಸುವುದರ ಜೊತೆಗೆ, ರೋಗ ರುಜಿನಿಗಳನ್ನು ಗುಣಪಡಿಸಲು ಕೆಲವು ಅಗೋಚರ ಶಕ್ತಿಯ ಮೊರೆ ಹೋಗುವುದು ರೂಢಿಯಲ್ಲಿರುವುದನ್ನು ಪ್ರಸ್ತಾಪಿಸಿದ್ದಾರೆ. ಹಾಗೂ ತಾವು ಸಾಕುವ ಪ್ರಾಣಿಗಳಿಗೂ ಸಹ ರೋಗಕ್ಕೆ ಔಷಧಿ ನೀಡುವುದು ರೂಢಿಯಲ್ಲಿದೆ.

ಆಹಾರ ಪದ್ಧತಿಗೆ ಪೂರಕವಾದ ಬೇಟೆ ಮುದ್ದೆಕಂಬಾರರಲ್ಲಿತ್ತು. ಉಡ, ಚಿಪ್ಪುಹಂದಿ (ಆಲವಿ) ಯಂತಹ ಪ್ರಾಣಿಗಳನ್ನು ನಾಯಿಯ ಮೂಲಕ ಬೇಟೆಯಾಡುತ್ತಿದ್ದರು ಈಗ ರೂಢಿಯಲ್ಲಿಲ್ಲ. ಆದರೆ ಮೀನು ಬೇಟೆ ಮಾತ್ರ ಇದೆ. ಗಾಣ, ಸರಗಾಣ ಉರುಳುಗಳನ್ನು ಬಳಸುತ್ತಿರುವುದನ್ನು ಬೇಟೆ ಎಂಬ ಉಪಶೀರ್ಷಿಕೆಯಲ್ಲಿ ಮಾಹಿತಿ ನೀಡಿದ್ದಾರೆ. ಸಮುದಾಯದ ಆಂತರಿಕ ಕಟ್ಟುಪಾಡುಗಳನ್ನು ಜಾತಿ ಬಹಿಷ್ಕಾರ ಮತ್ತು ಜಾತಿಗೆ ಸೇರಿಸಿ ಕೊಳ್ಳುವ ಕ್ರಮವನ್ನು ಕುರಿತು ವಿವರಿಸುತ್ತಾ ಯಾವ ತಪ್ಪಿಗೆ ಯಾವ ರೀತಿಯ ಶಿಕ್ಷೆ ವಿಧಿಸಬೇಕು ಎಂಬುದನ್ನು ಕಟ್ಟೆಮನೆ ಯಜಮಾನರು ಮತ್ತು ಅವರ ದೈವದ ಮೂಲಕ ತೀರ್ಮಾನಿಸುವರು. ಈ ತೀರ್ಮಾನವನ್ನು ಯಾರೂ ಮೀರುವುದಿಲ್ಲ ಕಾರಣ ತಮ್ಮ ದೈವದ ಭಯವು ಇದಕ್ಕೆ ಕಾರಣ.

ಮೂರನೆಯ ಅಧ್ಯಾಯದ ಒಂಬತ್ತನೆಯ ಉಪಶೀರ್ಷಿಕೆ ಗೃಹ ಪ್ರವೇಶ. ಕಾಳಿಯಗುಡಿ ಯಿಂದ ತಂದ ತೀರ್ಥವನ್ನು ಮನೆಗೆ ಚಿಮುಕಿಸುವುದು, ನಿಂಬೆ ಹಣ್ಣೊಂದನ್ನು ಬಾಗಿಲಿಗೆ ಕಟ್ಟುವುದು, ತದನಂತರ ಸಮುದಾಯದ ಐದು ಮಕ್ಕಳಿಗೆ ಸಿಹಿ ಊಟ ಬಡಿಸುವುದರ ಮೂಲಕ ಗೃಹ ಪ್ರವೇಶ ಎಂಬ ಶುಭಕಾರ್ಯ ಪೂರ್ಣವಾಗುತ್ತಿತ್ತು. ಆದರೆ ಇತ್ತೀಚೆಗೆ ಆಧುನಿಕ ಜಗತ್ತಿನ ಸಂಪರ್ಕದಿಂದ ಸತ್ಯನಾರಾಯಣ ಪೂಜೆ ನೆರವೇರಿಸಿದರು ಮೂಲ ದೈವಗಳಾದ ಕಾಳಿ, ಭರ್ಮಪ್ಪ, ಹನುಮಪ್ಪನ ಆರಾಧನೆ ರೂಢಿಯಲ್ಲಿರುವದನ್ನು ದಾಖಲಿಸಿದ್ದಾರೆ.

ಅಧ್ಯಾಯದ ಕೊನೆಯಲ್ಲಿ ಮುದ್ದೆಕಂಬಾರರಲ್ಲಿ ರೂಢಿಯಲ್ಲಿರುವ ನಂಬಿಕೆಗಳ ಬಗ್ಗೆ ಚರ್ಚಿಸಿ ಕಬ್ಬಿಣವನ್ನು ಕುಲದೈವ ಕಾಳಿಗೆ ಸಮೀಕರಿಸುವುದಲ್ಲದೆ, ಕಬ್ಬಿಣ ತಮ್ಮ ಮನೆಯ

ಲಕ್ಷ್ಮಿ ಎಂದು ಭಾವಿಸುತ್ತಾರೆ. ಈ ಸಂಬಂಧ ಅವರಲ್ಲಿ ಇರುವ ಕೆಲ ಪ್ರಮುಖ ನಂಬಿಕೆಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ.

ಅಧ್ಯಾಯ ನಾಲ್ಕರಲ್ಲಿ ಮುದ್ದೆಕಂಬಾರರಲ್ಲಿ ಹುಟ್ಟಿನಿಂದ ಸಾವಿನವರೆಗೆ ರೂಢಿಯಲ್ಲಿರುವ ಆಚರಣೆಗಳ ಬಗೆಗೆ ಬೆಳಕು ಚೆಲ್ಲಿದ್ದಾರೆ. ವಿವಾಹವಾದ ಹೆಣ್ಣು ಗರ್ಭಿಣಿಯಾದಾಗ ನೆರವೇರಿಸುವ ಸೀಮಂತ ಕಾರ್ಯದಿಂದ ಆರಂಭಗೊಂಡು ಮಗುವಿನ ಜನನ, ನಾಮಕರಣ, ಮೂರನೆ ದಿನದ ಕಾರ್ಯ/ನೀರ್ಲ, (ಹೆರಿಗೆಯಾದ ಅನಂತರ ಬೀಳುವ ಮಾಸವನ್ನು ಒಂದು ಚಿಕ್ಕ ಗಡಿಗೆಯೊಳಕ್ಕೆ ಹಾಕಿ ಮಣ್ಣಿನ ಮುಚ್ಚಳ ಮುಚ್ಚಿ ಮುಂಬಾಗಿಲಿನ ಎಡಭಾಗಕ್ಕೆ ಹೂಳುವುದು) ಸೂತಕ ಕಳೆಯುವುದು, ತೊಟ್ಟಿಲು ತರುವ ಶಾಸ್ತ್ರ, ಚೌಲಶಾಸ್ತ್ರ, ಪ್ರೌಢಸಂಸ್ಕಾರ, ಮದುವೆ ಮತ್ತು ವಿಚ್ಛೇದನ, ಸಾವು, ಚಟ್ಟ/ಸಿದಿಗಿ ಇಸಬಾಯಿ ತೊಳೆಸುವುದು, ಕೂಳು ಹಾಕುವುದು (ಮೂರು ದಿನದ ಕಾರ್ಯ) ಹೆತ್ತವರ ಹೊರೆ ಇಳಿಸುವುದು, ಹದಿನಾರನೇ ದಿನದ ಕಾರ್ಯಗಳನ್ನು ಕುರಿತು ಇಲ್ಲಿ ಸುದೀರ್ಘವಾಗಿ ಚರ್ಚಿಸಿದ್ದಾರೆ. ಇದರ ಮುಂದುವರಿಕೆಯಾಗಿ ಧಾರ್ಮಿಕ ಆಚರಣೆಗಳ ಬಗೆಗೆ ಮಾಹಿತಿ ಮಾಡಿದ್ದಾರೆ. ಈ ಭಾಗದಲ್ಲಿ ಇದೇ ಸಮುದಾಯದ ಜನರು ಪ್ರಾದೇಶಿಕ ಹಿನ್ನೆಲೆಯಲ್ಲಿ ಆರಾಧಿಸುವ ವಿವಿಧ ದೈವಗಳು, ಆ ದೈವಗಳಿಗೆ ನೆರವೇರಿಸುವ ಹಬ್ಬ-ಹರಿದಿನ, ಜಾತ್ರೆ-ಉತ್ಸವ, ಹರಕೆ-ನಂಬಿಕೆ ವಿವಿಧ ಶಾಸ್ತ್ರ, ಪೂಜಾ ಕ್ರಮವನ್ನು ತಿಳಿಸಿಕೊಟ್ಟಿದ್ದಾರೆ.

ಮುದ್ದೆಕಂಬಾರರ ಜನಪದ ಸಾಹಿತ್ಯ ಎಂಬುದು ಐದನೆಯ ಅಧ್ಯಾಯ. ಅದರಲ್ಲಿ ಪ್ರಚಲಿತವಿರುವ ಡೊಳ್ಳಿನ ಹಾಡು, ಪ್ರಣಯಗೀತೆ, ಕಾಳಮ್ಮನ ಪದ, ಕಥೆ, ಗಾದೆಗಳನ್ನು ಉಲ್ಲೇಖಿಸಿದ್ದಾರೆ ಇದಕ್ಕೆ ಪೂರಕವಾಗಿ ಮಾಹಿತಿಯನ್ನು ವಿವಿಧ ಸಂಗ್ರಹಕಾರರ ಕೃತಿಯಿಂದ ಪಡೆದಿದ್ದಾರೆ. ಆರನೆಯ ಅಧ್ಯಾಯದಲ್ಲಿ ಸಮುದಾಯದ ಆರ್ಥಿಕ ಜೀವನವನ್ನು ಕುರಿತು ಮಾಹಿತಿಯನ್ನು ನೀಡುತ್ತದೆ. ಮುದ್ದೆ ಕಂಬಾರರ ಸಾಂಪ್ರದಾಯಿಕ ಕಸುಬೇ ಅವರಿಗೆ ಜೀವನಾಧಾರವಾಗಿತ್ತು. ಆದರೆ ಅತ್ಯಾಧುನಿಕ ಹಾಗೂ ಬೃಹತ್ ಕೈಗಾರಿಕೆಯ ಆಗಮನದಿಂದ ಇವರ ಕಸುಬು ಅನುಪಯುಕ್ತವಾಗಿ ಅದನ್ನೇ ನಂಬಿದವರ ಬದುಕು ಅತಂತ್ರವಾಗಿದೆ. ಆದ ಕಾರಣ ಕೂಲಿ, ಕೃಷಿಕೂಲಿ ಮುಂತಾದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಆರ್ಥಿಕ ಸ್ಥಿತಿ ಉತ್ತಮವಾಗೇನು ಇಲ್ಲ ಎಂಬ ಅಂಶವನ್ನು ಚರ್ಚಿಸಿದ್ದಾರೆ. ಮುಂದುವರಿದು ಕಸುಬಿನ ಸಂಬಂಧ ಉಪಕರಣಗಳನ್ನು ಕುರಿತು ಪ್ರತಿಯೊಂದರ ಬಳಕೆ, ಅವುಗಳ ಬಗೆಗಿನ ನಂಬಿಕೆ, ಆಚರಣೆ, ವಿಧಿ ನಿಷೇಧ ಇತ್ಯಾದಿ ಬಹಳ ಉಪಯುಕ್ತ ಮಾಹಿತಿಯನ್ನು ದಾಖಲಿಸಿದ್ದಾರೆ.

ಮುದ್ದೆಕಂಬಾರರ ರಾಜಕೀಯ ಜೀವನವನ್ನು ಅಧ್ಯಾಯ ಏಳರಲ್ಲಿ ಬಹಳ ಸಂಕ್ಷಿಪ್ತವಾಗಿ ಕೇವಲ ಮೂರೇ ಪುಟದಲ್ಲಿ ನೀಡಿದ್ದಾರೆ. ಇದು ಸಹಜವೂ ಆಗಿದೆ. ಏಕೆಂದರೆ ಕೇವಲ ದುಡಿಮೆಯ ಬದುಕನ್ನು ಕಂಡ ಇವರಿಗೆ ರಾಜಕೀಯ ಕ್ಷೇತ್ರದಲ್ಲಿ ಪಾಲ್ಗೊಳ್ಳುವಷ್ಟು ಸಮಯವಾದರೂ ಎಲ್ಲಿದೆ? ಆದರೆ ರಾಜಕೀಯ ಮೀಸಲಾತಿ ಅನ್ವಯ ಮುದ್ದೆ ಕಂಬಾರ ರಲ್ಲೂ ಕೆಲವರು ಗ್ರಾಮ ಪಂಚಾಯ್ತಿಯ ಅಧ್ಯಕ್ಷ, ಉಪಾಧ್ಯಕ್ಷರಾಗಿದ್ದರು ಹಾಗೂ ಸಹಕಾರಿ

ಸಂಘ, ಎಪಿಎಂಸಿ ಸದಸ್ಯರು ಆಗಿರುವುದನ್ನು ದಾಖಲಿಸುತ್ತಾರೆ. ಬಡತನ, ಅನಕ್ಷರತೆ, ಕಡಿಮೆ ಜನಸಂಖ್ಯೆ ಇರುವ ಇವರು ರಾಜಕೀಯ ಕ್ಷೇತ್ರದಲ್ಲಿ ರಾಜ್ಯ ಅಥವಾ ರಾಷ್ಟ್ರಮಟ್ಟ ದಲ್ಲಿ ಅಲ್ಲ ತಾಲೂಕು ಮತ್ತು ಜಿಲ್ಲಾ ಮಟ್ಟಕ್ಕೇರುವುದು ಅಸಾಧ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಧ್ಯಾಯ ಎಂಟು ಮುದ್ದೆಕಂಬಾರರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕುರಿತದ್ದಾಗಿದೆ. ಇವರ ಬಗ್ಗೆ ಇರುವ ಪ್ರಾಚೀನ ದಾಖಲೆಯನ್ನು ಪರಾಮರ್ಶಿಸಿ ಅವರ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಇಂದಿನ ಸ್ಥಿತಿಗೆ ಹೋಲಿಸಿ ಆಗಿರುವ ಬದಲಾವಣೆಯನ್ನು ಚಿತ್ರಿಸಿದ್ದಾರೆ. ಬೇರೆ ಕಸುಬು ಮಾಡುವವರ ಜೊತೆ ಇವರು ಯಾವ ರೀತಿಯ ಸಂಬಂಧವನ್ನು ಹೊಂದಿದ್ದಾರೆ ಹಾಗೂ ಆಧುನಿಕ ಜಗತ್ತಿನಲ್ಲಿ ತಮ್ಮ ಉಳಿವಿಗಾಗಿ ಅವರು ಹೋರಾಟ ಮಾಡಬೇಕಾಗಿದೆ. ಆದರೂ ಅವರ ಬದುಕು ಅತ್ಯಂತ ಶೋಚನೀಯವಾದುದು ಮುಂದೊಂದು ದಿನ ಮುದ್ದೆಕಂಬಾರರ ಕಸುಬೇ ಸಮಾಜದಿಂದ ಕಾಣೆಯಾಗುವ ಅಪಾಯವಿದೆ ಎಂಬ ಅಭಿಪ್ರಾಯ ಸಹಜವಾಗಿದೆ.

ಸಮಾರೋಪ ಮತ್ತು ಅನುಬಂಧಗಳು ಎಂಬುದು ಒಂಬತ್ತನೇ ಅಧ್ಯಾಯ. ಒಂದೊಂದು ಅಧ್ಯಾಯದಲ್ಲಿ ಯಾವ ಅಂಶವನ್ನು ಕುರಿತು ಚರ್ಚಿಸಲಾಗಿದೆ ಎಂಬುದೇ ಸಮಾರೋಪದ ಭಾಗ. ಅನುಬಂಧ ೧ರಲ್ಲಿ ಒಂದಿಷ್ಟು ಕಥೆ ಮತ್ತು ಹಾಡುಗಳ ಸಂಗ್ರಹವಿದೆ, ೨ರಲ್ಲಿ ರೇಖಾಚಿತ್ರ, ನಕ್ಷೆ, ಛಾಯಾಚಿತ್ರಗಳನ್ನು ಒದಗಿಸಿದ್ದಾರೆ. ಮುದ್ದೆಕಂಬಾರರು ಬಳಸುವ ಎಲ್ಲಾ ಉಪಕರಣಗಳಿಗೆ ರೇಖಾಚಿತ್ರಗಳು ಬಹಳ ಉಪಯುಕ್ತವಾಗಿದೆ. ಕರ್ತೃಗಳ ವಿವರ ಹಾಗೂ ಪರಾಮರ್ಶನ ಗ್ರಂಥಗಳ ವಿವರ ಕ್ರಮವಾಗಿ ಅನುಬಂಧ ಮೂರು ಮತ್ತು ನಾಲ್ಕರಲ್ಲಿ ನೀಡಲಾಗಿದೆ.

ಅತ್ಯಂತ ನಿರ್ಲಕ್ಷಿತ ಸಮುದಾಯವನ್ನು ಕುರಿತು ಅಧ್ಯಯನ ಕೈಗೊಳ್ಳುವುದರ ಮೂಲಕ ಒಂದು ಪ್ರಾಚೀನ ಕಸುಬಿನ ಹುಟ್ಟು, ಉಗಮ ಬೆಳವಣಿಗೆ ಹಾಗೂ ಅದರ ಅವಸಾನದ ಸ್ಥಿತಿಯನ್ನು ಪರಿಚಯಿಸುವುದೇ ಅಲ್ಲದೆ ಒಂದು ಸಮುದಾಯ ಹೇಗೆ ಈ ಎಲ್ಲ ಸ್ಥಿತಿಯನ್ನು ಮೀರಿ ಬದುಕನ್ನು ಕಟ್ಟಿಕೊಳ್ಳಲು ನಿರಂತರ ಹೋರಾಡುತ್ತಿರುವುದನ್ನು ಈ ಕೃತಿಯಲ್ಲಿ ಚಿತ್ರಿಸಿದ್ದಾರೆ. ಈ ಸಮುದಾಯವನ್ನು ಕುರಿತು ಹೆಚ್ಚಿನ ಅಧ್ಯಯನ ನಡೆಸುವವರಿಗೆ ಈ ಕೃತಿ ಉಪಯುಕ್ತವಾಗಬಲ್ಲದು.

ಕೃತಿ ಪರಿಚಯ : ಕೇಶವನ್ ಪ್ರಸಾದ್ ಕೆ ಮರಟ್ಟಿ

೧೦

ವಿಭಾಗದ ಚಟುವಟಿಕೆಗಳು

ಡಾ ಕೆ ಎಂ ಮೇತ್ರಿ

ಬುಡಕಟ್ಟು ಅಧ್ಯಯನ ವಿಭಾಗವು ಸಂಶೋಧನೆ, ತರಬೇತಿ, ವಿಚಾರ ಸಂಕಿರಣ, ಕಮ್ಮಟ ಮತ್ತು ಪ್ರಕಟಣೆಗಳನ್ನು ನಿಯಮಿತವಾಗಿ ಮಾಡುವುದು. ಇವುಗಳ ವಿವರ ಹೀಗಿರುವುದು.

ಅ ಸಂಶೋಧನೆ

ಅ.೧ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ, ನವ ದೆಹಲಿ ಪ್ರಾಯೋಜಿತ ಕಾರ್ಯಕ್ರಮಗಳು

ಅ.೧.೧ ಯುಜಿಸಿ - ಸ್ಯಾಪ್ ಕಾರ್ಯಕ್ರಮ

೧ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ, ನವ ದೆಹಲಿ ಪ್ರಾಯೋಜಿತ ವಿಶೇಷ ನೆರವಿನ ಕಾರ್ಯಕ್ರಮ (Special Assistance Programme) ಕ್ಕೆ ದಿನಾಂಕ ೧.೪.೨೦೦೪ ರಿಂದ ೩೧.೩.೨೦೦೯ ರ ವರೆಗೆ AN EXTENSIVE STUDY AND EVALUATION OF TRIBAL SET UP IN KARNATAKA

Thrust Areas:

i) Tribal Studies; The Socio- economic studies of Tribals

ii) Sociology of Tribals, Tribals in Transition

iii) Tradition and Modernity of Tribals ವಿಷಯ ಕುರಿತು ಸಂಶೋಧನೆ ಕೈಗೊಳ್ಳಲು ದಿನಾಂಕ ೮.೧೧.೨೦೦೪ ರಂದು ಅನುಮತಿ ದೊರೆಯಿತು.

ಈ ಕಾರ್ಯಕ್ರಮದ ಅಡಿಯಲ್ಲಿ ಅಧ್ಯಯನ ಕೈಗೊಳ್ಳಲು ಕರ್ನಾಟಕ ರಾಜ್ಯದ ೫೦ ಬುಡಕಟ್ಟುಗಳನ್ನು ವಿಭಾಗದ ಸದಸ್ಯರಲ್ಲಿ ಹೀಗೆ ಹಂಚಿಕೆಯಾದವು.

೧. ಡಾ ಹಿ ಚಿ ಬೋರಲಿಂಗಯ್ಯ, ಪ್ರಾಧ್ಯಾಪಕರು

ಕ್ರ ಸಂ	ಬುಡಕಟ್ಟಿನ ಹೆಸರು
೧೨	ಹಸಲರು
೨೧	ಕೊಕ್ನ, ಕೊಕ್ನಿ, ಕುಕ್ನ

೨೪ ಕೊರಗ

೩೪ ಮಲೇರು

೩೫ ಮರಾಠ (ಕೊಡಗು ಜಿಲ್ಲೆಯಲ್ಲಿ)

೩೬ ಮರಾಟಿ (ದಕ್ಷಿಣಕನ್ನಡ,ಉಡುಪಿ ಜಿಲ್ಲೆಗಳಲ್ಲಿ)

೩೮ ನೈಕ್ಡ, ನಾಯಕ, ಚೊಲ್ಲಿವಾಲಾ ನಾಯಕ, ಕಪಾಡಿಯ ನಾಯಕ, ಮೋಟ ನಾಯಕ, ನಾನಾ ನಾಯಕ, ನೈಯ್ಕ್, ನಾಯಕ್, ಬೇಡ, ಬೇಡರ್ ಮತ್ತು ವಾಲ್ಮೀಕಿ

೨. ಡಾ ಕೆ ಎಂ ಮೇತ್ರಿ, ಪ್ರಾಧ್ಯಾಪಕರು

೦೨ ಬಾರ್ಡಾ

೦೩ ಬಾವಚ, ಬಾಮ್ಚ

೦೪ ಭಿಲ್, ಭಿಲ್ ಗರಾಸಿಯ, ಧೋಳಿ ಭಿಲ್,ಡುಂಗ್ರಿ ಭಿಲ್, ಡುಂಗ್ರಿ ಗರಾಸಿಯ, ಮೇವಾಸಿ ಭಿಲ್, ರಾವಲ್ ಭಿಲ್, ತಡ್ವಿ ಭಿಲ್, ಭಾಗಾಲಿಯ, ಭಿಲಾಲ, ಪಾವರಾ, ವಾಸವ, ವಾಸವೆ

೦೫ ಚೆಂಚು, ಚೆಂಚವಾರ್

೦೬ ಚೋಧರಾ

೦೭ ಡುಬ್ಲ,ತಲವಿಯ, ಹಲ್ಪತಿ

೦೮ ಗಮಿಟ್,ಗಾಮ್ಟ, ಗವಿಟ್, ಮಾವ್ಚಿ, ಪಡ್ವಿ, ವಾಳ್ವಿ

೦೯ ಗೊಂಡ್, ನಾಯ್ಕಪೋಡ್, ರಾಜ್‌ಗೊಂಡ್

೨೨ ಕೋಳಿ ಢೋರ್,ಟೋಕರೆ ಕೋಳಿ,ಕೊಲ್ಚಾ, ಕೊಲ್ಘ

೨೩ ಕೊಂಡ ಕಾಪುಸ್

೨೬ ಕೋಯ, ಭೀನೆ ಕೋಯ, ರಾಜ್‌ಕೋಯ

೩. ಡಾ ಕೇಶವನ್ ಪ್ರಸಾದ್ ಕೆ ಮರಟ್ಟಿ, ಪ್ರಾಧ್ಯಾಪಕರು

೧೮ ಕಣಿಯನ್, ಕಣ್ಯನ್ (ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನಲ್ಲಿ)

೨೫ ಕೋಟ

೩೭ ಮೇದ, ಮೇದಾರಿ, ಗೌರಿಗ, ಬುರುಡ

೪೪ ಶೋಲಗ

೪೫ ಸೋಲಿಗರು

೪೬ ತೋಡ

೪. ಡಾ ಚಲುವರಾಜು, ಹಿರಿಯ ಶ್ರೇಣಿ ಅಧ್ಯಾಪಕರು

೧೧	ಹಕ್ಕಿಪಿಕ್ಕಿ
೧೫	ಜೇನು ಕುರುಬ
೧೬	ಕಾಡು ಕುರುಬ
೨೦	ಕಾಟ್ಟುನಾಯಕನ್
೨೮	ಕುರುಬ (ಕೊಡಗು ಜಿಲ್ಲೆಯಲ್ಲಿ)
೨೯	ಕುರುಮನ್ಸ್
೪೧	ಪಾರ್ಧಿ,ಅಡ್ವಿಚಿಂಚೇರ್,ಫಾನ್ಸೆಪಾರ್ಧಿ,ಹರಣಶಿಕಾರಿ

೫. ಡಾ ಗಂಗಾಧರ ದೈವಜ್ಞ, ಹಿರಿಯ ಶ್ರೇಣಿ ಅಧ್ಯಾಪಕರು

೦೧	ಅಡಿಯನ್
೧೭	ಕಮ್ಮಾರ (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮತ್ತು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನಲ್ಲಿ)
೧೯	ಕಥೋಡಿ, ಕಟ್‌ಕಾರಿ, ಧೋರ್ ಕಥೋಡಿ, ಧೋರ್ ಕಟ್‌ಕಾರಿ, ಸೋನ್ ಕಥೋಡಿ, ಸೋನ್ ಕಟ್‌ಕಾರಿ
೩೯	ಪಳ್ಳಿಯನ್
೪೦	ಪಣಿಯನ್
೪೨	ಪಟೇಲಿಯ
೪೩	ರಾಠವಾ
೪೭	ವರ್ಲಿ
೪೮	ವಿಟೋಲಿಯ, ಕೊತ್ವಾಲಿಯ, ಬರೋಡಿಯ
೪೯	ಯೆರವ

೬. ಶ್ರೀ ಎ ಎಸ್ ಪ್ರಭಾಕರ, ಹಿರಿಯ ಶ್ರೇಣಿ ಅಧ್ಯಾಪಕರು

೧೦	ಗೌಡಲು
೧೩	ಇರುಳರ್
೧೪	ಇರುಳಿಗ
೨೭	ಕುಡಿಯ, ಮೆಲಕುಡಿ
೩೦	ಮಹಾ ಮಲಸರ್
೩೧	ಮಲೈಕುಡಿ
೩೨	ಮಲಸರ್

೩೩ ಮಲೆಯೆಕಂಡಿ

೫೦ ಸಿದ್ದಿ (ಉತ್ತರ ಕನ್ನಡ ಜಿಲ್ಲೆಯಲ್ಲಿ)

೮.೧.೨ ಯುಜಿಸಿ - ಸ್ಯಾಪ್ ಕಮ್ಮಟ

ಈ ಕಾರ್ಯಕ್ರದ ಅಡಿಯಲ್ಲಿ ೨೦೦೫ ರ ಮಾರ್ಚ್ ೧ ಮತ್ತು ೨ ರಂದು ಮೊದಲನೆಯ ಕಮ್ಮಟವನ್ನು ಗಿರಿಸೀಮೆಯಲ್ಲಿ ನಡೆಸಲಾಯಿತು. ಇದರಲ್ಲಿ ರಾಜ್ಯದ ಬುಡಕಟ್ಟುಗಳ ಸಾಮಾಜಿಕ ಕಾರ್ಯಕರ್ತರು, ಚಿಂತಕರು ಭಾಗವಹಿಸಿದರು. ವಿಷಯ ತಜ್ಞರಾಗಿ ಹೈದರಾಬಾದಿನ ಕೇಂದ್ರೀಯ ವಿಶ್ವವಿದ್ಯಾಲಯದ ಮಾನವಶಾಸ್ತ್ರದ ಪ್ರಾಧ್ಯಾಪಕರಾದ ಡಾ ಆರ್ ಶಿವಪ್ರಸಾದ್ ಅವರು ಸಕ್ರೀಯವಾಗಿ ಭಾಗವಹಿಸಿ ಮಾರ್ಗದರ್ಶನ ನೀಡಿದರು.

೮.೨ ಬುಡಕಟ್ಟು ಸಂಶೋಧನ ಸಂಸ್ಥೆ ಪ್ರಾಯೋಜಿತ ಯೋಜನೆಗಳು

ಕರ್ನಾಟಕ ಸರಕಾರದ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ಬುಡಕಟ್ಟು ಸಂಶೋಧನ ಸಂಸ್ಥೆಯು ಈ ಕೆಳಗಿನ ಸಂಶೋಧನೆ ಮತ್ತು ತರಬೇತಿ ಯೋಜನೆಗಳಿಗೆ ಮಂಜೂರಾತಿ ನೀಡಿದೆ.

೮.೨.೧ ಕರ್ನಾಟಕ ಬುಡಕಟ್ಟುಗಳ ಶಾಸ್ತ್ರೀಯ ಅಧ್ಯಯನ

ಈ ಯೋಜನೆಗೆ ನಿರ್ದೇಶನಾಲಯವು ದಿನಾಂಕ ೯.೧.೨೦೦೬ ರಂದು ಮಂಜೂರಾತಿ ನೀಡಿದೆ. ಈ ಯೋಜನೆಯಡಿಯಲ್ಲಿ ಇದರ ನಿರ್ದೇಶಕರಾದ ಡಾ ಕೆ ಎಂ ಮೇತ್ರಿ ಅವರು ಈ ಕೆಳಗಿನ ಬುಡಕಟ್ಟುಗಳನ್ನು ಅಧ್ಯಯನ ಕೈಗೊಂಡಿದ್ದಾರೆ.

೦೧ ಚೋಧರಾ

೦೨ ಕೊಕ್ನ, ಕೊಕ್ನಿ, ಕುಕ್ನ

೦೩ ಕೊರಗ

೦೪ ಕೋಟ

೦೫ ಕುಡಿಯ, ಮೆಲಕುಡಿ

೦೬ ಮಹಾ ಮಲಸರ್
